

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 3 ಭಾನುವಾರ 2022

ಸಂಪುಟ: 43 | ಸಂಚಿಕೆ: 78 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4







ಪೌರಕಾರ್ಮಿಕರ ಸಮಸ್ಯೆಗೆ ಮಾನವೀಯ ಪರಿಹಾರ

• ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ • ಇವರಿಗೆ ಖಾಯಂ ಸುರಕ್ಷತೆ ಒದಗಿಸಲು ಸರ್ಕಾರ ಬದ್ಧ • ಸಮಸ್ಯೆ ಪರಿಹಾರಕ್ಕೆ ಪೌರಕಾರ್ಮಿಕರು, ಅಧಿಕಾರಿಗಳ ಜಂಟಿ ಸಮಿತಿ ರಚನೆ



ಬೆಂಗಳೂರು, ಜು.2(ಕೆಎಂಶಿ)– ಪೌರಕಾರ್ಮಿಕರ ಸಮಸ್ಯೆಗಳ ಬಗ್ಗೆ ಸಹಾನುಭೂತಿ ಹಾಗೂ ಮಾನವೀಯತೆಯಿಂದ ಕ್ರಮ ತೆಗೆದುಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ಅವರು ಇಂದು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಲು ತೆಲಂಗಾಣಕ್ಕೆ ತೆರಳುವ ಮುನ್ನ ತಮ್ಮ ನಿವಾಸದ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದರು.

ನೇರ ಪಾವತಿ ವ್ಯವಸ್ಥೆಯಡಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂಗೊಳಿಸಲು ತಾತ್ವಿಕವಾಗಿ ಸರ್ಕಾರ ಒಪ್ಪಿಕೊಂಡಿದೆ. ಕಾನೂನಾತ್ಮಕವಾಗಿ ಹಾಗೂ ತಾಂತ್ರಿಕವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಪೌರಕಾರ್ಮಿಕರ ಹಾಗೂ ಅಧಿಕಾರಿಗಳ ಜಂಟಿ ಸಮಿತಿಯನ್ನು ರಚಿಸಲಾಗಿದೆ.



ಸಮಿತಿ ಶಿಫಾರಸ್ಸು ಮಾಡಿದ ಕೂಡಲೇ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಪೌರಕಾರ್ಮಿಕರ ಸಂರಕ್ಷಣೆಗೆ ಆರೋಗ್ಯ, ಶಿಕ್ಷಣ ಸೇರಿದಂತೆ ಎಲ್ಲ ದೃಷ್ಟಿಯಿಂದ ಖಾಯಂ ಆಗಿ ಸುರಕ್ಷೆ ನೀಡಲು ಒಪ್ಪಲಾಗಿದೆ. ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ಚರ್ಚೆ ಮಾಡಲಾಗುವುದು. ಸೌಹಾರ್ದತೆಯಿಂದ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದರು. ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಲು ತೆಲಂಗಾಣಕ್ಕೆ ತೆರಳುತ್ತಿದ್ದು, ನಾಳೆ ಸಂಜೆ ಹಿಂತಿರುಗುವುದಾಗಿ ಸಿಎಂ ತಿಳಿಸಿದರು. ಕಾರ್ಯಕಾರಿಣಿ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಸೇರಿದಂತೆ ಇನ್ನು ಅನೇಕ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ದಾವಣಗೆರೆ ಸಿದ್ದರಾಮೋತ್ಸವದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಭಾಗಿ

ಬಿಜೆಪಿ, ಕಾಂಗ್ರೆಸ್‌ನಲ್ಲಿ ಅಪಸ್ವರ



ಬೆಂಗಳೂರು, ಜು.2(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ದಾವಣಗೆರೆಯಲ್ಲಿ ನಡೆಸುತ್ತಿರುವ ಸಮಾವೇಶದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾಗಿಯಾಗಲಿದ್ದಾರೆ.

ಸಿದ್ದರಾಮಯ್ಯನವರ 75ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅವರ ಬೆಂಬಲಿಗರು ದಾವಣಗೆರೆಯಲ್ಲಿ ಆ.3 ರಂದು ಬೃಹತ್ ಸಮಾವೇಶ ಹಮ್ಮಿಕೊಂಡಿದ್ದಾರೆ. ಹುಟ್ಟುಹಬ್ಬದ ಸಮಾವೇಶಕ್ಕೆ ಯಡಿಯೂರಪ್ಪನವರನ್ನು ಸಿದ್ದರಾಮಯ್ಯನವರೇ ಆಹ್ವಾನಿಸಿದ್ದಾರೆ ▶ 8ನೇ ಪುಟಕ್ಕೆ

ಹುಲಿ ದಾಳಿಯಿಂದ ಇಬ್ಬರಿಗೆ ತೀವ್ರ ಗಾಯ


ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಘಟನೆ



ಶೇಖರ್



ಗವಿಯಪ್ಪ



ಬಾಳೆತೋಟದಲ್ಲಿ ಅಡಗಿರುವ ಹುಲಿರಾಯ

ಗುಂಡ್ಲುಪೇಟೆ, ಜು.2(ಸೋಮ್.ಜಿ)–ಹುಲಿ ದಾಳಿಗೆ ಇಬ್ಬರು ರೈತರು ಗಾಯಗೊಂಡಿದ್ದು, ಹಸುವೊಂದು ಬಲಿಯಾದ ಘಟನೆ ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಗೋಪಾಲಪುರ ಗ್ರಾಮದ ಗವಿಯಪ್ಪ(45), ಶೇಖರ್(40) ಗಾಯಗೊಂಡವರು.

ಬಂಡೀಪುರ ಹುಲಿಯೋಜನೆಯ ಗೋಪಾಲಸ್ವಾಮಿಬೆಟ್ಟ ವಲಯದ ಕಾಡಂಚಿನಲ್ಲಿರುವ ಲಕ್ಕಿಪುರ ಸಮೀಪದ ತಮ್ಮ ಜಮೀನಿನಲ್ಲಿ ಗವಿಯಪ್ಪ ಕೆಲಸ ಮಾಡುತ್ತಿದ್ದರು. ಈ ವೇಳೆ ಪಕ್ಕದ ಚನ್ನಪ್ಪ ಅವರ ಜಮೀನಿನಲ್ಲಿ ಹಸುವಿನ ಮೇಲೆ ಹುಲಿ ದಾಳಿ ನಡೆಸಿ, ಬಲಿ ಪಡೆದಿದೆ. ಹಸುವಿನ ಚೀರಾಟ ಕೇಳಿ ಸ್ಥಳಕ್ಕೆ ಹೋದ ಗವಿಯಪ್ಪನವರ ಮೇಲೂ ಹುಲಿ ದಾಳಿ ನಡೆಸಿದೆ. ತಪ್ಪಿಸಿಕೊಳ್ಳಲು ಗವಿಯಪ್ಪ ಮಚ್ಚಿನಿಂದ ಪ್ರತಿದಾಳಿ ನಡೆಸಿ ಜೋರಾಗಿ ಕೂಗಿಕೊಂಡಿದ್ದಾರೆ. ಅಕ್ಕಪಕ್ಕದ ಜಮೀನಿನವರು ಸ್ಥಳಕ್ಕೆ ಬರುತ್ತಿದ್ದಂತೆ ಹುಲಿ ಗವಿಯಪ್ಪನವರ ಬಾಳೆ ತೋಟದೊಳಗೆ ನುಸುಳಿದೆ. ದಾಳಿಯಿಂದ ಗವಿಯಪ್ಪನವರ ಕಣ್ಣು ಹಾಗೂ ತಲೆಯ ಭಾಗಕ್ಕೆ ತೀವ್ರ ಗಾಯವಾಗಿದೆ. ವಿಷಯ ತಿಳಿದು ಗ್ರಾಮಸ್ಥರು ಸ್ಥಳದಲ್ಲಿ ಜಮಾಯಿಸಿದ್ದರು. ಈ ವೇಳೆ ಮೊಬೈಲ್‌ನಲ್ಲಿ ದೃಶ್ಯ ಸೆರೆಹಿಡಿಯುತ್ತಿದ್ದ ▶ 8ನೇ ಪುಟಕ್ಕೆ

ಪೌರಕಾರ್ಮಿಕರ ಬೇಡಿಕೆಗಳ ಸಂಬಂಧ ಸರ್ಕಾರದ ಆದೇಶಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ ಆಗ್ರಹ



ಪ್ರತಿಭಟನಾ ನಿರತ ಪೌರಕಾರ್ಮಿಕರಿಗೆ ಬೆಂಬಲ

ಬೆಂಗಳೂರು, ಜು.2(ಕೆಎಂಶಿ)– ಪೌರಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವ ವಿಚಾರದಲ್ಲಿ ಸರ್ಕಾರ ಬಾಯಿ ಮಾತಿನ ಭರವಸೆ ನೀಡಿದರೆ ಸಾಲದು, ಬೇಡಿಕೆಗಳ ಸಂಬಂಧ ಅಧಿಕೃತ ಆದೇಶ ಹೊರಡಿಸಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪೌರಕಾರ್ಮಿಕರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಭಾಗವಹಿಸಿ ಮುಷ್ಕರಕ್ಕೆ ತಮ್ಮ ಬೆಂಬಲ ಸೂಚಿಸಿ, ಸಿದ್ದರಾಮಯ್ಯ ಮಾತನಾಡಿದರು. ತಾವು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪೌರಕಾರ್ಮಿಕರ ಹಲವಾರು ಬೇಡಿಕೆಗಳನ್ನು ಸರ್ಕಾರ ಈಡೇರಿಸಿತ್ತು. ವೇತನ ಹೆಚ್ಚಳ ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸಿತ್ತು. ಆದರೆ, ಇಂದಿನ ಬಿಜೆಪಿ ಸರ್ಕಾರ ಪೌರಕಾರ್ಮಿಕರ ಹಿತ ಕಾಯುವಲ್ಲಿ ವಿಫಲವಾಗಿದೆ ಎಂದರು. ಪೌರಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವುದಾಗಿ ▶ 8ನೇ ಪುಟಕ್ಕೆ





ಮತ್ತೇ ಮತ್ತೆ ನಡುಗುತ್ತಿದೆ ಕೊಡಗು

ಚೆಂಬು ಗ್ರಾಮದ ವ್ಯಾಪ್ತಿಯಲ್ಲಿ ಒಂದೇ ದಿನ ಮೂರು ಬಾರಿ ಕಂಪನ



ಮಡಿಕೇರಿ,ಜು.2–ಕೊಡಗಿನ ಗಡಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಗ್ರಾಮಗಳ ವ್ಯಾಪ್ತಿಯಲ್ಲಿ ಶನಿವಾರ ಮಧ್ಯಾಹ್ನ ಮತ್ತು ರಾತ್ರಿ ಮತ್ತೇ ಭೂಮಿ ಕಂಪಿಸಿದೆ. ಚೆಂಬು ಗ್ರಾಮದ ವ್ಯಾಪ್ತಿಯಲ್ಲಿ ಒಂದೇ ದಿನ ಮೂರು ಬಾರಿ ಭೂಮಿ ಕಂಪಿಸಿದ್ದು, ಕೊಡುಗು ಜಿಲ್ಲೆಯ ಜನರನ್ನು ಕಂಗೆಡಿಸಿದೆ. ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಕಂಪನವನ್ನು ದೃಢಪಡಿಸಿದ್ದು, ರಿಕ್ಟರ್ ಮಾಪಕದಲ್ಲಿ ದಾಖಲಾಗಿದೆ.

ಬೆಂಗಳೂರಿನ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿಯ ಪ್ರಕಾರ, ಶನಿವಾರ ಮಧ್ಯಾಹ್ನ 1 ಗಂಟೆ 21 ನಿಮಿಷ 50 ಸೆಕೆಂಡ್‌ನಲ್ಲಿ ಸುಳ್ಯ ತಾಲೂಕಿನ ▶ 8ನೇ ಪುಟಕ್ಕೆ

ಈಗಾಗಲೇ ಕೊಡಗಿನ ಗಡಿ ಭಾಗ ಸಹಿತ ವಿವಿಧ ಕಡೆಗಳಲ್ಲಿ ಭೂಮಿ ಕಂಪಿಸಿದ ಅನುಭವ ಆಗಿದೆ. ಭೂಗರ್ಭಶಾಸ್ತ್ರ ವಿಜ್ಞಾನಿಗಳು ಕೂಡ ಈ ಪ್ರದೇಶಗಳಲ್ಲಿ ಅಧ್ಯಯನ ನಡೆಸಿದ್ದಾರೆ. ವಿರಾಜಪೇಟೆ ಮಲೆತಿರಿಕೆ ಬೆಟ್ಟ ಮಡಿಕೇರಿ ಸಮೀಪದ ನಿಶಾನಿಮೊಟ್ಟೆ ಮತ್ತಿತರ ಕಡೆಗಳಲ್ಲಿ 2018ರಲ್ಲಾದ ಭೂ ಕುಸಿತದಿಂದ ಭೂಮಿಯಲ್ಲಿ ಬಿರುಕುಗಳು ಮೂಡಿವೆ. ಕಳೆದ 2 ವರ್ಷಗಳಿಂದ ಈ ಪ್ರದೇಶಗಳಲ್ಲಿ ಯಾವುದೇ ಹಾನಿಯಾಗಿಲ್ಲ. ಹೆಚ್ಚು ಮಳೆಯಾದರೆ ತೊಂದರೆಯಾಗುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ಇಂತಹ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ನಿಗಾ ವಹಿಸುವಂತೆ ಹಾಗೂ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ.



–ಶಾಸಕ ಅಪ್ಪಚ್ಚು ರಂಜನ್



ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆ

• ಅಲ್ಲಲ್ಲಿ ಭೂ ಕುಸಿತ, ಮನೆಗಳಿಗೆ ಹಾನಿ • ರಸ್ತೆಗೆ ಅಡ್ಡಲಾಗಿ ಬಿದ್ದ ಮರಗಳ ತೆರವು • ಸೇತುವೆ ಮೇಲೆ ಹರಿಯುತ್ತಿರುವ ನೀರು • ಹಾರಂಗಿ ಜಲಾಶಯ ಭರ್ತಿ • ಗೃಹೋಪಯೋಗಿ ವಸ್ತುಗಳಿಗೆ ಹಾನಿ





ಮಡಿಕೇರಿ,ಜು.2– ಕೊಡಗು ಜಿಲ್ಲೆಯಲ್ಲಿ ಕಳೆದ 2 ದಿನಗಳಿಂದ ಭಾರೀ ಮಳೆ ಸುರಿಯುತ್ತಿದ್ದು, ಅಲ್ಲಲ್ಲಿ ಭೂ ಕುಸಿತಗಳು ಸಂಭವಿಸಿದ ಬಗ್ಗೆ ವರದಿಯಾಗಿದೆ.

ಸರಣಿ ಭೂ ಕಂಪನಗಳಿಗೆ ಸಾಕ್ಷಿಯಾಗಿರುವ ಚೆಂಬು ಗ್ರಾಮದಲ್ಲಿ ಭೂಕುಸಿತವೂ ಉಂಟಾಗಿದ್ದು, ಶನಿವಾರ ಮುಂಜಾನೆ 3 ಗಂಟೆ ವೇಳೆಗೆ ಮನೆಯೊಂದರ ಮೇಲೆ ಮಣ್ಣು ಕುಸಿದಿದೆ. ರಾತ್ರಿಯಿಡೀ ಎಡೆಬಿಡದೆ ಸುರಿದ ಮಳೆಯಿಂದ ಪೂಜಾರಿಗದ್ದೆ ಗಿರಿಧರ ಎಂಬುವರ ಮನೆಯ ಹಿಂಬದಿಯಲ್ಲಿದ್ದ ಬೆಟ್ಟ ಕುಸಿದು ಸಾಕಷ್ಟು ಹಾನಿಯಾಗಿದೆ. ಮನೆಯ ಗೋಡೆಗಳು ಬಿರುಕು ಬಿಟ್ಟಿದ್ದು, ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಮೂರ್ನಾಲ್ಕು ಬಾರಿ ಭೂಕಂಪನ ಉಂಟಾಗಿದ್ದ ಸ್ಥಳದಲ್ಲಿ ಭೂ ಕುಸಿತವಾಗಿರುವುದು ಜನರ ಆತಂಕಕ್ಕೆ ಕಾರಣವಾಗಿದೆ. ಮಡಿಕೇರಿಯ ಚಾಮುಂಡೇಶ್ವರಿ ನಗರದಲ್ಲಿ ಮನೆಯೊಂದರ ಹಿಂಭಾಗ ಬರೆ ಕುಸಿದು ಬಿದ್ದಿದ್ದು, ಮನೆಗೆ ಅಲ್ಪ ಪ್ರಮಾಣದಲ್ಲಿ ಹಾನಿಯಾಗಿದೆ. ಮಳೆಯಿಂದಾಗಿ ಮಡಿಕೇರಿ– ▶ 8ನೇ ಪುಟಕ್ಕೆ





ಮೈಸೂರಲ್ಲಿ ಮಹಿಳಾ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ

ಡಿಜಿಪಿ (ತರಬೇತಿ) ಡಾ.ಪಿ.ರವೀಂದ್ರನಾಥ್‌ರಿಂದ ಪರೇಡ್ ವಂದನೆ ಸ್ವೀಕಾರ





ಮೈಸೂರು, ಜು.2(ಆರ್‌ಕೆ)– ಮೈಸೂರಿನ ಜ್ಯೋತಿನಗರದ ಡಿಎಆರ್ ಕವಾಯತು ಮೈದಾನದಲ್ಲಿ ಇಂದು ಮಹಿಳಾ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳ ಆಕರ್ಷಕ ನಿರ್ಗಮನ ಪಥಸಂಚಲನ ನಡೆಯಿತು.

ಪೊಲೀಸ್ ತರಬೇತಿ ಶಾಲೆ (ಪಿಟಿಎಸ್)ಯಲ್ಲಿ 2021ರ ನವೆಂಬರ್ 2 ರಿಂದ ಬುನಾದಿ ತರಬೇತಿ ಪಡೆದ 7ನೇ ತಂಡದ 116 ಮಂದಿ ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳು ಪ್ರದರ್ಶಿಸಿದ ನಿರ್ಗಮನ ಪಥಸಂಚಲನ ಪರಿವೀಕ್ಷಿಸಿದ ಡಿಜಿಪಿ (ತರಬೇತಿ) ಡಾ. ಪಿ.ರವೀಂದ್ರನಾಥ್, ಕವಾಯತು ವಂದನೆ ಸ್ವೀಕರಿಸಿದರು. ಪರೇಡ್ ಕಮಾಂಡರ್ ಆರ್. ಪ್ರಿಯಾಂಕ ಅವರ ನೇತೃತ್ವದಲ್ಲಿ ನಡೆದ ಜನರಲ್ ಸೆಲ್ಯೂಟ್, ರಿವ್ಯೂ ಆರ್ಡರ್, ರಾಷ್ಟ್ರ ಹಾಗೂ ಪೊಲೀಸ್ ಧ್ವಜಗಳ ಪ್ರದರ್ಶನ ಪ್ರಜ್ವಾಜ್ಞಾಧಿ ಸ್ವೀಕಾರ ಕಾರ್ಯಕ್ರಮಗಳನ್ನು ಮಹಿಳಾ ಕಾನ್ಸ್‌ಟೇಬಲ್‌ಗಳು ಶಿಸ್ತುಬದ್ಧವಾಗಿ ನಡೆಸುವ ಮೂಲಕ ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ನೆರೆದಿದ್ದವರನ್ನು ನಿಬ್ಬೆರಗಾಗಿಸಿದರು.

ತರಬೇತಿ ಅವಧಿಯಲ್ಲಿ ಒಳಾಂಗಣದಲ್ಲಿ 767.50 ಹಾಗೂ ಹೊರಾಂಗಣ ವಿಭಾಗದಲ್ಲಿ 261 ಸೇರಿ ಒಟ್ಟು 1,028.50 ಅಂಕಗಳನ್ನು ಗಳಿಸಿದ ಆರ್. ಪ್ರಿಯಾಂಕ ಅವರಿಗೆ ಡಾ.ರವೀಂದ್ರನಾಥ್, ಸರ್ವೋತ್ತಮ ಪ್ರಶಸ್ತಿ ನೀಡಿ ಗೌರವಿಸಿದರು. ಅದೇ ರೀತಿ ಒಳಾಂಗಣದಲ್ಲಿ ಹೆಚ್.ಎಸ್. ಸೌಜನ್ಯ, ಪ್ರೇಮ, ಉದಯ್ ನಾಯಕ್ ಹೊರಾಂಗಣದಲ್ಲಿ ಶ್ರೀದೇವಿ, ದೀಪಾ, ಈರಣ್ಣ, ಕಂಬಾರ, ಪ್ರೇಮ, ಫೈರಿಂಗ್‌ನಲ್ಲಿ ಡಿ. ಮಂಜುಳಾ, ಎಂ.ಎನ್. ಭಾರ್ಗವಿ ಹಾಗೂ ಕೆ.ಎಸ್.ಅರ್ಚನ ಅವರು ಡಿಜಿಪಿ ಅವರಿಂದ ಪ್ರಶಸ್ತಿಗಳನ್ನು ಸ್ವೀಕರಿಸಿದರು.

ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ) ನಿರ್ದೇಶಕ ಅನುಪಮ್ ಅಗರ್‌ವಾಲ್, ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲ ಡಾ. ಹೆಚ್.ಪಿ. ಶೇಖರ್, ಉಪ ಪ್ರಾಂಶುಪಾಲ ಶಂಕರೇಗೌಡ ನಿರ್ಗಮನ ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆಕಾಶವಾಣಿ ನಿರೂಪಕ ಮಂಜುನಾಥ ಹಾಗೂ ವರುಣಾ ಠಾಣೆ ಸಬ್ ಇನ್ಸ್‌ಪೆಕ್ಟರ್ ಲಕ್ಷ್ಮೀ ಅವರು ಪಥ ಸಂಚಲನ ಕಾರ್ಯಕ್ರಮದಲ್ಲಿ ನಿರೂಪಣೆ ಮಾಡಿದರು. ಪೊಲೀಸ್ ಇಲಾಖೆಯ ನಾಗರಿಕ ಪೊಲೀಸ್ ಠಾಣೆ, ರೈಲ್ವೆ ಪೊಲೀಸ್ ಠಾಣೆ ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್)ಗಳಿಗೆ ನೇಮಕಗೊಂಡಿರುವ 116 ಮಹಿಳಾ ಕಾನ್ಸ್‌ಟೇಬಲ್‌ಗಳ ಪೈಕಿ 7 ಮಂದಿ ನಿಗದಿತ ಪಿಯುಸಿ ವಿದ್ಯಾರ್ಹತೆ ಹೊಂದಿರುವವರಾಗಿದ್ದು, ಉಳಿದವರು ಬಿಇ, ಎಂ.ಟೆಕ್, ಎಂಬಿಎ ಸೇರಿದಂತೆ ಉನ್ನತ ವ್ಯಾಸಂಗ ಪೂರೈಸಿದ್ದಾರೆ.

ಪ್ರಶಿಕ್ಷಣಾರ್ಥಿಗಳು ಪ್ರದರ್ಶಿಸಿದ ಪಥ ಸಂಚಲನವನ್ನು ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಅವರ ಪೋಷಕರು, ಸಂಬಂಧಿಕರು ವೀಕ್ಷಿಸಿ ಸಂತಸಪಟ್ಟರು. ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಎಸ್ಪಿ ಆರ್. ಚೇತನ್, ರಾಜ್ಯ ಗುಪ್ತ ವಾರ್ತಾ ವಿಭಾಗದ ಎಸ್ಪಿ ಎಸ್. ಮುತ್ತುರಾಜ್, ಕೆಎಸ್‌ಆರ್‌ಪಿ 5ನೇ ಪಡೆ ಕಮಾಂಡೆಂಟ್ ನಾಗರಾಜ್ ಸೇರಿದಂತೆ ಹಲವು ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪೊಲೀಸ್ ಠಾಣೆಗಳು ನ್ಯಾಯ ದೇಗುಲಗಳಿದ್ದಂತೆ

ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ತರಬೇತಿ ವಿಭಾಗದ ಡಿಜಿಪಿ ಡಾ.ಪಿ.ರವೀಂದ್ರನಾಥ್ ಕಿವಿಮಾತು

ಮೈಸೂರು, ಜು. 2(ಆರ್‌ಕೆ)– ಪೊಲೀಸ್ ಠಾಣೆಗಳು ನ್ಯಾಯ ದೇಗುಲಗಳಿದ್ದಂತೆ ಎಂದು ತರಬೇತಿ ವಿಭಾಗದ ಪೊಲೀಸ್ ಮಹಾನಿರ್ದೇಶಕ (ತರಬೇತಿ) ಡಾ.ಪಿ. ರವೀಂದ್ರನಾಥ್ ಇಂದಿಲ್ಲಿ ಅಭಿಪ್ರಾಯಪಟ್ಟರು.

ಮೈಸೂರಿನ ಜ್ಯೋತಿನಗರದಲ್ಲಿರುವ ಡಿಎಆರ್ ಕವಾಯತು ಮೈದಾನದಲ್ಲಿ ನಡೆದ ಪೊಲೀಸ್ ತರಬೇತಿ ಶಾಲೆಯ 7ನೇ ತಂಡದ ಮಹಿಳಾ ಕಾನ್ಸ್‌ಟೇಬಲ್‌ಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ವಂದನೆ ಸ್ವೀಕರಿಸಿ ಮಾತನಾಡಿದ ಅವರು, ದೈಹಿಕ ತೊಂದರೆ ಇರುವವರು ಆಸ್ಪತ್ರೆಗಳಿಗೆ ಹೋಗುತ್ತಾರೆ, ಮಾನಸಿಕ ಹಾಗೂ ಭೌತಿಕವಾಗಿ ತೊಂದರೆಗೊಳಗಾದವರು ಪೊಲೀಸ್ ಠಾಣೆಗಳಿಗೆ ಬರುತ್ತಾರೆ. ನೊಂದವರಿಗೆ ನ್ಯಾಯ ಒದಗಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಹಾಗಾಗಿ ಪೊಲೀಸ್ ಠಾಣೆಗಳು ನ್ಯಾಯ ದೇಗುಲಗಳ ಮೊದಲ ಹೆಜ್ಜೆ ಎಂಬುದನ್ನು ಮರೆಯಬೇಡಿ ಎಂದು ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಕಿವಿಮಾತು ಹೇಳಿದರು. ಬುನಾದಿ ತರಬೇತಿಯಲ್ಲಿ ಕಲಿತ ವಿದ್ಯೆಯನ್ನು ತಮ್ಮ ಪೊಲೀಸ್ ಇಲಾಖೆಯ 30 ವರ್ಷಗಳ ಅವಧಿಯಲ್ಲಿ ಬಳಸಿ ನೊಂದವರಿಗೆ ನ್ಯಾಯ ಕೊಡಿಸುವ ಮೂಲಕ ಸೇವೆಯನ್ನು ಸಾರ್ಥಕಗೊಳಿಸಿ. ಪಥಸಂಚಲನದಲ್ಲಿ ತೋರಿದ ಶಿಸ್ತು, ಉತ್ಸಾಹ, ಸ್ಫೂರ್ತಿ ಕರ್ತವ್ಯದಲ್ಲೂ ಪ್ರದರ್ಶಿಸಬೇಕೆಂದು ಅವರು ಇದೇ ಸಂದರ್ಭ ಸಲಹೆ ನೀಡಿದರು.

ಕರ್ನಾಟಕ ಪೊಲೀಸ್ ಕಾಯ್ದೆ ಹಾಗೂ ಸಿಆರ್‌ಪಿಸಿಯಲ್ಲಿ ಒಬ್ಬ ಕಾನ್ಸ್‌ಟೇಬಲ್ ಸಹ ಪೊಲೀಸ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಲಾಗಿದೆ. ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ಅನುಪಸ್ಥಿತಿಯಲ್ಲಿ ಹೆಡ್ ಕಾನ್ಸ್‌ಟೇಬಲ್ ಸ್ಟೇಷನ್ ಅಧಿಕಾರಿಯಾಗಿ ಜವಾಬ್ದಾರಿ ನಿರ್ವಹಿಸಬಹುದು. ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಪಿಯುಸಿ ಕನಿಷ್ಠ ವಿದ್ಯಾರ್ಹತೆಯಾಗಿದ್ದರೂ, ಇತ್ತೀಚಿನ ದಿನಗಳಲ್ಲಿ ಬಿಇ, ಇನ್ನಿತರ ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ಉನ್ನತ ವ್ಯಾಸಂಗ ಮಾಡಿದವರೂ ಸಹ ಪೊಲೀಸ್ ಇಲಾಖೆಗೆ ಬರುತ್ತಿರುವುದರಿಂದ ಉತ್ಸಾಹದಿಂದ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದು ಡಾ. ರವೀಂದ್ರನಾಥ್ ಇದೇ ಸಂದರ್ಭ ನುಡಿದರು.

ಇಲಾಖೆಯಲ್ಲಿ ತಂತ್ರಜ್ಞಾನ ಬಳಸಿ ಆನ್‌ಲೈನ್ ಪ್ರಕ್ರಿಯೆಗೆ ಒತ್ತು ನೀಡಲಾಗುತ್ತಿದೆ. ಕ್ರೈಂ, ಕ್ರಿಮಿನಲ್, ಟ್ರ್ಯಾಕಿಂಗ್ ನೆಟ್‌ವರ್ಕ್ (CCTNS) ಸಿಸ್ಟಂ ಮೂಲಕ ಅಪರಾಧಿಗಳ ಪತ್ತೆ, ಚಾರ್ಜ್ ಶೀಟ್ ಸಲ್ಲಿಕೆಯಂತಹ ತನಿಖಾ ಪ್ರಕ್ರಿಯೆ ಮಾಡಲಾಗುತ್ತಿದೆ. ಅದೇ ರೀತಿ ಐಹೆಚ್‌ಎಂಎಸ್ ಪದ್ಧತಿಯನ್ನೂ ಮೈಕ್ರೋಸಾಫ್ಟ್ ತಂತ್ರಾಂಶದ ನೆರವಿನೊಂದಿಗೆ ಪೊಲೀಸ್ ಠಾಣೆ ವ್ಯವಸ್ಥೆಯನ್ನು ಬಲವರ್ಧನೆ ಮಾಡಲಾಗಿದೆ ಎಂದು ಅವರು ನುಡಿದರು. ಪೊಲೀಸ್ ಇಲಾಖೆಯಲ್ಲಿ ಕಾನ್ಸ್‌ಟೇಬಲ್‌ಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಮಾಹಿತಿ ತಂತ್ರಜ್ಞಾನದಲ್ಲಿ ಪರಿಣಿತರಾದ ಸಿಬ್ಬಂದಿಗಳು, ಮಹಿಳೆಯರು, ಮಕ್ಕಳು, ದಲಿತರು, ಹಿರಿಯ ನಾಗರಿಕರ ರಕ್ಷಣೆಗಾಗಿ ಇರುವ ಕಾಯ್ದೆಗಳನ್ನು ಬಳಸಿ ಉತ್ತಮವಾಗಿ ಕೆಲಸ ಮಾಡಲು ಅವಕಾಶವಿದೆ. ನಿಮ್ಮ ಕೌಶಲ್ಯದಿಂದ ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಿದಲ್ಲಿ ನೀವು ಇಲಾಖೆಯಲ್ಲಿ ಬಲು ಎತ್ತರಕ್ಕೆ ಬೆಳೆಯಲು ಸಾಧ್ಯವಾಗುತ್ತದೆ ಎಂದು ಡಾ. ರವೀಂದ್ರನಾಥ್ ಇದೇ ವೇಳೆ ನುಡಿದರು.

ಪದವಿ ಪರೀಕ್ಷಾ ಶುಲ್ಕ ಹೆಚ್ಚಳ ವಿರೋಧಿಸಿ ಎಸ್‌ಎಫ್‌ಐ ಕಾರ್ಯಕರ್ತರ ಪ್ರತಿಭಟನೆ

ಮೈಸೂರು,ಜು.2(ಎಂಟಿವೈ)–ಪದವಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಹೆಚ್ಚಳ ಖಂಡಿಸಿ,



ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಮುಂದೆ ಪ್ರತಿಭಟನೆ ನಡೆಸಿದ ಎಸ್‌ಎಫ್‌ಐ ಕಾರ್ಯಕರ್ತರು, ಈ ಹಿಂದೆ ಇದ್ದ ಶುಲ್ಕವನ್ನೇ ಮುಂದುವರೆಸಬೇಕು. ಮೈಸೂರು ವಿಶ್ವವಿದ್ಯಾನಿಲಯವು 2021– 22ನೇ ಸಾಲಿನ ಪದವಿ ಕೋರ್ಸ್‌ಗಳ ಸಮ ಸೆಮಿಸ್ಟರ್ ಪದವಿ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಹೊರಡಿಸಿ, ಹಿಂದಿನ ಸಾಲಿನ ಪರೀಕ್ಷಾ ಶುಲ್ಕಕ್ಕಿಂತ ಅವೈಜ್ಞಾನಿಕವಾಗಿ ಶೇ.30 ಹೆಚ್ಚಳ ಮಾಡಿದೆ. ಒಂದೆಡೆ ಆನ್‌ಲೈನ್ ಕೋರ್ಸ್‌ಗಳ ಶುಲ್ಕವನ್ನು ಶೇ.5 ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಬಾರಿ ಬಿಎ ಹಾಗೂ ಬಿ.ಕಾಂಗೆ 2400 ರೂ. ಶುಲ್ಕ ನಿಗದಿ ಮಾಡಲಾಗಿತ್ತು. ಅದನ್ನು ಈ ಬಾರಿ 3840 ರೂ.ಗೆ ಹೆಚ್ಚಿಸಲಾಗಿದೆ. ಬಿ.ಎಸ್ಸಿಗೆ 2620 ರೂ. ನಿಂದ 3960 ರೂ.ಗೆ ಏರಿಸಲಾಗಿದೆ. ಬಾಕಿ ಉಳಿದಿರುವ ವಿಷಯದ ಪರೀಕ್ಷಾ ಶುಲ್ಕವನ್ನು ಹೆಚ್ಚಳ ಮಾಡಲಾಗಿದೆ. ಕೊರೊನಾದಿಂದ ಬಡವರು, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಈ ಶುಲ್ಕ ಏರಿಕೆ ಹೊರೆಯಾಗಿದೆ. ಕೆಲವು ವಿದ್ಯಾರ್ಥಿಗಳು ಶುಲ್ಕವನ್ನು ಪಾವತಿಸಲು ಸಾಧ್ಯವಾಗದೆ ವಿದ್ಯಾರ್ಥಿಗಳು ಪರೀಕ್ಷೆಯಿಂದ ದೂರವುಳಿಯುವಂತಾಗಿದೆ. ಕೂಡಲೇ ಪರೀಕ್ಷಾ ಶುಲ್ಕವನ್ನು ಕಡಿಮೆ ಮಾಡಬೇಕು. ಈಗಾಗಲೇ ಪರೀಕ್ಷಾ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಹಣವನ್ನು ಹಿಂದಿರುಗಿಸಬೇಕು. ಪರೀಕ್ಷೆ ಕಟ್ಟಲು ಇರುವ ಕಡೆ ದಿನಾಂಕವನ್ನು ಒಂದು ವಾರ ವಿಸ್ತರಿಸಬೇಕು ಎಂದು ಅವರು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ಟಿ.ಎಸ್. ವಿಜಯ್‌ಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಬೆಂಗಳೂರು ಮತ್ತು ಭೂಪಾಲ್‌ನಲ್ಲಿ ನಡೆದ ಹಾಕಿ ಪಂದ್ಯಾವಳಿಯಲ್ಲಿ ವಿಜೇತರಾದ ಮೈಸೂರು ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಸ್ಟೆಲ್‌ನ ಮಹಿಳಾ ಹಾಕಿ ಕ್ರೀಡಾಪಟುಗಳನ್ನು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಜರ್‌ಬಾದ್ ಬಾಬು ಸ್ನೇಹ ಬಳಗದಿಂದ ಅಭಿನಂದಿಸಲಾಯಿತು. ಈ ವೇಳೆ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಅಲೀಸಾಬ್, ರಘುಕುಮಾರ್, ಸೂರಿ, ಪರಮೇಶ್, ರಾಜು, ಭವ್ಯ, ರವಿ, ವಿದ್ಯಾವತಿ, ಮುದ್ದುರಾಜ್, ಪುಟ್ಟಸ್ವಾಮಿ, ಪ್ರಕಾಶ್, ನಾರಾಯಣ್, ಮಹದೇವಸ್ವಾಮಿ, ಮಾಳವಿಕಾ, ದೀವಿನಾ ಭುಜನ್, ಹರಿಹರಸುತ, ಶ್ರೀಪಾದಾ ಇನ್ನಿತರರು ಉಪಸ್ಥಿತರಿದ್ದರು.

ಅಂತಿಮ ಟೆಸ್ಟ್: ಭಾರತ 416 ರನ್‌ಗೆ ಆಲೌಟ್

ಬರ್ಮಿಂಗ್ ಹ್ಯಾಂ, ಜು.2–ಇಂಗ್ಲೆಂಡ್ ವಿರುದ್ಧದ ಅಂತಿಮ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ 416 ರನ್‌ಗಳಿಗೆ ಆಲೌಟಾಗಿದೆ. 7 ವಿಕೆಟ್ ನಷ್ಟಕ್ಕೆ 338 ರನ್‌ಗಳಿಂದ 2ನೇ ದಿನದಾಟ ಆರಂಭಿಸಿದ ಭಾರತದ ಪರ ರವೀಂದ್ರ ಜಡೇಜಾ 194 ಎಸೆತಗಳಲ್ಲಿ 13 ಬೌಂಡರಿ ಒಳಗೊಂಡ 104 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಮೊಹಮ್ಮದ್ ಶಮಿ 16 ರನ್ ಗಳಿಸಿದರೇ, ಬಿರುಸಿನ ಬ್ಯಾಟಿಂಗ್ ನಡೆಸಿದ ನಾಯಕ ಬೂಮ್ರಾ 16 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 31 ರನ್ ಗಳಿಸಿ ಅಜೇಯರಾಗುಳಿದರು.

ನಂತರ ಮೊದಲ ಇನ್ನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ಭಾರತೀಯ ವೇಗಿಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ 2ನೇ ದಿನದಾಟದ ಅಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 84 ರನ್ ಗಳಿಸಿದ್ದು, 332 ರನ್‌ಗಳ ಹಿನ್ನಡೆಯಲ್ಲಿದೆ. ಇಂಗ್ಲೆಂಡ್ ಪರ ಜೋ ರೂಟ್ 31, ಓಲಿ ಪೋಪ್ 10 ಗಳಿಸಿದರು. ಭಾರತದ ಪರ ನಾಯಕ ಬೂಮ್ರಾ 3, ಮೊಹಮ್ಮದ್ ಶಮಿ ಹಾಗೂ ಸಿರಾಜ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.



ಮೈಸೂರಿನ ಕೆಸರೆಯ ಬಿಟಿಎಲ್ ವಿದ್ಯಾ ವಾಹಿನಿ ಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಸಂಸ್ಥಾಪನ ದಿನವನ್ನು ಇತ್ತೀಚೆಗೆ ಆಚರಿಸಲಾಯಿತು. ಈ ವೇಳೆ ಶಾಲೆಯ ಪ್ರತಿಭಾವನ್ವಿತ ಹಳೇ ವಿದ್ಯಾರ್ಥಿ ಹಾಗೂ ವೈದ್ಯ ವ್ಯಾಸಂಗ ಪೂರೈಸಿರುವ ಡಾ.ಸುಮಾ ಭಾರತಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಸಂಸ್ಥೆಯ ಅಧ್ಯಕ್ಷರಾದ ಅಪೂರ್ವ ಲಕ್ಷ್ಮಣ್, ಡಾ.ಕೈಸರ್ ಅಹಮದ್, ಪ್ರತಿಕಾ ಡಿಸೋಜ ಇತರರು ಉಪಸ್ಥಿತರಿದ್ದರು.

ತಲೆ ಕೂದಲು ಉದುರುತ್ತಿದ್ದ ಕಾರಣಕ್ಕೆ ಯುವತಿ ಆತ್ಮಹತ್ಯೆ

ಮೈಸೂರು, ಜು. 2(ಆರ್‌ಕೆ)– ತಲೆ ಕೂದಲು ಉದುರುವ ಸಮಸ್ಯೆಯಿಂದ ಬೇಸತ್ತು ಯುವತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ರಾಘವೇಂದ್ರನಗರದಲ್ಲಿ ಗುರುವಾರ ರಾತ್ರಿ ಸಂಭವಿಸಿದೆ. ಮೈಸೂರಿನ ರಾಘವೇಂದ್ರನಗರದ ಗುರುರಾಜ ಬಡಾವಣೆಯಲ್ಲಿ ವಾಸಿಸುತ್ತಿದ್ದ ಕುಮಾರಸ್ವಾಮಿ ಅವರ ಪುತ್ರಿ ಕಾವ್ಯಶ್ರೀ(22) ನೇಣಿಗೆ ಶರಣಾದವರು. ಮೂಲತಃ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲೂಕು, ಕಂತೇಗೌಡನ ಪಾಳ್ಯದವರಾದ ಆಕೆ, ಮೈಸೂರಿನ ಖಾಸಗಿ ಕಾಲೇಜೊಂದರಲ್ಲಿ 2ನೇ ವರ್ಷದ ನರ್ಸಿಂಗ್ ತರಬೇತಿ ಪಡೆಯುತ್ತಿದ್ದರು.

ಪತ್ಮಂಡೆ ಕಾಣಿಸಿಕೊಂಡ ಕಾರಣ ಕೆಲ ದಿನಗಳಿಂದ ತಲೆ ಕೂದಲು ಉದುರಲಾರಂಭಿಸಿದ್ದು, ಚಿಕಿತ್ಸೆ ಪಡೆದರೂ ವಾಸಿಯಾಗದ ಕಾರಣ, ಜಿಗುಪ್ಸೆಗೊಂಡ ಕಾವ್ಯಶ್ರೀ 'ನನ್ನ ಸಾವಿಗೆ ನಾನೇ ಕಾರಣ' ಎಂದು ಡೆತ್‌ನೋಟ್ ಬರೆದಿಟ್ಟು ಅಂದು ರಾತ್ರಿ 10.30 ಗಂಟೆ ವೇಳೆಗೆ ತಾನು ವಾಸಿಸುತ್ತಿದ್ದ ಬಾಡಿಗೆ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ನಜರ್‌ಬಾದ್ ಠಾಣೆ ಪೊಲೀಸರು ಮಹಜರು ನಡೆಸಿ ಮೃತದೇಹ ವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ಶುಕ್ರವಾರ ವಾರಸುದಾರರಿಗೊಪ್ಪಿಸಿದರು.



ಮೈಸೂರು ತಾಲೂಕಿನ ಜಯಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕಿ ಶ್ರೀಮತಿ ಕಲ್ಪನಾ ಮಂಟೋ ನಿವೃತ್ತಿ ಹೊಂದಿದ್ದು, ಅವರನ್ನು ಹಳೇ ವಿದ್ಯಾರ್ಥಿಗಳ ಸಂಘದ ಸದಸ್ಯರು ಹಾಗೂ ಜಯಪುರ ಹೋಬಳಿ ವಿಕಾಸ ವೇದಿಕೆ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಎಸ್‌ಡಿಎಂಸಿ ಅಧ್ಯಕ್ಷ ಬಾಲಸುಬ್ರಹ್ಮಣ್ಯ, ಗ್ರಾಪಂ ಅಧ್ಯಕ್ಷೆ ಮಹಾದೇವಿ ಜವರನಾಯಕ, ಸದಸ್ಯೆ ರೇಣುಕಾ, ಪಿಡಿಓ ನರಹರಿ, ಮುಖಂಡರಾದ ಮಣಿಕಂಠ, ಎಂ.ರಂಗಸ್ವಾಮಿ, ಮುಸ್ತಾಯಿನ್, ಅಜೀಜ್‌ವುಲ್ಲಾ, ಕೆಂಪರಾಜು, ಜಯಕುಮಾರ್, ಶ್ರೀಕಂಠ, ಶ್ರೀಕಾಂತ್, ಶಿಕ್ಷಕರಾದ ಪ್ರಭುಸ್ವಾಮಿ, ಶೇಷರಾಜು, ಕೃಷ್ಣ ಇನ್ನಿತರರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಒಳಗೊಂಡ 'ಚಿಂತನ' ವಾರ್ಷಿಕ ವಿಶೇಷ ಸಂಚಿಕೆಯನ್ನು ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ ಬಿಡುಗಡೆಗೊಳಿಸಿದರು. ಈ ವೇಳೆ ಶಾರದಾ ವಿಲಾಸ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕಕುಮಾರ್, 'ಚಿಂತನ' ವಿಶೇಷ ಸಂಚಿಕೆಯ ಸಂಪಾದಕ, ಉಪನ್ಯಾಸಕ ರಾಜೇಂದ್ರಪ್ರಸಾದ್ ಹೊನ್ನಲಗೆರೆ, ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಹೆಚ್.ಆರ್.ಪರಮೇಶ್, ಭೌತಶಾಸ್ತ್ರ ವಿಭಾಗದ ಉಪನ್ಯಾಸಕ ಸೈಯದ್ ಮುಷೀರ್ ಅಹಮದ್ ಹಾಜರಿದ್ದರು.



ಮಳೆಗಾಲ ಆರಂಭಕ್ಕೆ ಮುನ್ನ ಮಕ್ಕಳಿಗೆ ಫ್ಲೂ ಲಸಿಕೆ ಹಾಕಿಸುವುದು ಸೂಕ್ತ

ಮೈಸೂರು, ಜು. 2– 6 ತಿಂಗಳಿಂದ 5 ವರ್ಷದ ಮಕ್ಕಳಿಗೆ ವಾರ್ಷಿಕ ಫ್ಲೂ ಲಸಿಕೆಯನ್ನು ಹಾಕಿಸುವುದು ಸೂಕ್ತ ಎಂದು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (ಐಎಪಿ) ಮತ್ತು ವಿಶ್ವ ಆರೋಗ್ಯ ಸಂಸ್ಥೆಗಳು ಶಿಫಾರಸು ಮಾಡಿವೆ ಎಂದು ಜೆಎಸ್‌ಎಸ್ ವೈದ್ಯಕೀಯ ಮತ್ತು ಆಸ್ಪತ್ರೆಯ ಡಾ. ಎಸ್.ಎನ್. ಪ್ರಶಾಂತ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಕ್ಕಳು ವರ್ಷವಿಡೀ ಜ್ವರಕ್ಕೆ ತುತ್ತಾಗುತ್ತಾರೆ ಮತ್ತು ಚಳಿಗಾಲ ಹಾಗೂ ಮಳೆಗಾಲದ ಸಂದರ್ಭದಲ್ಲಿ ಜ್ವರ ಬರುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಹೀಗೆ ಜ್ವರ ಬಂದ ಸಂದರ್ಭದಲ್ಲಿ ಮಕ್ಕಳಲ್ಲಿ ಪ್ರತಿಕಾಯಗಳನ್ನು ಬೆಳೆಸಲು ಕನಿಷ್ಠ ಸುಮಾರು 2 ವಾರಗಳು ಬೇಕಾಗುತ್ತವೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಮಳೆಗಾಲ ಅಥವಾ ಚಳಿಗಾಲ ಆರಂಭದ 2 ರಿಂದ 4 ವಾರಗಳಿಗೂ ಮುನ್ನ ಲಸಿಕೆಯನ್ನು ಹಾಕಿಸುವುದು ಉತ್ತಮ. 5 ವರ್ಷದೊಳಗಿನ ಮಕ್ಕಳು ಜ್ವರದಿಂದ ಎದುರಾಗಬಹುದಾದ ಹೆಚ್ಚು ಅಪಾಯಗಳನ್ನು ಹೊಂದಿರುತ್ತಾರೆ. ಇದು ಸಮುದಾಯದ ಇತರರಿಗೂ ಸೋಂಕನ್ನು ಹರಡಿಸಬಹುದಾಗಿದೆ ಎಂದಿದ್ದಾರೆ.

ಫ್ಲೂ ಎಲ್ಲಾ ವಯೋಮಾನದವರಿಗೂ ಹರಡಬಹುದು. ಇದು ಕೆಲವೊಮ್ಮೆ ಗಂಭೀರ ಸಂಕೀರ್ಣತೆಯ ಸಮಸ್ಯೆಗಳಿಗೆ ಕಾರಣವಾಗಬಹುದು. ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳಲ್ಲಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿ ಅಪಾಯವನ್ನು ತಂದೊಡ್ಡಲು ಕಾರಣವಾಗಬಹುದು. ಈ ಕಾರಣದಿಂದ ಪೋಷಕರು ತಮ್ಮ ಮಕ್ಕಳಿಗೆ ವಾರ್ಷಿಕ ಫ್ಲೂ ಲಸಿಕೆ ಹಾಕಿಸುವುದು ಉತ್ತಮ. ಇದು ಫ್ಲೂನಿಂದ ರಕ್ಷಣೆ ನೀಡುತ್ತದೆ. ಇದು ಅತ್ಯಂತ ಸುರಕ್ಷಿತ ಮತ್ತು ಪರಿಣಾಮಕಾರಿಯಾಗಿರುತ್ತದೆ ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.07.2022 ಭಾನುವಾರ, ಮಳೆ ನಕ್ಷತ್ರ : ಆರೀದ್ರ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ : ಮಖೆ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಗುಡಿಹಳ್ಳಿ ನಾಗರಾಜ್, 6.20 ಗೀತಾರಾಧನ, 6.35 "ಬದುಕು ಬದಲಿಸಿದ ಶೋಧ", ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಭಾವಗೀತೆ, 6.50 ವನ ಮಹೋತ್ಸವ, ಪ್ರಾಯೋಜಕರು– ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ, "ಶಾಲಾ ಮಕ್ಕಳಲ್ಲಿ ಆರೋಗ್ಯ ಸಮಸ್ಯೆಗಳು" ಕುರಿತು ಡಾ.ಹೆಚ್.ವಿ. ರಮಾ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಹೆಚ್.ಡಿ.ಕೋಟೆಯ ಸಂಯುಕ್ತ ಪದವಿಪೂರ್ವ ಬಾಲಿಕಾ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಡಾ. ಸುಷ್ಮಾ ಆನಂದ್, 12.45 ಜನಪದ ಸಂಗೀತ–ಪುಟ್ಟಸಿದ್ದಮ್ಮ ಮತ್ತು ತಂಡ, 1.20 ಭಾವಗೀತೆ–ಸಿ. ಶಶಿಕಲಾ ಚಂದ್ರಶೇಖರ್, 2.35 ಚಲನಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಗದಾಯುದ್ಧ, ಪ್ರಸ್ತುತಿ– ಧರ್ಮಸ್ಥಳ ಮಂಜುನಾಥೇಶ್ವರ ಕೃಪಾ ಪೋಷಿತ ಯಕ್ಷಗಾನ ಮಂಡಳಿಯ ಕಲಾವಿದರು, 7.00 ನಮ್ಮ ಕನಸಿಗೆ ನಮ್ಮದೇ ಮಾತು, 9.05 ಚಿಣ್ಣರ ಸುದ್ದಿ ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಪಪ್ಪು ಪದ್ಮಾ ರವಿಶಂಕರ್– ವೀಣಾವಾದನ, ವಿ.ವಿ. ರಮಣಮೂರ್ತಿ– ಮೃದಂಗಂ, 11.00 ಸವಿನೆನಪು

■ **ಶ್ರೀ ವಿಠ್ಠಲ ರುಕ್ಮಿಣಿ ಚಾರಿಟಬಲ್ ಟ್ರಸ್ಟ್ :** ಭಾವಸಾರ ಕ್ಷತ್ರಿಯ ಸಮಾಜದ ವಧು–ವರರ ಸಮಾವೇಶ, ಸ್ಥಳ: ಶ್ರೀ ವಿಠ್ಠಲ ರುಕ್ಮಿಣಿ ಕನ್‌ವೆನ್ಷನ್ ಹಾಲ್, ಹುಣಸೂರು ರಸ್ತೆ, ಬೆಳಗ್ಗೆ 10.30ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ :** ನೂತನ ಅಧ್ಯಕ್ಷ ಲಯನ್ ಡಿ.ಎನ್. ಚಂದ್ರಶೇಖರ್ ತಂಡಕ್ಕೆ ಸೇವಾ ದೀಕ್ಷೆ ಮತ್ತು ನೂತನ ಸದಸ್ಯರಿಗೆ ಪ್ರತಿಜ್ಞಾ ವಿಧಿ, ಬೋಧಿಸುವವರು : ಡಾ. ನಾಗರಾಜ ವಿ. ಬೈರಿ, ಅಧ್ಯಕ್ಷತೆ : ಲಯನ್ ಎನ್. ಗಂಗಾಧರಪ್ಪ, ಉದ್ಘಾಟನೆ : ಶ್ರೀ ಗೋಪಾಲಸ್ವಾಮಿ ಶಿಶುವಿಹಾರ ಶಿಕ್ಷಣ ಸಂಸ್ಥೆಯ ಎನ್.ಆರ್. ಮಂಜುನಾಥ್, ಅತಿಥಿಗಳು : ಲಯನ್ ಬಿ. ಪ್ರದೀಪ್ ಕುಮಾರ್, ಲಯನ್ ಎಸ್. ವೆಂಕಟರಮಣಪ್ಪ, ಸ್ಥಳ: ಶ್ರೀ ಗೋಪಾಲಸ್ವಾಮಿ ಶಿಶುವಿಹಾರ ಶಿಕ್ಷಣ ಸಂಸ್ಥೆಗಳು, ನಂಜುಮಳಿಗೆ ಸರ್ಕಲ್, ಚಾಮುಂಡಿಪುರಂ, ಬೆಳಗ್ಗೆ 10.30ಕ್ಕೆ.

■ **ಸಂತ ಫಿಲೋಮಿನಾ ಕಾಲೇಜು, ನವ ಕರ್ನಾಟಕ ಪ್ರಕಾಶನ :** ಬೃಹತ್ ಪುಸ್ತಕ ಪ್ರದರ್ಶನ, ಉದ್ಘಾಟನೆ : ಸಂತ ಫಿಲೋಮಿನಾ ಕಾಲೇಜಿನ ಡಾ. ಬರ್ನಾರ್ಡ್ ಪಿ. ಬಾರ್ನಿಸ್, ಕೃತಿಗಳ ಲೋಕಾರ್ಪಣೆ : ಮೈಸೂರು ವಿವಿ ಇಂಗ್ಲಿಷ್ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ವಿಜಯ್ ಶೇಷಾದ್ರಿ, ಅಧ್ಯಕ್ಷತೆ : ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲ ಡಾ. ರವಿ ಜೆ.ಡಿ. ಸಲ್ಡಾನ್ಹಾ, ಉಪಸ್ಥಿತರು : ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಸುನಿಲ್ ಡಿಸೋಜಾ, ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಬೇದ್ರೆ ಮಂಜುನಾಥ, ನವಕರ್ನಾಟಕ ಪ್ರಕಾಶನ ವ್ಯವಸ್ಥಾಪಕ ಎನ್.ಕೆ. ಸತ್ಯನಾರಾಯಣ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ :** ಮಹಾನ್ ಯೋಗಿ ಶ್ರೀ ಕೃಷ್ಣಮಾಚಾರ್ಯರ ಸಂಸ್ಮರಣೋತ್ಸವ, ಎ.ಎನ್. ಮೂರ್ತಿ ಅವರ ಯೋಗ ಪಿತಾಮಹ ಶ್ರೀ ಕೃಷ್ಣಮಾಚಾರ್ಯ ಕೃತಿ ಬಿಡುಗಡೆ, ಕೃತಿ ಬಿಡುಗಡೆ : ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಮೈಸೂರು ಯೋಗ ಅಸೋಸಿಯೇಷನ್ ಉಪಾಧ್ಯಕ್ಷ ಯೋಗಪ್ರಕಾಶ್, ಕೃತಿ ಕುರಿತು ಮಾತನಾಡುವವರು : ಡಾ. ಕೆ. ಲೀಲಾಪ್ರಕಾಶ್, ಮುಖ್ಯ ಅತಿಥಿಗಳು : ಡಾ. ಭವಾನಿ ಶಂಕರ್, ಕೃತಿಯ ಕರ್ತೃ ಎ.ಎನ್.ಮೂರ್ತಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಬಸವ ಸಮಿತಿ :** ಶರಣ ಸಂಗಮ, ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿ ಅವರಿಂದ ಕಂತೆ ಭಿಕ್ಷದ ಕಾಯಕ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ನಟನ ರಂಗಶಾಲೆ :** ವಾರಂತ್ಯ ರಂಗ ಪ್ರದರ್ಶನ, ಮಧ್ಯಾಹ್ನ 12ಕ್ಕೆ ರಂಗಭೂಮಿ ಕಲಾವಿದೆ ಲಕ್ಷ್ಮೀ ಚಂದ್ರಶೇಖರ್ ಅವರಿಂದ 'ಶೇಕ್ಸ್‌ಪೀಯರನ ಶ್ರೀಮತಿ' ಏಕವ್ಯಕ್ತಿ ರಂಗ ಪ್ರಸ್ತುತಿ, ರಚನೆ : ಉದಯ್ ಇಟಗಿ, ವಿನ್ಯಾಸ ಮತ್ತು ನಿರ್ದೇಶನ : ವಿಶ್ವರಾಜ್ ಪಾಟೀಲ್, ಸಂಜೆ 6.30ಕ್ಕೆ ಹೆಣ್ಣಲ್ಲವೇ! ನಾಟಕ ಪ್ರದರ್ಶನ, ನಿರ್ದೇಶನ : ಸೌಮ್ಯ ವರ್ಮ, ಪರಿಕಲ್ಪನೆ : ಲಕ್ಷ್ಮೀ ಚಂದ್ರಶೇಖರ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ.

■ **ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್, ಮೈಸೂರು ಜಿಲ್ಲಾ ಸಮಿತಿ :** ಇಪ್ಟಾ ಕ್ರೀಡಾಕೂಟದ ಬಹುಮಾನ ವಿತರಣಾ ಸಮಾರಂಭ, ಬಹುಮಾನ ವಿತರಣೆ : ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಆಯುಕ್ತ ಡಾ. ಎಸ್.ಬಿ. ರವಿಕುಮಾರ್, ಮುಖ್ಯ ಅತಿಥಿಗಳು : ಡಾ. ಸಿದ್ದನಗೌಡ ಪಾಟೀಲ್, ಸ್ಥಳ: ಸಂತ ಫಿಲೋಮಿನಾ ಕಾಲೇಜು ಕ್ರೀಡಾಂಗಣ, ಮಧ್ಯಾಹ್ನ 2ಕ್ಕೆ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗುಜರಾತ್ ಕರಕುಶಲ ಮೇಳ–2022, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಸಂಜೆ 4ಕ್ಕೆ.

■ **ಹೆಚ್.ವಿ.ರಾಜೀವ್ ಸ್ನೇಹ ಬಳಗ:** ವಿಶ್ವ ಪರಿಸರ ದಿನಾಚರಣೆ, ಭಾಗವಹಿಸುವವರು: ಜಯಲಕ್ಷ್ಮಿ ರಾಜೀವ್, ಪುತ್ರಿ ನವ್ಯಾ ರಾಜೀವ್, ಬಳಗದ ಸದಸ್ಯ ಕುಮಾರ್, ಸ್ಥಳ: ಸುಮಸೋಪಾನ ಉದ್ಯಾನವನ, ಸಂಜೆ 4.30ಕ್ಕೆ.

■ **ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ:** ಪ್ರತಿಭೋತ್ಸವ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಎಸ್. ಸಚ್ಚಿದಾನಂದಮೂರ್ತಿ, ಅಧ್ಯಕ್ಷತೆ: ಶಾಸಕ ಎಸ್.ಎ. ರಾಮದಾಸ್, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ. ಫಣೀಶ್, ಡಿ.ಟಿ. ಪ್ರಕಾಶ್, ಭಾನುಪ್ರಕಾಶ್ ಶರ್ಮ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಲ್ಪವೃಕ್ಷ ಟ್ರಸ್ಟ್ :** ಡಾ. ಹೆಚ್.ಆರ್. ಸಂಜಯ್ ಅವರ ಹಾರುವ ನರಿ ಮತ್ತು ಇತರ ಪರಿಸರದ ಕಥೆಗಳು ಕೃತಿ ಲೋಕಾರ್ಪಣಾ ಸಮಾರಂಭ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್.ಎನ್. ಹೆಗ್ಡೆ, ಪ್ರಾಸ್ತಾವಿಕ ನುಡಿ: ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಕೃತಿ ಬಿಡುಗಡೆ: ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ನೃತ್ಯ ಈಶಾ ಪ್ರದರ್ಶಕ ಕಲೆಗಳ ಕೇಂದ್ರ :** ಯುವಪಲ್ಲವ, ಸಮೂಹ ಭರತನಾಟ್ಯ, ಉದ್ಘಾಟನೆ : ಶ್ರೀ ನಾದಬ್ರಹ್ಮ ಸಂಗೀತ ಸಭಾ ಅಧ್ಯಕ್ಷ ಟಿ.ಆರ್. ಹರೀಶ್, ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ಮಾಲೀಕ ಬಿ.ಆರ್. ರಾಮಚಂದ್ರ, ಮುಖ್ಯ ಅತಿಥಿಗಳು: ಡಾ. ಕೃಪಾ ಫಡ್ಕೆ, ಡಾ. ಕುಮುದಿನಿ ಅಚ್ಚಿ, ಅಧ್ಯಕ್ಷತೆ : ಎಂ. ಜಯರಾಮ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆಯವರ ದೈವತ್ತ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ:** ರಂಗಾಯಣದ ಕಿರಿಯ ಕಲಾವಿದರಿಂದ ಸೂತ್ರಧಾರ ನಾಟಕ ಪ್ರದರ್ಶನ, ನಿರ್ದೇಶನ: ಮಹೇಶ್ ಕಲ್ಲತ್ತಿ, ರಚನೆ: ಎಸ್.ರಾಮನಾಥ, ಸಂಗೀತ: ಆರ್.ಸಿ.ಧನಂಜಯ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಗಾನಭಾರತೀ :** ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ರಚನೆ : ಹಿರಿಯ ರಂಗ ನಿರ್ದೇಶಕ ಪ್ರಸನ್ನ, ನಿರ್ದೇಶನ : ಅನುಶೆಟ್ಟಿ, ವಸ್ತ್ರಾಲಂಕಾರ: ಕೆ.ಆರ್. ನಂದಿನಿ, ಪ್ರಸಾದನ: ಬಿ.ಎಂ. ರಾಮಚಂದ್ರ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 7ಕ್ಕೆ.

ಹುಣಸೂರಿನಲ್ಲಿಂದು

■ **ಹುಣಸೂರು ತಾಲೂಕು ಪತ್ರಕರ್ತರ ಸಂಘ :** ಪತ್ರಿಕಾ ದಿನಾಚರಣೆ, ಬೆಳಗ್ಗೆ 9ಕ್ಕೆ ಪತ್ರಕರ್ತರು ಮತ್ತು ಕುಟುಂಬದವರಿಗೆ ಕ್ರೀಡಾಕೂಟ, ಉದ್ಘಾಟನೆ : ಡಿವೈಎಸ್ಪಿ ರವಿಪ್ರಸಾದ್, ಅಧ್ಯಕ್ಷತೆ : ಹುಣಸೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ತಹಸೀಲ್ದಾರ್ ಡಾ. ಅಶೋಕ್, ಡಾ. ಪುಷ್ಪ ಅಮರನಾಥ್, ದೇವರಹಳ್ಳಿ ಸೋಮಶೇಖರ್, ಸಿ.ಟಿ. ರಾಜಣ್ಣ, ಗೌರಮ್ಮ ಸೋಮಶೇಖರ್, ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಬಹುಮಾತ ವಿತರಣೆ, ಗಣ್ಯರಿಗೆ ಸನ್ಮಾನ, ಉದ್ಘಾಟನೆ : ಶಾಸಕ ಹೆಚ್.ಪಿ. ಮಂಜುನಾಥ್, ಪತ್ರಕರ್ತರಿಗೆ ಸನ್ಮಾನ : ಶಾಸಕ ಜಿ.ಟಿ. ದೇವೇಗೌಡ, ಪ್ರಶಸ್ತಿ ಪ್ರದಾನ : ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ಅಧ್ಯಕ್ಷತೆ : ಹುಣಸೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್. ಕೃಷ್ಣಕುಮಾರ್, ಸ್ಥಳ: ರೋಟರಿ ಭವನ, ಹುಣಸೂರು.

ವಿ.ಶ್ರೀನಿವಾಸಪ್ರಸಾದ್ ದಂಪತಿಗೆ ವಾರ್ಷಿಕೋತ್ಸವ ಸಂಭ್ರಮ



ಸಂಸದ ವಿ.ಶ್ರೀನಿವಾಸಪ್ರಸಾದ್ ಮತ್ತು ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್ ಅವರ 44ನೇ ವಿವಾಹ ವಾರ್ಷಿಕೋತ್ಸವವನ್ನು ಜಯಲಕ್ಷ್ಮೀಪುರಂನಲ್ಲಿರುವ ಭೀಮಸದನ ನಿವಾಸದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಭಂತೆ ಕಲ್ಯಾಣಸಿರಿ, ಪ್ರೊ.ಸಿ.ಬಸವರಾಜು, ಪ್ರೊ.ನೀಲಗಿರಿ ತಳವಾರ, ಪ್ರಕಾಶಕರಾದ ಭರತ್ ರಾಮಸ್ವಾಮಿ, ನಗುವಿನಹಳ್ಳಿ ಪಿ.ನಂದಕುಮಾರ್, ಹಿರಿಯ ಆಪ್ತ ಸಹಾಯಕ ಹೆಚ್.ಜಿ.ರಮೇಶ್, ಡಿ.ವೆಂಕಟರಾಜು, ಸಿ.ಜಿ.ಶಿವಕುಮಾರ್, ಶಾಂತರಾಮ್ ಶೆಟ್ಟಿ, ಗಿರೀಶ್, ಸಂತೋಷ್, ದೇವರಸನಹಳ್ಳಿ ಮಹದೇವ್, ಪ್ರಸಾದ್‌ಕುಮಾರ್ ಉಪಸ್ಥಿತರಿದ್ದರು.

ಅಸ್ಪೃಶ್ಯತೆ ದಲಿತರಲ್ಲಿಲ್ಲ, ಮುಂದುವರೆದ ಜಾತಿಯ ಬುದ್ಧಿವಂತರ ಮಸ್ತಿಷ್ಕದಲ್ಲಿದೆ

● ಆರ್‌ಎಸ್‌ಎಸ್ ಜ್ಯೇಷ್ಠ ಪ್ರಚಾರಕ ಸು.ರಾಮಣ್ಣ ಅಭಿಮತ ● ಹಿಂದೂ ಸಮಾಜದಲ್ಲಿ ಭಿನ್ನತೆ ಇದ್ದರು ಎಲ್ಲರೂ ಒಂದೇ

ಮೈಸೂರು, ಜು.2(ಎಂಕೆ)– ಅಸ್ಪೃಶ್ಯತೆ ಇರುವುದು ತಥಾಗತ ದಲಿತರಲ್ಲಿ ಅಲ್ಲ. ಮುಂದುವರಿದ ಜಾತಿಗಳ ಬುದ್ಧಿವಂತರ ಮಸ್ತಿಷ್ಕದಲ್ಲಿರುವ ಮಾಲಿನ್ಯ. ಇದನ್ನು ತೊಳೆದು ಭಾವಾರ್ಥದಲ್ಲಿ ಮೆದುಳಿಗೆ ಬೆಳಕನ್ನು ನೀಡಬೇಕಾಗಿದೆ ಎಂದು ಆರ್‌ಎಸ್‌ಎಸ್ ಜ್ಯೇಷ್ಠ ಪ್ರಚಾರಕ ಸು.ರಾಮಣ್ಣ ಅಭಿಪ್ರಾಯಪಟ್ಟರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ, ಜನ ಜಾಗರಣ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶರೀರದ ಅಂಗಾಂಗಗಳು ಸಾಮರಸ್ಯದಿಂದ ಕೂಡಿರುವಂತೆ ಹಿಂದೂ ಸಮಾಜದಲ್ಲಿ ಜಾತಿ–ಸಂಪ್ರದಾಯಗಳು ಬೇರೆ–ಬೇರೆಯಾಗಿದ್ದರು ಎಲ್ಲರೂ ಒಂದೇ ಎಂದು ಹೇಳಿದರು.

ಜಾತಿ ಜಾತಿಗಳ ಸಂಘಟನೆ ಮಾಡಿ ಎಂದರೆ ಸಂತೋಷದಿಂದ ಮಾಡುತ್ತಾರೆ. ಎಲ್ಲಾ ಜಾತಿಯವರನ್ನು ಭಾವಸೂತ್ರದಲ್ಲಿ ಪೋಣಿಸುವ ಹಿಂದೂ ಸಂಘಟನೆ ಮಾಡುವುದಕ್ಕೆ ಸಂಕೋಚಪಡುತ್ತಾರೆ. ಆದ್ದರಿಂದ ರಾಷ್ಟ್ರೀಯ ಸ್ವಯಂ ಸೇವಾ ಸಂಘ ಹಿಂದೂ ಸಮಾಜದ ಸಂಘಟನೆಯಲ್ಲಿ ತೊಡಗಿದ್ದು, ಎಲ್ಲರಲ್ಲೂ ಸಾಮರಸ್ಯ ಮೂಡಿಸುವ ಕೆಲಸ ಮಾಡುತ್ತಿದೆ ಎಂದರು.

ಹಿಂದೂ ಸಮಾಜದಲ್ಲಿರುವ ಜಾತೀಯತೆ, ಪ್ರಾಂತಿಯತೆ, ರಾಜಕೀಯ ದ್ವೇಷವನ್ನು ದೂರ ಮಾಡುವುದು ಅಸಾಧ್ಯವೇನಲ್ಲ. ಆದರೆ ಹಿಂದೂ ಸಮಾಜಕ್ಕೆ ದುರ್ಗಳಿಗೆಯಲ್ಲಿ ಅಂಟಿಕೊಂಡಿರುವ ಅಸ್ಪೃಶ್ಯತೆ ಎಂಬ ರೋಗವನ್ನು ವಾಸಿ ಮಾಡುವುದು ಹೇಗೆ ಎಂಬುದನ್ನು ಚಿಂತಿಸಬೇಕಾಗಿದೆ. ಎಲ್ಲಾ ಮುಂದುವರಿದ ಜಾತಿಗಳ ಜಗದ್ಗುರುಗಳು ಒಟ್ಟಾರೆ ಸೇರಿ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆ ಎಂಬುದಿಲ್ಲ ಎಂದು ಘೋಷಣೆ ಮಾಡಬೇಕು. ಪಾದಪೂಜೆ ಮಾಡಿಸಿಕೊಂಡು ದಕ್ಷಿಣೆಗಾಗಿ ಬ್ರಾಹ್ಮಣ ಸ್ವಾಮೀಜಿಯವರು ಬರೀ ಬ್ರಾಹ್ಮಣರ ಹಾಗೂ ದಕ್ಷಿಣೆ ಕೊಡಲು ಶಕ್ತಿ ಇರುವವರ ಮನೆಗೆ ಹೋಗುವುದರ ಜೊತೆಗೆ ದಕ್ಷಿಣೆ ಕೊಡಲು ಶಕ್ತಿ ಇಲ್ಲದಿರುವವರ ಮನೆಗೂ ಹೋಗಿ ದೀಪ ಹಚ್ಚಬೇಕು ಎಂದರು.

ಹಿಂದವಾಹ ಸೋದರಾಃ ಸರ್ವೇ: ಜಾತಿ–ಸಂಪ್ರದಾಯಗಳು ಬೇರೆಯಾಗಿದ್ದರೂ ಹಿಂದೂಗಳು ಅಣ್ಣ–ತಮ್ಮಂದಿರು. ತಲೆ ಮೇಲಿದೆ ಎಂದು ಶ್ರೇಷ್ಠವಲ್ಲ. ಕಾಲು ಕೆಳಗಿದೆ ಎಂದು ಕನಿಷ್ಠವಲ್ಲ. ನಮಸ್ಕಾರ ಮಾಡುವಾಗ ತಲೆ ಬಗ್ಗಿಸಿ ಪಾದಮುಟ್ಟಿ ನಮಸ್ಕಾರ ಮಾಡುತ್ತೇವೆ ಎಂಬುದನ್ನು ನಾವು ಅರ್ಥಮಾಡಿಕೊಂಡು ಸಮಾನವಾಗಿ ಕಾಣಬೇಕಾಗಿದೆ. ಇಂತಹ ಸಾಮರಸ್ಯದ ಸಂದೇಶವನ್ನು ನೀಡುವ ವ್ಯವಸ್ಥೆಯನ್ನು ಮಾಧವ ಸದಾಶಿವ ಗೋಲ್ವಾಲ್ಕರ್ ಮಾಡಿದ್ದಾರೆ ಎಂದು ಹೇಳಿದರು.

ಸೇವೆಯ ಗುಣವುಳ್ಳವರು ಸ್ವಯಂ ಸೇವಕರು: ಪ್ರಧಾನಿ ನರೇಂದ್ರ ಮೋದಿ ಎಂದೂ ನಾನು ರಾಷ್ಟ್ರೀಯ ಸ್ವಯಂ ಸೇವಾ ಸಂಘದವನು ಎಂದಿಲ್ಲ. ಸಂಘದ ಕಾರ್ಯಾಲಯಕ್ಕೂ ಬರುವುದಿಲ್ಲ. ಆದರೆ ಅವರ ನಡವಳಿಕೆ ಸ್ವಯಂ ಸೇವಕನ ನಡವಳಿಕೆಯಾಗಿದೆ. ಅದಕ್ಕೆ ಅಮೆರಿಕಾ ಅಧ್ಯಕ್ಷರೇ ಮೋದಿಯವರನ್ನು ಹುಡುಕಿಕೊಂಡು ಬಂದು ಮಾತನಾಡಿಸಿದ್ದು ಉದಾಹರಣೆಯಾಗಿದೆ. ಸ್ವಯಂ ಪ್ರೇರಿತವಾಗಿ ಸೇವೆ ಮಾಡುವ ಗುಣವುಳ್ಳವರು ಸ್ವಯಂ ಸೇವಕರಾಗುತ್ತಾರೆ ಎಂದರು.



ಮೈಸೂರಿನ ಮಾಧವ ಕೃಪಾದಲ್ಲಿ 'ಮಾಧವ ಸದಾಶಿವ ಗೋಲ್ವಾಲ್ಕರ್' ಅವರ ಜೀವನಾಧಾರಿತ 'ರಾಷ್ಟ್ರ ತಪಸ್ವಿ ಶ್ರೀ ಗುರೂಜಿ' ಗ್ರಂಥವನ್ನು ಶನಿವಾರ ಬಿಡುಗಡೆಗೊಳಿಸಲಾಯಿತು.

> ನಮ್ಮ ಶರೀರ ಪರೋಪಕಾರಕ್ಕಾಗಿ ಇರಬೇಕು. ನಾವು ನಮ್ಮ ಮನೆಗೆ ಸಮಯ ನೀಡುವಂತೆ ದೇಶದ ಒಳಿತಿಗಾಗಿಯೂ ಸಮಯ ನೀಡಬೇಕು. ದೇಶ ಸೇವೆಯ ಮೂಲಕ ದೇಶದ ಬಗ್ಗೆ ಯಾವಾಗಲೂ ಕಳಕಳಿಯುಳ್ಳವರಾಗಿರಬೇಕು. ಈ ನಿಟ್ಟಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಘ ಕೆಲಸ ಮಾಡುತ್ತಿದೆ.
>
> – ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ, ಅರೆ ತಿಪ್ಪೂರು ಜೈನ ಮಠ

ಸಂಘಂ ಶರಣಂ ಗಚ್ಛಾಮಿ ಎಂಬುದೇ ಆರ್‌ಎಸ್‌ಎಸ್‌ನ ಸಂಸ್ಕೃತಿಯಾಗಿದ್ದು, ಸ್ವಯಂ ಸೇವೆ ಎಂಬುದಕ್ಕೆ ರಾಷ್ಟ್ರೀಯ ಸ್ವಯಂ ಸೇವಾ ಸಂಘ ಹೆಸರು ತಂದುಕೊಟ್ಟಿದೆ. ಸ್ವಪ್ರೇರಣೆಯಿಂದ ಸಂಘಟನೆಗಾಗಿ, ಸಮಾಜಕ್ಕಾಗಿ, ರಾಷ್ಟ್ರಕ್ಕಾಗಿ ಸೃಷ್ಟಿಗಾಗಿ ಬದುಕುವವನು ಸಮಾಜ ಸೇವಕ. ಸ್ವದೇಶಿ ವಸ್ತು, ಸ್ವದೇಶಿ ಭಾಷೆ ಬಳಸುವುದು, ನಮ್ಮ ಪರಂಪರೆಯಿಂದ ಬಂದಿರುವ ಆಚರಣೆಗಳನ್ನು ಮಾಡುವುದು ನಮ್ಮ ಧರ್ಮವಾಗಿದೆ ಎಂದು ತಿಳಿಸಿಕೊಟ್ಟರು.

ಇದಕ್ಕೂ ಮುನ್ನ ಹಿಂದಿಯಲ್ಲಿ ರಂಗಾ ಹರಿ ರಚಿತ, ಚಂದ್ರಶೇಖರ ಭಂಡಾರಿಯವರ ಕನ್ನಡಾನುವಾದ 'ಮಾಧವ ಸದಾಶಿವ ಗೋಲ್ವಾಲ್ಕರ್' ಅವರ ಜೀವನಾಧಾರಿತ 'ರಾಷ್ಟ್ರ ತಪಸ್ವಿ ಶ್ರೀ ಗುರೂಜಿ' ಗ್ರಂಥವನ್ನು ಡಾ.ಎನ್.ಎಸ್.ಮೋಹನ್ ಬಿಡುಗಡೆ ಮಾಡಿದರು. ಅರೆತಿಪ್ಪೂರು ಜೈನ ಮಠದ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಆರ್‌ಎಸ್‌ಎಸ್ ಮುಖಂಡ ವಾಸುದೇವ್ ಭಟ್ ಉಪಸ್ಥಿತರಿದ್ದರು.

ದೇವೇಗೌಡರ ಆರೋಗ್ಯ ಹದಗೆಡಲು ಪರಮನೀಚ ರಾಜಣ್ಣನೇ ಕಾರಣ

ಶಾಸಕಿ ಅನಿತಾ ಕುಮಾರಸ್ವಾಮಿ ಆಕ್ರೋಶ



ರಾಮನಗರ, ಜು.2– ಹೆಚ್.ಡಿ.ದೇವೇಗೌಡರ ಬಗ್ಗೆ ರಾಜಣ್ಣ ಆಕ್ಷೇಪಾರ್ಹ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದ ಜೆಡಿಎಸ್ ಶಾಸಕಿ ಅನಿತಾ ಕುಮಾರಸ್ವಾಮಿ, ರಾಜಣ್ಣಗೆ ದೇವೇಗೌಡರ ಹೆಸರು ಹೇಳುವ ಯೋಗ್ಯತೆಯಿಲ್ಲ. ದೇವೇಗೌಡರ ಆರೋಗ್ಯ ಹದಗೆಡಲು ಪರಮನೀಚ ಮನುಷ್ಯ ರಾಜಣ್ಣನೇ ಕಾರಣ ಎಂದು ಕಿಡಿಕಾರಿದ್ದಾರೆ.

ರಾಮನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅನಿತಾ ಕುಮಾರಸ್ವಾಮಿ, ಹೆಚ್.ಡಿ ದೇವೇಗೌಡರ ಕಾಲಿನ ಧೂಳಿಗೂ ಕೆ.ಎನ್.ರಾಜಣ್ಣ ಸಮವಲ್ಲ. ರಾಜಣ್ಣಗೆ ದೇವೇಗೌಡರ ಹೆಸರು ಹೇಳುವ ಯೋಗ್ಯತೆಯಿಲ್ಲ. ದೇವೇಗೌಡರ ಆರೋಗ್ಯ ಹದಗೆಡಲು ರಾಜಣ್ಣನೇ ಕಾರಣ. ಆಚಾರವಿಲ್ಲದ ನಾಲಿಗೆ ಅವರದ್ದು, ಪರಮನೀಚ ಮನುಷ್ಯ. ಈ ಮಾತುಗಳನ್ನು ನಾನು ಬಹಳ ನೋವಿಂದ ಹೇಳುತ್ತಿದ್ದೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನು ಕೆ.ಎನ್.ರಾಜಣ್ಣನ ಬುದ್ಧಿ ನೋಡಿಯೇ ಮಧುಗಿರಿ ಜನ ಸೋಲಿಸಿದರು. 90 ವರ್ಷದ ಹಿರಿಯರಾದ ಹೆಚ್.ಡಿ.ದೇವೇಗೌಡರಿಗೆ ರಾಜ್ಯದ ಜನತೆಗೆ ಒಳಿತು ಮಾಡಬೇಕು ಅನ್ನೋ ಮನಸ್ಸಿದೆ. ಓರ್ವ ಮಾಜಿ ಪ್ರಧಾನಿ ಎಂಬ ಕನಿಷ್ಠ ಗೌರವವಿಲ್ಲದೇ ಮಾತಾಡಿದ್ದಾರೆ. ರಾಜಣ್ಣ ಸಂಸ್ಕೃತಿ, ಸಂಸ್ಕಾರವಿಲ್ಲದ ಮನುಷ್ಯ. ಆಯಸ್ಸಿನ ಬಗ್ಗೆ ಮಾತನಾಡುತ್ತಾರೆ ಎಂದರೆ ಎಂತಹ ನೀಚ ಇರಬೇಕು. ರಾಜಣ್ಣ ದೇವೇಗೌಡರನ್ನು ಭೇಟಿಯಾಗುತ್ತೇನೆ ಎಂದಿದ್ದಾರೆ. ಆದರೆ ಭೇಟಿ ಮಾಡುವುದು ಬೇಡವೆಂದು ನಮ್ಮ ಮಾವನವರಿಗೆ ಹೇಳುತ್ತೇನೆ ಎಂದು ಶಾಸಕಿ ಅನಿತಾ ಕುಮಾರಸ್ವಾಮಿ ಹೇಳಿದರು.

ಕರಾಟೆ: ಪೊಲೀಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿ ಕುಶಾಲ್‌ಗೌಡ ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಮೈಸೂರು, ಜು.2– ಇತ್ತೀಚೆಗೆ ಶಿವಮೊಗ್ಗದಲ್ಲಿ ನಡೆದ ದಕ್ಷಿಣ ಭಾರತ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಮೈಸೂರಿನ ಪೊಲೀಸ್ ಪಬ್ಲಿಕ್ ಶಾಲೆಯ 5ನೇ ತರಗತಿ ವಿದ್ಯಾರ್ಥಿ ಆರ್.ಟಿ.ಕುಶಾಲ್ ಗೌಡ ಬೆಳ್ಳಿ ಪದಕ ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಶಿವಮೊಗ್ಗದ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ 2 ದಿನಗಳ ಕಾಲ ನಡೆದ ಕರಾಟೆ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯದ ತಂಡ 165 ಪಾಯಿಂಟ್ಸ್ ಪಡೆಯುವ ಮೂಲಕ ಸಮಗ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಕುಶಾಲ್‌ಗೌಡ ಮೈಸೂರು ಜಿಲ್ಲಾ ವೈರ್‌ಲೆಸ್ ನಿಯಂತ್ರಣ ಕೇಂದ್ರದ ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಮೋಹನರಂಗ ಹಾಗೂ ಶ್ವೇತಾ ದಂಪತಿಯ ಪುತ್ರ.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಜು.11ರಂದು ರಾಜ್ಯಾದ್ಯಂತ ಪ್ರತಿಭಟನೆ

ಮೈಸೂರು, ಜು.2(ಎಂಟಿವೈ)– ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಹೋರಾಟ ಬೆಂಬಲಿಸಿ, ಜು.11 ರಂದು ರಾಜ್ಯದಾದ್ಯಂತ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿರುವುದಾಗಿ ಕರ್ನಾಟಕ ಸ್ವಾಭಿಮಾನಿ ಎಸ್‌ಸಿ, ಎಸ್‌ಟಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿಯ ಮುಖಂಡ ಮಾವಳ್ಳಿ ಶಂಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2011ರ ಜನಗಣತಿ ಆಧಾರದ ಮೇಲೆ ಹಾಗೂ ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ಪ್ರಕಾರ ಈಗಾಗಲೇ ಈ ವರ್ಗಗಳಿಗೆ ಮೀಸಲಾತಿ ಹೆಚ್ಚಿಸಬೇಕಾಗಿತ್ತು. ಆದರೆ ಎಲ್ಲ ಸರ್ಕಾರಗಳು ಶೋಷಿತ ಸಮುದಾಯಕ್ಕೆ ದಕ್ಕಬೇಕಾದ ಪಾಲನ್ನು ನೀಡದೇ ವಂಚಿಸುತ್ತಿವೆ. ಕೇವಲ ಸುಳ್ಳು ಭರವಸೆಯನ್ನಷ್ಟೇ ನೀಡುತ್ತಿವೆ. ಹೀಗಾಗಿ ಈ ಕುರಿತು ಸ್ವಾಮೀಜಿ ಹೋರಾಟ ನಡೆಸುತ್ತಿದ್ದಾರೆ. ಇದರಿಂದಾಗಿ ಫಲಾನುಭವಿಗಳಾಗಬೇಕಾಗಿದ್ದವರು ಮೀಸಲಾತಿಯಿಂದ ವಂಚಿತರಾಗಿದ್ದಾರೆ. ಆದ್ದರಿಂದ ಸ್ವಾಮೀಜಿಗಳ ಹೋರಾಟಕ್ಕೆ ಸಮಾನಮನಸ್ಕ ಸಂಘಟನೆಗಳು ಬೆಂಬಲ ನೀಡುತ್ತಿವೆ ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ನಾವು ನಡೆಸಲು ಉದ್ದೇಶಿಸಿರುವ ಹೋರಾಟ ಯಾರ ಹಕ್ಕನ್ನೂ ಕಸಿಯುವ ಹೋರಾಟವಲ್ಲ. ಹೀಗಾಗಿ ಜು. 11 ರಂದು ಬೆಳಗ್ಗೆ ನಗರದ ಪುರಭವನದ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಸುಮಾರು 25 ಸಾವಿರ ಮಂದಿ ಪಾಲ್ಗೊಂಡಿರುವ ಮೆರವಣಿಗೆ ಹೊರಡಲಿದೆ. ಅಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎಸ್‌ಸಿ, ಎಸ್ಟಿ ಮೀಸಲಾತಿ ಹೋರಾಟ ಸಮಿತಿಯ ಎಸ್.ಸಿ.ಬಸವರಾಜು, ಕೆಂಪನಾಯಕ, ಬಿ.ಆರ್.ಪುಟ್ಟಸ್ವಾಮಿ, ಸೋಮಣ್ಣ ಬನ್ನಳ್ಳಿ, ರಾಜಣ್ಣ, ಬಿ.ಮಹದೇವಸ್ವಾಮಿ ಇದ್ದರು.

ಮೈಸೂರಲ್ಲಿ ಜು.5ರಿಂದ ಅಂತರ ವಿವಿ ಮಹಿಳಾ ಖೋ–ಖೋ ಪಂದ್ಯಾವಳಿ

ಮೈಸೂರು,ಜು.2(ಎಂಟಿವೈ)_ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಜು.5ರಿಂದ 7ರವರೆಗೆ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಮಹಿಳೆಯರ 'ಖೋ–ಖೋ ಪಂದ್ಯಾವಳಿ' ಆಯೋಜಿಸಲಾಗಿದೆ ಎಂದು ವಿವಿಯ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಕೃಷ್ಣಯ್ಯ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಕಾರಣದಿಂದಾಗಿ ಕಳೆದ 2 ವರ್ಷ ದೇಶದಲ್ಲಿ ಯಾವುದೇ ಕ್ರೀಡಾ ಚಟುವಟಿಕೆಗೆ ಅಷ್ಟಾಗಿ ನಡೆಯಲಿಲ್ಲ. ಆದರೆ ಈಗ ಸೋಂಕು ಕಡಿಮೆ ಆಗಿರುವ ಕಾರಣ ಪುನರಾರಂಭಗೊಂಡಿವೆ. ಇದೇ ರೀತಿ ಈ ಖೋ–ಖೋ ಪಂದ್ಯಾವಳಿಯನ್ನೂ ಆಯೋಜಿಸಲಾಗುತ್ತಿದೆ. ಈ ಪಂದ್ಯಾವಳಿಯಲ್ಲಿ ದಕ್ಷಿಣ ವಲಯದ ಮೈಸೂರು ವಿವಿ, ಕ್ಯಾಲಿಕಟ್ ವಿವಿ, ವಾರಂಗಲ್ ಕಾಕತೀಯ ವಿವಿ, ಪಶ್ಚಿಮ ವಲಯದಲ್ಲಿ ಔರಂಗಬಾದ್‌ನ ಡಾ.ಬಿ.ಆರ್.ಮರಾಠವಾಡ ವಿವಿ, ಮುಂಬಯಿ ವಿವಿ, ಸೂರತ್ ಬೀರ್‌ನರ್ಮದಾ ದಕ್ಷಿಣ ಗುಜರಾತ್ ವಿವಿ, ಕೊಲ್ಲಾಪುರದ ಶಿವಾಜಿ ವಿವಿ ಪಾಲ್ಗೊಳ್ಳಲಿವೆ ಎಂದರು.

ಉತ್ತರ ವಲಯದ ಜಲಂಧರ್ ಲವ್ಲಿ ಪ್ರೊಫೆಷನಲ್ ವಿವಿ, ರೋಹ್ಟಕ್ ಮಹರ್ಷಿ ದಯಾನಂದ ವಿವಿ, ಚಂಡೀಗಢದ ಪಂಜಾಬ್ ವಿವಿ ಹಾಗೂ ಪೂರ್ವ ವಲಯದಲ್ಲಿ ಒಡಿಶಾದ ಕೆಐಐಟಿ ವಿವಿ, ಭುವನೇಶ್ವರದ ಉತ್ಕಲ್ ವಿವಿ, ಉತ್ತರ ಪ್ರದೇಶದ ವೀರ್ ಬಹುದ್ದೂರ್ ಸಿಂಗ್ ಪೂರ್ವಾಂಚಲ್ ವಿವಿ, ಪಶ್ಚಿಮ ಬಂಗಾಳದ ಕಲ್ಯಾಣ ವಿವಿ ಸೇರಿದಂತೆ ಒಟ್ಟು 16 ತಂಡಗಳು ಪಾಲ್ಗೊಳ್ಳಲಿವೆ ಎಂದು ತಿಳಿಸಿದರು.

ಜು.5ರಂದು ಬೆಳಗ್ಗೆ 8ಕ್ಕೆ ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್ ಪಂದ್ಯಾವಳಿ ಉದ್ಘಾಟಿಸಲಿದ್ದಾರೆ. ಕುಲಸಚಿವ ಪ್ರೊ.ಬಿ.ಶಿವಪ್ಪ, ಅಂತಾರಾಷ್ಟ್ರೀಯ ಖೋಖೋ ಆಟಗಾರ್ತಿ ವೀಣಾ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಜು.7ರಂದು ಮಧ್ಯಾಹ್ನ 3.30ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಶಾಸಕ ಎಲ್.ನಾಗೇಂದ್ರ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು. ಗೋಷ್ಠಿಯಲ್ಲಿ ಪ್ರೊ.ಸಿ.ಶೇಷಣ್ಣ, ಡಾ. ಕೃಷ್ಣಕುಮಾರ್, ಸಿ.ಕೆ.ಮುರಳೀಧರನ್ ಇದ್ದರು.

ಇಂದು ಯಾದವ ಗೊಲ್ಲರ ಸಂಘದ ಸಭೆ

ಮೈಸೂರು,ಜು.2– ಸಹಕಾರ ಇಲಾಖೆ ಆದೇಶದಂತೆ ಮೈಸೂರಿನ ಚಾಮರಾಜ ಮೊಹಲ್ಲಾ ದಿವಾನ್ಸ್ ರಸ್ತೆಯ ಯಾದವ ಗೊಲ್ಲರ ಸಂಘದ ಆವರಣದಲ್ಲಿ ನಾಳೆ(ಜು.3) ಬೆಳಗ್ಗೆ 11ಕ್ಕೆ ಯಾದವ ಸಂಘದ ಸಭೆ ಆಯೋಜಿಸಲಾಗಿದ್ದು, ಸಭೆಯಲ್ಲಿ ಭಾಗಿಯಾಗಿ ಸಮುದಾಯದ ಕಟ್ಟಡ, ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ ನಿರ್ಮಾಣ ಸೇರಿದಂತೆ ಸಮುದಾಯದ ಸಮಗ್ರ ಅಭಿವೃದ್ಧಿ ಸಂಬಂಧ ಸಲಹೆ, ಮಾರ್ಗದರ್ಶನ ನೀಡುವಂತೆ ಹಿರಿಯ ನೋಂದಾಯಿತ ಸದಸ್ಯರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗುಜರಾತ್ ಕರಕುಶಲ ಉತ್ಸವಕ್ಕೆ ಚಾಲನೆ

ವಿಶೇಷ ವಿನ್ಯಾಸದ ವಸ್ತ್ರ, ಕರಕುಶಲ ವಸ್ತುಗಳ ಪ್ರದರ್ಶನ, ಮಾರಾಟ

ಮೈಸೂರು, ಜು.2(ಎಂಕೆ)– ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಜು.10ರವರೆಗೆ ಹಮ್ಮಿಕೊಂಡಿರುವ 'ಗುಜರಾತ್ ಕರಕುಶಲ ಉತ್ಸವ–2022'ಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗುಜರಾತ್ ರಾಜ್ಯದ ಕರಕುಶಲ ವಿಶೇಷ ವಸ್ತುಗಳ ಪ್ರದರ್ಶನ ಮತ್ತು ಮಾರಾಟವಿದ್ದು, ಮೈಸೂರಿಗರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು. ಜಿಪಂ ಸಿಇಓ ಸಿಇಓ ಬಿ.ಆರ್.ಪೂರ್ಣಿಮಾ, ಜೆಎಸ್‌ಎಸ್ ಲೆಕ್ಕಪರಿಶೋಧಕ ಅಧಿಕಾರಿ ಕೆ.ಆರ್.ಸಂತಾನಂ, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ.ಹೆಚ್.ಆರ್.ಮಹದೇವಸ್ವಾಮಿ, ಮಾರುಕಟ್ಟೆ ವ್ಯವಸ್ಥಾಪಕ ಡಾ.ಸ್ನೇಹಲ್ ಮಕ್ವಾನ, ಜೆಎಸ್‌ಎಸ್ ಅರ್ಬನ್ ಹಾತ್‌ನ ಯೋಜನಾಧಿಕಾರಿ ಶಿವನಂಜಸ್ವಾಮಿ, ಸುಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು.



ಗುಜರಾತ್ ಸಂಸ್ಕೃತಿ ಅನಾವರಣ: ಗುಜರಾತ್ ಸರ್ಕಾರದ ಇಂಡೆಕ್ಸ್ಟ್–ಸಿ ಸಂಸ್ಥೆ ವತಿಯಿಂದ ಆಯೋಜಿಸಿರುವ ಕರಕುಶಲ ಉತ್ಸವದಲ್ಲಿ ಗುಜರಾತ್ ಸಂಸ್ಕೃತಿಯನ್ನು ಅನಾವರಣಗೊಳಿಸಲಾಗಿದೆ. ರಾಜ್ಯದ 18 ಜಿಲ್ಲೆಗಳಿಂದ 90ಕ್ಕೂ ಹೆಚ್ಚು ಕರಕುಶಲಕರ್ಮಿಗಳು ಭಾಗವಹಿಸುತ್ತಿದ್ದಾರೆ.

ಕುಶಲಕರ್ಮಿಗಳು ತಯಾರಿಸಿದ ಪಟೋಲ ಸೀರೆಗಳು, ಬಾಂದಿನಿ ಸೀರೆಗಳು, ಕಸೂತಿ ಮಾಡಿದ ಬೆಡ್ ಶೀಟ್‌ಗಳು, ಟವಲ್‌ಗಳು, ಕುಶನ್ ಕವರ್‌ಗಳು, ಪರಿಸರ ಸ್ನೇಹಿ ಆಭರಣಗಳು, ಡ್ರೆಸ್ ಮೆಟೀರಿಯಲ್‌ಗಳು, ಮಣ್ಣಿನಿಂದ ತಯಾರಿಸಿದ ವಸ್ತುಗಳು, ಮೆಟಲ್ ವರ್ಕ್, ಕುರ್ತಿಗಳು, ಚನಿಯಾ ಚೋಲಿ, ಬಾಂದಿನಿ ಹಾಗೂ ಇನ್ನಿತರ ಆಕರ್ಷಕ ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳನ್ನು ಆಕರ್ಷಣೆಯಾಗಿವೆ.

ತಯಾರಕರಿಂದಲೇ ನೇರವಾಗಿ ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಉತ್ಪನ್ನಗಳನ್ನು ದೊರಕಲಿದ್ದು, ಗುಜರಾತ್ ಸಂಸ್ಕೃತಿಯ ಉಡುಗೆ–ತೊಡುಗೆಗಳು ಮತ್ತು ಅಲಂಕಾರಿಕ ವಸ್ತುಗಳನ್ನು ಕಡಿಮೆ ಬೆಲೆಗೆ ಖರೀದಿಸಬಹುದಾಗಿದೆ. ಅಲ್ಲದೆ ಶಾಲಾ ಮಕ್ಕಳು ಹಾಗೂ ಮಹಿಳೆಯರಿಗೆ ಗುಜರಾತ್ ಕರಕುಶಲ ಹಾಗೂ ಕಲೆಗಳ ತರಬೇತಿಯನ್ನು ಉಚಿತವಾಗಿ ಕರಕುಶಲ ಕರ್ಮಿಗಳೇ ನೀಡುತ್ತಿದ್ದಾರೆ.

ಗಮನ ಸೆಳೆದ ಗರ್ಬಾ ನೃತ್ಯ: ಗುಜರಾತಿನ ನೃತ್ಯ ಕಲಾವಿದರು ತಮ್ಮ ಸುಪ್ರಸಿದ್ಧ ಗರ್ಬಾ ನೃತ್ಯ ಪ್ರದರ್ಶನ ನೀಡಿ ಗಮನ ಸೆಳೆದರು. ಕಲಾವಿದರೊಂದಿಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ ಅವರು ಹೆಜ್ಜೆ ಹಾಕುವ ಮೂಲಕ ಸಾಥ್ ನೀಡಿದರು. ಮುಂದಿನ ಎರಡು ದಿನ ಸಂಜೆ ವೇಳೆ ಗರ್ಬಾ ನೃತ್ಯ ಪ್ರದರ್ಶನ ಇರಲಿದೆ.

ಬೆಲೆ ಏರಿಕೆ ಖಂಡಿಸಿ ಎಸ್‌ಯುಸಿಐ(ಸಿ) ಪ್ರತಿಭಟನೆ

ಮೈಸೂರು,ಜು.2(ಎಂಟಿವೈ)– ಅಗತ್ಯ ವಸ್ತುಗಳ ಹಾಗೂ ಇಂಧನ ಬೆಲೆ ಏರಿಕೆ ಖಂಡಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) (ಎಸ್‌ಯುಸಿಐ–ಸಿ) ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಮೈಸೂರಿನ ಡಿಸಿ ಕಚೇರಿ ಬಳಿ ಶನಿವಾರ ಧರಣಿ ನಡೆಸಿದ ಎಸ್‌ಯುಸಿಐಸಿ ಕಾರ್ಯಕರ್ತರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಳೆದ ಕೆಲವು ವರ್ಷಗಳ ದುರಾಡಳಿತದ ಫಲವಾಗಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿವೆ. ಸರ್ಕಾರದ ನಿಯಂತ್ರಣಕ್ಕೆ ಬಾರದಂತೆ ಬೆಲೆ ಏರಿಕೆಯಾಗುತ್ತಲೇ ಇದೆ. ಇದರಿಂದ ಜನಸಾಮಾನ್ಯರು ತತ್ತರಿಸಿದ್ದಾರೆ. ಬಡವರು ಜೀವನ ಸಾಗಿಸುವುದೇ ಕಷ್ಟವಾಗುತ್ತಿದೆ. ಜನಪ್ರತಿನಿಧಿಗಳು, ಬಡವರ ಸಂಕಷ್ಟಕ್ಕೆ ಸ್ಪಂದಿಸದೇ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ ಎಂದು ಕಿಡಿಕಾರಿದರು.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಅಡುಗೆ ಎಣ್ಣೆ, ದವಸ ಧಾನ್ಯಗಳು, ಪಾತ್ರೆಗಳು, ಚಪ್ಪಲಿ, ಔಷಧಿಗಳು, ಮನೆ ಬಾಡಿಗೆ, ಕಟ್ಟಡ ಸಾಮಗ್ರಿಗಳು ಮುಂತಾದ ಜನಾವಶ್ಯಕ ವಸ್ತುಗಳ ಬೆಲೆ ತೀವ್ರವಾಗಿ ಏರಿಕೆಯಾಗಿದೆ. ಅಡುಗೆ ಸಾಮಗ್ರಿಗಳ ಮೇಲೂ ಜಿಎಸ್‌ಟಿ ಏರಿಕೆ ಮಾಡಲಾಗಿದೆ. ಉದ್ಯೋಗಾವಕಾಶಗಳು ಕುಂಠಿತವಾಗಿವೆ. ಸರ್ಕಾರದ ನೇಮಕಾತಿ ಪ್ರಕ್ರಿಯೆ ಭ್ರಷ್ಟಾಚಾರದ ಕೂಪವಾಗಿದ್ದು ಹಣ, ಪ್ರಭಾವ ಇಲ್ಲದೇ ಯಾವ ಉದ್ಯೋಗವೂ ಸಿಗುವುದಿಲ್ಲ ಎಂಬಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಿ ಕಾಮಗಾರಿಗಳಲ್ಲಿ ಶೇ.40ರ ಕಮಿಷನ್ ವ್ಯವಹಾರದ ಬಗ್ಗೆ ಗುತ್ತಿಗೆದಾರರ ಸಂಘವೇ ಪ್ರಧಾನಿಗೆ ದೂರು ನೀಡಿದೆ. ಇದೇ ಕಾರಣಕ್ಕೆ ಗುತ್ತಿಗೆದಾರನೊಬ್ಬ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವೂ ನಡೆದಿದೆ. ನಾವು ಕಟ್ಟುವ ತೆರಿಗೆ ಹಣ ಭ್ರಷ್ಟರ ಪಾಲಾಗುತ್ತಿದೆ. ತೆರಿಗೆ ಎಷ್ಟೇ ಕಟ್ಟಿದರೂ ಸರ್ಕಾರದ ಖಜಾನೆ ತುಂಬುವುದಿಲ್ಲ. ಜನರ ಇಂತಹ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸುವ, ಪರಿಹಾರ ಸೂಚಿಸುವ ಬದಲು ದಿನನಿತ್ಯ ಒಂದಲ್ಲ ಒಂದು ಕೋಮುಭಾವನೆ ಕೆರಳಿಸುವ ವಿವಾದಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ಸರ್ಕಾರಗಳು ದುಡಿಯುವ ಜನರ ಒಗ್ಗಟ್ಟನ್ನು ಒಡೆದು ಬಂಡವಾಳಶಾಹಿ ಶೋಷಣೆಗೆ ಅನುಕೂಲ ಮಾಡಿಕೊಡುತ್ತಿದೆ. ಚುನಾಯಿತ ಪ್ರಜಾಸತ್ತಾತ್ಮಕ ಸರ್ಕಾರ ಎಲ್ಲಾ ಮತ ಧರ್ಮಗಳ ಬಗೆಗೂ ತಟಸ್ಥವಾಗಿರುವ ನೈಜ ಧರ್ಮ ನಿರಪೇಕ್ಷ ನೀತಿಯನ್ನು ಅನುಸರಿಸಬೇಕು ಎಂದು ಅವರು ಒತ್ತಾಯಿಸಿದರು.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲಗಳ ತೆರಿಗೆ ರದ್ದು ಮಾಡಿ, ಮೂಲಬೆಲೆಯಲ್ಲಿ ಒದಗಿಸಬೇಕು. ಅಗತ್ಯ ವಸ್ತುಗಳನ್ನು ಪಡಿತರ ಕಾರ್ಡ್ ಮೂಲಕ ವಿತರಿಸುವ ವ್ಯವಸ್ಥೆಯನ್ನು ಬಲಪಡಿಸಬೇಕು. ಭ್ರಷ್ಟಾಚಾರದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಿ, ಸರ್ಕಾರದ ವಿವಿಧ ಇಲಾಖೆಗಳ ಹೊರಗುತ್ತಿಗೆ ನೇಮಕಾತಿಯ ಸುಲಿಗೆಯನ್ನು ನಿಲ್ಲಿಸಿ. ಜನರನ್ನು ಕೋಮು– ಜಾತಿ ಆಧಾರದಲ್ಲಿ ಪ್ರಚೋದಿಸಿ ಒಗ್ಗಟ್ಟನ್ನು ಮುರಿಯುವ ಶಕ್ತಿಗಳನ್ನು ನಿಯಂತ್ರಿಸಿ, ಕಾನೂನು ರೀತ್ಯ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಯುಸಿಐಸಿ ಜಿಲ್ಲಾ ಕಾರ್ಯದರ್ಶಿ ಬಿ.ರವಿ, ಪದಾಧಿಕಾರಿಗಳಾದ ಎಂ.ಶಶಿಧರ್, ಎಂ.ಉಮಾದೇವಿ, ಚಂದ್ರಶೇಖರ್ ಮೇಟಿ, ಸಂಧ್ಯಾ, ಸೀಮಾ, ಹರೀಶ್, ಟಿ.ಆರ್.ಸುನಿಲ್, ಚಂದ್ರಕಲಾ, ಸುಭಾಷ್, ಆಸಿಯಾ ಬೇಗಂ, ನೀತುಶ್ರೀ ಮತ್ತಿತರರು ಪಾಲ್ಗೊಂಡಿದ್ದರು.

ಜು.5, ಹಲವೆಡೆ ನೀರು ಸರಬರಾಜು ವ್ಯತ್ಯಯ

ಮೈಸೂರು, ಜು.2–ಮೈಸೂರು ನಗರದಲ್ಲಿ ವಿದ್ಯುತ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜು.5 ರಂದು ವಾರ್ಡ್ ನಂ.9 ರಿಂದ 16, 28ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರ ನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾ ನಗರ, ಕ್ಯಾತಮಾರನಹಳ್ಳಿ ಹಾಗೂ ನರಸಿಂಹರಾಜ ಕ್ಷೇತ್ರ ವ್ಯಾಪ್ತಿಗೆ ಸೇರಿದ ಇನ್ನಿತರ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯತ್ಯಯವಾಗಲಿದೆ ಎಂದು ವಾಣಿ ವಿಲಾಸ ವಾಟರ್ ವರ್ಕ್ಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.



ಡಾ.ಫ.ಗು.ಹಳಕಟ್ಟಿಯವರಿಗೆ ವಚನ ಸಾಹಿತ್ಯ ಬೆಳಕಿಗೆ ತಂದ ಶ್ರೇಯಸ್ಸು ಸಲ್ಲುತ್ತದೆ; ಅತ್ಯಂತ ಅಮೂಲ್ಯ, ತತ್ವಜ್ಞಾನದಿಂದ ಕೂಡಿರುವ

'ವಚನ ಸಾಹಿತ್ಯ' ಜಾಗತಿಕ ಮಟ್ಟದಲ್ಲಿ ಪ್ರಸಾರಗೊಳ್ಳಲು ಸರ್ಕಾರದ ಉತ್ತೇಜನ ಅಗತ್ಯ

● ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ಅಭಿಮತ ● ಹಳಕಟ್ಟಿಯವರ ಜನ್ಮದಿನವೀಗ ವಚನ ಸಾಹಿತ್ಯ ಸಂರಕ್ಷಣಾ ದಿನ

ಮೈಸೂರು,ಜು.2(ಪಿಎಂ)–ವಚನ ಸಾಹಿತ್ಯ ಬೆಳಕಿಗೆ ತಂದು ಕನ್ನಡಿಗರಿಗೆ ಪರಿಚಯಿಸಿದ ಶ್ರೇಯಸ್ಸು ಡಾ.ಫ.ಗು.ಹಳಕಟ್ಟಿ ಅವರಿಗೆ ಸಲ್ಲುತ್ತದೆ. ಅತ್ಯಂತ ಅಮೂಲ್ಯ ಮತ್ತು ತತ್ವಜ್ಞಾನದಿಂದ ಕೂಡಿರುವ 'ವಚನ ಸಾಹಿತ್ಯ' ಜಾಗತಿಕ ಮಟ್ಟದಲ್ಲಿ ಪ್ರಚಾರ ಮತ್ತು ಪ್ರಸಾರಗೊಳ್ಳಲು ಸರ್ಕಾರ ಹೆಚ್ಚು ಉತ್ತೇಜನ ನೀಡುವ ಅಗತ್ಯವಿದೆ ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯ ಕುಮಾರಿ ಎಸ್.ಕರಿಕಲ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯಲ್ಲಿ (ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ) ಅವರು ಮಾತನಾಡಿದರು.

ಯುದ್ಧದಿಂದ ಬೇಗುದಿಗೊಂಡಿರುವ ಜಗತ್ತಿಗೆ ಸಾಂತ್ವನ ಮತ್ತು ಸಮಾಧಾನ ಸಿಗಬೇಕಾದರೆ, ವಚನ ಸಾಹಿತ್ಯದ ಜ್ಞಾನ ಮತ್ತು ತತ್ವವು ಜಾಗತಿಕ ಮಟ್ಟದಲ್ಲಿ ಪ್ರಚಾರ ಮತ್ತು ಪ್ರಸಾರ ಆಗಬೇಕಾದ ಅಗತ್ಯವಿದೆ. ಜಾಗತಿಕ ಮಟ್ಟಕ್ಕೆ ವಚನ ಸಾಹಿತ್ಯ ಪಸರಿಸುವ ಪ್ರಯತ್ನವಾಗಿ ಕೆಲ ವಚನಗಳನ್ನು ಇಂಗ್ಲಿಷ್‌ಗೆ ಹಳಕಟ್ಟಿಯವರೇ ಅನುವಾದ ಕೂಡ ಮಾಡಿದ್ದಾರೆ. ಇಂದೂ ಬೇರೆ ಬೇರೆ ಭಾಷೆಗಳಿಗೆ ವಚನ ಸಾಹಿತ್ಯ ಅನುವಾದಿಸುವ ಕೆಲಸಗಳು ಆಗುತ್ತಿವೆ. ಇದಕ್ಕೆ ಸರ್ಕಾರ ಹೆಚ್ಚಿನ ಉತ್ತೇಜನ ನೀಡುವ ಅಗತ್ಯವಿದೆ ಎಂದರು.

'ವಚನ ಸಾಹಿತ್ಯದ ಪಿತಾಮಹ', 'ವಚನಗುಮ್ಮಟ' ಎಂದು ಗುರುತಿಸಲ್ಪಟ್ಟ ಡಾ.ಫ.ಗು. ಹಳಕಟ್ಟಿ (ಡಾ.ಫಕೀರಪ್ಪ ಗುರುಬಸಪ್ಪ ಹಳಕಟ್ಟಿ) ಅವರ ಜನ್ಮದಿನ ಇಂದು. ಅವರ ಜನ್ಮದಿನವನ್ನು ಸರ್ಕಾರ ಈ ಬಾರಿ 'ವಚನ ಸಾಹಿತ್ಯ ಸಂರಕ್ಷಣಾ ದಿನ' ಎಂದು ಆಚರಣೆ ಮಾಡುತ್ತಿರುವುದು ಅರ್ಥಪೂರ್ಣ. ಹಳಕಟ್ಟಿ ಅವರಂತಹ ದಿವ್ಯ ಚೇತನ, ದೊಡ್ಡ ವ್ಯಕ್ತಿತ್ವ ಪರಿಚಯಿಸುವ ಕೆಲಸ ಆಗಬೇಕಿದೆ. ವಚನ ಸಾಹಿತ್ಯ ನಾವಿಂದು ಓದುತ್ತಿದ್ದರೆ, ಸಾಕಷ್ಟು ಸಂಶೋಧನೆಗಳು ನಡೆಯುತ್ತಿದ್ದರೆ ಅದಕ್ಕೆ ತಳಹದಿ ಹಾಕಿದವರು ಹಳಕಟ್ಟಿಯವರು ಎಂದು ಸ್ಮರಿಸಿದರು.



ಮೈಸೂರಿನ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯಲ್ಲಿ ಡಾ.ಫ.ಗು.ಹಳಕಟ್ಟಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ವಿದ್ಯಾರ್ಥಿ ಸಮುದಾಯಕ್ಕೆ ಹಳಕಟ್ಟಿಯವರ ಕೊಡುಗೆ ತಿಳಿಸುವ ಕೆಲಸ ಆಗಬೇಕಿದೆ. 1880ರ ಜು.2ರಂದು ಗುರುಬಸಪ್ಪ ಮತ್ತು ದಾನಮ್ಮ ದಂಪತಿ ಪುತ್ರರಾಗಿ ಧಾರವಾಡದಲ್ಲಿ ಹಳಕಟ್ಟಿ ಜನಿಸಿದರು. ಹುಟ್ಟಿದ 3 ವರ್ಷಗಳಲ್ಲೇ ಹಳಕಟ್ಟಿ ತಾಯಿಯನ್ನು ಕಳೆದುಕೊಳ್ಳುತ್ತಾರೆ. ಅಂದಿನ ಬ್ರಿಟಿಷ್ ಆಡಳಿತದಲ್ಲಿ ಮುಂಬೈ ಮತ್ತು ಪುಣೆಯಲ್ಲಿ ಹಳಕಟ್ಟಿಯವರು ತಮ್ಮ ಉನ್ನತ ಶಿಕ್ಷಣ ಪೂರೈಸಿದರು. ಈ ವೇಳೆ ಬೈಬಲ್ ಮಾದರಿಯಲ್ಲಿ ನಮ್ಮಲ್ಲಿ ಯಾವುದೂ ಇಲ್ಲವೇ? ಎಂಬ ಆಲೋಚನೆ ಅವರಲ್ಲಿ ಮೂಡುತ್ತದೆ. ಇದು ಮುಂದೆ ವಚನ ಸಾಹಿತ್ಯ ಸಂಶೋಧನೆಗೆ ದಾರಿಯಾಗುತ್ತದೆ ಎಂದರು. ಹುಟ್ಟಿದ್ದು ಧಾರವಾಡವಾದರೂ ಬಿಜಾಪುರವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡಿದ್ದ ಹಳಕಟ್ಟಿಯವರು, ಬಿಎ, ಎಲ್‌ಎಲ್‌ಬಿ ಪದವಿ ಪೂರ್ಣಗೊಳಿಸಿ, ಬಿಜಾಪುರದಲ್ಲಿ ವಕೀಲಿ ವೃತ್ತಿ ಆರಂಭಿಸುತ್ತಾರೆ. ಅವರು ಇದಕ್ಕೆ ಮಾತ್ರವೇ ಸೀಮಿತವಾಗಿದ್ದರೆ ವೈಭೋಗದ ಜೀವನ ನಡೆಸಬಹುದಿತ್ತು. ಆದರೆ ಅವರು ವಚನ ಸಾಹಿತ್ಯ ಸಂಶೋಧನೆಯ ಕಠಿಣ ಕೆಲಸವನ್ನು ಮೈಮೇಲೆ ಎಳೆದುಕೊಂಡು ಶ್ರಮ ವಹಿಸಿದರು. ತಮ್ಮ ಸೋದರ ಮಾವನಿಂದ ಪ್ರೇರಣೆಗೊಂಡು ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಹಸ್ತಪ್ರತಿ ಸಂಗ್ರಹಕ್ಕೆ ಊರೂರು ಸುತ್ತಾಟ ಆರಂಭಿಸಿದರು ಎಂದು ತಿಳಿಸಿದರು.

ಊರೂರು, ಮನೆ ಮನೆಗಳಿಗೆ ಹೋಗಿ ಅವರ ಮನವೊಲಿಸಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಹಳಕಟ್ಟಿಯವರು, ಅವುಗಳನ್ನು ಪ್ರಕಟಿಸಲು ಸ್ವಂತ ಮನೆ ಮಾರಿ ತಾವೇ 'ಹಿತಚಿಂತಕ' ಶೀರ್ಷಿಕೆಯಲ್ಲಿ ಮುದ್ರಣಾಲಯ ಸ್ಥಾಪಿಸುತ್ತಾರೆ. ಅಲ್ಲದೆ, ತಾವೇ ಪ್ರಾರಂಭಿಸಿದ 'ಶಿವಾನುಭವ' ಮಾಸಿಕ ಪತ್ರಿಕೆಯಲ್ಲಿ ವಚನಗಳನ್ನು ಪ್ರಕಟ ಮಾಡುತ್ತಾರೆ ಎಂದರು.

ನಿರಂತರವಾಗಿ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂಪಾದನೆಯಲ್ಲಿ ತೊಡಗಿರುವ ಜೊತೆಗೆ ಬಿಜಾಪುರದಲ್ಲಿ ರೈತರಿಗಾಗಿ ಬರಗಾಲ ನಿವಾರಣಾ ಕೇಂದ್ರ ಸ್ಥಾಪನೆ ಮಾಡುತ್ತಾರೆ. ಜೊತೆಗೆ ನೇಕಾರರ ಸಹಕಾರ ಸಂಘಗಳನ್ನು ಸ್ಥಾಪಿಸುವ ಮೂಲಕ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಕೆಲಸ ಮಾಡುತ್ತಾರೆ. ಕನ್ನಡದ ಬಗ್ಗೆ ಅತೀವವಾದ ಪ್ರೀತಿ ಹೊಂದಿದ್ದ ಅವರು, ಕನ್ನಡ ಶಾಲೆಗಳನ್ನು ತೆರೆದು ಕನ್ನಡ ಉಳಿಸಿ ಬೆಳೆಸುವ ಕೆಲಸ ಮಾಡುತ್ತಾರೆ. ಹಲವು ಆಯಾಮಗಳಲ್ಲಿ ಕನ್ನಡ ಕಟ್ಟಿ ಬೆಳೆಸಲು ಹಳಕಟ್ಟಿ ಶ್ರಮಿಸಿದ್ದಾರೆ ಎಂದು ಸ್ಮರಿಸಿದರು.

ಹಳಕಟ್ಟಿಯವರ ಜೀವನ, ಸಾಧನೆ ಮತ್ತು ಕೊಡುಗೆಗಳ ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಹ ಪ್ರಾಧ್ಯಾಪಕಿ ಡಾ.ಶಶಿಕಲಾ ಮುಖ್ಯ ಭಾಷಣ ಮಾಡಿದರು. ಇದಕ್ಕೂ ಮುನ್ನ ಹಳಕಟ್ಟಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : "ನಿನ್ನ ದೇಹದಲ್ಲಿ 265 ಮೂಳೆಗಳಿವೆ."
ಗುಂಡ : "ಮೆಲ್ಲಗೆ ಹೇಳಿ ಡಾಕ್ಟರ್,
ಹೊರಗೆ ನನ್ನ ನಾಯಿ ನಿಂತಿದೆ!"

ಮೈಸೂರು ಮಿತ್ರ
ಭಾನುವಾರ, 3 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ದುಃಖ ಆತ್ಮ ಪರಿಶೀಲನದ ಮಾರ್ಗ, ದುಃಖ ಹೃದಯಕ್ಕೊಂದು ಸಂಸ್ಕಾರ ನೀಡುತ್ತದೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೆಳಗಾನ ದುಡಿದರೂ ಬೇಳೆ ಕಾಸಿನ ಆದಾಯವಿಲ್ಲ

ನಿಮ್ಮ ಪತ್ರಗಳು

ಹೊಲದಲ್ಲಿ ವಾಸಿಸುವವರಿಗೆ ರಸ್ತೆ ಬೇಡವೆ...!?

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ತಂತಮ್ಮ ಹೊಲಗಳಲ್ಲಿ ಕೆಲವರು ಮನೆ ಮಾಡಿಕೊಂಡು ವಾಸಿಸುತ್ತಿದ್ದಾರೆ. ಮನೆ ನಿರ್ಮಿಸಿಕೊಂಡು ವಾಸಿಸಲು ಸರಿಯಾದ ಜಾಗವಿಲ್ಲದ ಕಾರಣ ಇವರು ಹೊಲಗಳಲ್ಲೇ ವಾಸ ಮಾಡುವಂತಾಗಿದೆ. ಇಲ್ಲಿ ಓಡಾಡಲು ಸರಿಯಾದ ರಸ್ತೆಗಳಿಲ್ಲ. ತಿರುಗಾಡಲಷ್ಟೇ ಸಾಧ್ಯವಾಗುವಷ್ಟು ಮಾತ್ರ ಜಾಗ ಇಲ್ಲಿದೆ. ಇನ್ನೂ ಎತ್ತಿನ ಗಾಡಿ, ವಾಹನಗಳು ಓಡಾಡಲಾಗದ ಸ್ಥಿತಿ ನಿರ್ಮಾಣವಾಗಿದೆ. ಮಳೆಗಾಲದಲ್ಲಂತೂ ಇಲ್ಲಿ ವಾಸಿಸುವ ಜನರ ತಿರುಗಾಟವನ್ನು ಆ ದೇವರೇ ನೋಡಿ ಖುಷಿ ಪಡಬೇಕು.! ಕೃಷಿ ಉತ್ಪನ್ನಗಳ ಸಾಗಣೆ, ತಂಬಾಕು ಹದ ಮಾಡುವಾಗ ಎತ್ತಿನಗಾಡಿಯ ಬಳಕೆ ಅಗತ್ಯ ಹಾಗೂ ಅನಿವಾರ್ಯವಾಗಿದೆ. ಆದರೆ ಸರಿಯಾದ ರೀತಿಯಲ್ಲಿ ರಸ್ತೆ ಇಲ್ಲದ್ದರಿಂದ ಅವರ ಗೋಳು ಹೇಳತೀರದು.



ಈ ಚಿತ್ರದಲ್ಲಿ ಕಾಣುವಂತೆ ಈ ಹಿಂದೆ ಇದ್ದ ಗ್ರಾಮ ಪಂಚಾಯಿತಿ ಸದಸ್ಯರ ನೆರವಿನಿಂದ ಈಗಾಗಲೇ ಇಲ್ಲಿಗೆ ವಿದ್ಯುತ್ ಹಾಗೂ ನಲ್ಲಿ ನೀರಿನ ಸಂಪರ್ಕವನ್ನು ಕಲ್ಪಿಸಲಾಗಿದೆ. ಆದರೆ ಕಾನೂನಾತ್ಮಕ ನಡೆಯೇನೆಂದರೆ ಮೊದಲು ರಸ್ತೆ ನಿರ್ಮಾಣ ಮಾಡಿ ಆನಂತರ ವಿದ್ಯುತ್ ಹಾಗೂ ನಲ್ಲಿ ಸಂಪರ್ಕ ಕಲ್ಪಿಸುವುದಾಗಿದೆ. ಈ ಅವ್ಯವಸ್ಥೆಯ ಬಗ್ಗೆ ಈ ಹಿಂದೆ ಇದ್ದ ಹಾಗೂ ಈಗ ಹಾಲಿ ಇರುವ ಸದಸ್ಯರಿಗೆ ಹೇಳಿ ಆಗಿದೆ. ಆದರೂ ಇದು ಇನ್ನೂ ಕಾರ್ಯಗತವಾಗಿಲ್ಲ. ದೂರು ಹೇಳಿ ಪರಿಹಾರ ಕೇಳಿದರೆ ಆಗ ಈಗ ಅಂತ ಸಬೂಬು ಹೇಳುತ್ತ ಕಾಲ ದೂಡುತ್ತಿದ್ದಾರೆ. ಮತ್ತೂ ಕೇಳಿದರೆ 'ನಮ್ಮ ಹೊಲ ನಮ್ಮ ರಸ್ತೆ' ಈ ಯೋಜನೆ ಅಡಿಯಲ್ಲಿ ಇನ್ನೇನು ಕೆಲ ದಿನಗಳಲ್ಲಿ ಇದು ಆರಂಭವಾಗುತ್ತದೆ, ಅಲ್ಲಿಯವರೆಗೂ ಕಾಯಿರಿ ಎನ್ನುತ್ತಾರೆ.

ದೊಡ್ಡಬೇಲಾಳು ಗ್ರಾಮ ಪಂಚಾಯಿತಿ ಅಧ್ಯಕ್ಷರು, ಅರೇನಹಳ್ಳಿ ಗ್ರಾಮ ಪಂಚಾಯತ್ ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಕೆಲ ಸ್ಥಳೀಯ ಕಾನೂನಾತ್ಮಕ ತೊಡಕುಗಳನ್ನು ನಿವಾರಿಸಿ ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಂಡು ರಸ್ತೆ ಸಂಪರ್ಕ ಕಲ್ಪಿಸಲಿ ಎಂದು ಅಲ್ಲಿನ ನಿವಾಸಿಗಳ ಮನವಿ.

–ಎ.ಎಸ್.ಗೋವಿಂದೇಗೌಡ, ಪಿರಿಯಾಪಟ್ಟಣ ತಾ.

ಹಾರಂಗಿ ನೀರು ಹರಿಸಿ, ತಂಬಾಕು ಉಳಿಸಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನಲ್ಲಿ ಕಳೆದ ಒಂದು ತಿಂಗಳಿಂದ ಮಳೆಯಿಲ್ಲದೆ ತಂಬಾಕು ಬೆಳೆ ಒಣಗಿ ಹೋಗುತ್ತಿದ್ದು, ರೈತರು ಆತಂಕ ಪಡುವಂತಾಗಿದೆ. ಅಲ್ಲದೆ ತಂಬಾಕು ಕಟಾವಿಗೆ ಬಂದಿದ್ದು, ರೈತರು ಸಂಕಷ್ಟಕ್ಕೆ ಈಡಾಗಿದ್ದಾರೆ. ಶೇ. 40 ರಷ್ಟು ಭಾಗ ತಂಬಾಕು ಬೆಳೆಗಾರರು ಹಾರಂಗಿ ನಾಲೆ ಅಚ್ಚುಕಟ್ಟು ಪ್ರದೇಶದಲ್ಲಿರುವುದರಿಂದ ತಕ್ಷಣವೇ ತಂಬಾಕು ಬೆಳೆಗಾರರಿಗೆ ಹಾರಂಗಿ ನಾಲೆಯ ಮೂಲಕ ನೀರು ಬಿಟ್ಟು ರೈತರನ್ನು ರಕ್ಷಿಸಬೇಕು. ಕೂಡಲೇ ಹಾರಂಗಿ ಇಲಾಖೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ ಹಾರಂಗಿ ನಾಲೆಯ ಮೂಲಕ ನೀರನ್ನು ಹರಿಸುವುದರಿಂದ ಅಲ್ಪಸ್ವಲ್ಪ ತಂಬಾಕನ್ನು ಬೆಳೆಯಲು ರೈತರಿಗೆ ಅನುಕೂಲವಾಗುತ್ತದೆ. ಇಲ್ಲವಾದರೆ ರೈತರು ಸಾಲದ ಶೂಲಕ್ಕೆ ಸಿಲುಕಿ ಸಂಕಷ್ಟಕ್ಕೆ ಈಡಾಗುವ ಮುನ್ನ ಅಧಿಕಾರಿಗಳು ಎಚ್ಚರ ವಹಿಸಬೇಕು.

– ನೊಂದ ರೈತರು, ಪಿರಿಯಾಪಟ್ಟಣ ತಾಲೂಕು.

ಬೆಟ್ಟದಪುರದಲ್ಲಿ ಕೋತಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರದಲ್ಲಿ ಕೋತಿಗಳ ಹಾವಳಿ ಜಾಸ್ತಿಯಾಗಿದ್ದು, ಸಣ್ಣ ಪುಟ್ಟ ಮಕ್ಕಳ ಮೇಲೆ ದಾಳಿ ಮಾಡಿ ಗಾಯಗೊಳಿಸಿವೆ. ಇದರಿಂದ ಜನರು ಬೀದಿಯಲ್ಲಿ ಓಡಾಡಲು ಭಯಪಡುವಂತಾಗಿದೆ. ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ನಾಯಿಗಳ ಹಾವಳಿ ಸಹ ಮಿತಿಮೀರಿದ್ದು, ರಾತ್ರಿ ವೇಳೆಯಲ್ಲಿ ನಿದ್ರೆ ಮಾಡಲು ತೊಂದರೆಯಾಗುತ್ತಿದೆ. ಪ್ರತಿದಿನ ಬೆಳಗ್ಗೆಯಾದರೆ ಶಾಲಾ ಮಕ್ಕಳು ಶಾಲೆಗೆ ಹೋಗಲು ಭಯಪಡುತ್ತಿದ್ದಾರೆ. ತಕ್ಷಣವೇ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ನೊಂದ ನಿವಾಸಿಗಳು, ಬೆಟ್ಟದಪುರ, ಪಿ.ಪಟ್ಟಣ ತಾಲೂಕು.

ಮುಕ್ತಿ ಕಾಣಿಸಣ್ಣಾ

ಅಣ್ಣಾ ಅಣ್ಣಾ ಪೊಲೀಸಣ್ಣ ಆಸ್ಪತ್ರೆ,
ಶವಾಗಾರಕೆ ಬಂದಿರೋ ಪೊಲೀಸಣ್ಣ...
ಅಣ್ಣಾ ನಾ ಮಾದ, ನಾ ಕರಿಯ, ನಾ ವೇದ, ನಾ ನಾಸೀರ,
ನಾ ಬೀರ್ ಸಿಂಗ್, ನಾ ಮೇರಿ, ನಾ ಗೌಡ, ನಾ ಅಯ್ಯರ್, ಅಣ್ಣಾ
ನಾ ಬೆಂಕೀಲಿ, ನಾ ನೀರಲ್ಲಿ, ನಾ ಆಕ್ಸಿಡೆಂಟಲ್ಲಿ, ನಾ ಕೆರೆಯಲ್ಲಿ,
ನಾ ಹಾವ್ ಕಡಿದು, ನಾ ಹುಲಿ ತಿಂದು, ನಾ ಆನೆ ತುಳಿದು
ನಾ ಸಿಡಿಲು ಬಡಿದು, ನಾ ವಿಷ ಕುಡಿದು, ನಾ ಬಾವೀಲಿ ಬಿದ್ದು ಸತ್ತವ್ರಣ್ಣಾ
ನೀ ಆ ಜಾತಿ, ನೀ ಈ ಜಾತಿ ನೀ ಬಡವಾ, ನೀ ಹಣದವಾ
ಅಂತ ತಾರತಮ್ಯ ಮಾಡದೇ ಒಂದೇ ಐಸ್ ಪೆಟ್ಟಿಗೇಲಿ ನಮ್ಮ ಹಾಕವ್ರಣ್ಣಾ
ಆ ಸಮಾಜದ ಹುಚ್ಚು ತಾರತಮ್ಯ ಇಲ್ಲಣ್ಣಾ ಇಲ್ಲಿ.
ಅಣ್ಣಾ ಸಾಕಣ್ಣಾ ಈ ಭೂಲೋಕದ ಸಹವಾಸ
ಮೊದಲು ನಮ್ಮ ಹೊರಕ್ಕೆಳೆದು ಮುಕ್ತಿ ಕಾಣಿಸಣ್ಣಾ. ನಮಗೆ
ಬದುಕಿದ್ದಾಗ ಈ ಸಮಾಜ ನಮ್ಮ ಇಂಗೆ ಒಟ್ಟಾಗಿ ಸೇರ ಬಿಡಲಿಲ್ಲಣ್ಣಾ
ಸತ್ತ ಮ್ಯಾಗಾದ್ರು ಒಟ್ಟಾಗಿ ಒಂದೇ ಪೆಟ್ಟಿಗೆಯಾಗೆ ಸೇರೀವಿ
ಇದ ತಿಳಿದು ಇನ್ ಮ್ಯಾಗಾದ್ರು ಸಮಾಜ ತಾರತಮ್ಯ ಬಿಡಬೇಕಣ್ಣಾ
ಪೋಲೀಸಣ್ಣಾ ಮುಕ್ತಿ ಕಾಣಿಸಣ್ಣಾ ನಮಗೆ

– ಕೆ.ಎಸ್.ರಾಜು, ಎಎಸ್ಐ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ದೇಶಪ್ರೇಮ ಹೃದಯಾಂತರ್ಗತವಾಗಲಿ





ಇತ್ತೀಚೆಗೆ ನನಗೆ ಜಮ್ಮು–ಕಾಶ್ಮೀರದ ಪ್ರವಾಸದ ಅವಕಾಶ ದೊರಕಿತ್ತು. ಸಿಂಧೂ ದರ್ಶನ ಯಾತ್ರಾ ಸಮಿತಿಯವರು ಪ್ರತಿವರ್ಷ ಏರ್ಪಡಿಸುವ ಸಿಂಧೂ ದರ್ಶನ ಉತ್ಸವದಲ್ಲಿ ಎರಡನೇ ಸಲ ಭಾಗಿಯಾಗುವ ಅವಕಾಶ ಇದಾಗಿತ್ತು. (ಈ ಹಿಂದೆ 2017 ರಲ್ಲಿ ಒಮ್ಮೆ ಅವಕಾಶವಾಗಿತ್ತು). ನಮ್ಮಲ್ಲಿ ಬಹುತೇಕರಿಗೆ ಸಿಂಧೂ ನದಿ ಪಾಕಿಸ್ತಾನದಲ್ಲಿ ಹರಿಯುತ್ತದೆ ಎಂಬ ಅಭಿಪ್ರಾಯವಿದೆ. ಆದರೆ ಚೈನಾದ ಮಾನಸ ಸರೋವರದ ಬಳಿ ಉದ್ಭವವಾಗುವ ಸಿಂಧೂ ನದಿ ಭಾರತದ ಲೇಹ್ – ಲಡಾಕ್‌ನಲ್ಲಿ ಹರಿದು ನಂತರ ಪಾಕಿಸ್ತಾನ ಸೇರುತ್ತದೆ. (ಈ ಉತ್ಸವದ ಕುರಿತು ಮತ್ತೊಮ್ಮೆ ಬರೆಯುವೆ.)

ಈ ಉತ್ಸವದಲ್ಲಿ ಭಾಗವಹಿಸುವ ಮೊದಲು ಅಮೃತಸರಕ್ಕೆ ಭೇಟಿ ನೀಡುವ ಅವಕಾಶವಾಯಿತು. ಪಂಜಾಬಿನ ರಾಜಧಾನಿ ಚಂಡೀಗಢ ಆದರೂ ಆ ರಾಜ್ಯದಲ್ಲಿ ಪ್ರಾಮುಖ್ಯತೆ ಇರುವ ನಗರಗಳಲ್ಲಿ ಅಮೃತಸರ ಮುಖ್ಯವಾದುದು. ಈ ಊರಿನಲ್ಲಿರುವ ಜಲಿಯನ್ ವಾಲಾಭಾಗ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರ ವಿರುದ್ಧ ಜನರಲ್ ಡಯರ್ ತನ್ನ ಸೈನಿಕರ ಮೂಲಕ ಗುಂಡು ಹಾರಿಸಿ ಸಾವಿರಾರು ಜನರ ಸಾವಿಗೆ ಕಾರಣನಾದ. ಈ ಘಟನೆ ನಡೆದಿದ್ದು 13 ಏಪ್ರಿಲ್ 1919 ರಲ್ಲಿ. ಅದರಲ್ಲಿ ಸಾವಿರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಈ ಕುಖ್ಯಾತ ಘಟನೆ ನಡೆದಿದ್ದು ಅಮೃತಸರದಲ್ಲಿ. ಈಗಲೂ ಈ ಪ್ರದೇಶ ವೀಕ್ಷಿಸಬಹುದು. ಇದು ಇಲ್ಲಿನ ಪ್ರಸಿದ್ಧ ಹರ್ಮಿಂದರ್ ಸಾಹಿಬ್ (ಗೋಲ್ಡನ್ ಟೆಂಪಲ್) ಸಮೀಪದಲ್ಲಿದೆ. ಹಾಗಾಗಿ ಅಮೃತಸರಕ್ಕೆ ಭೇಟಿ ನೀಡುವವರು ಜಲಿಯನ್ ವಾಲಾಭಾಗ್‌ಗೆ ಭೇಟಿ ನೀಡುತ್ತಾರೆ. ಅಲ್ಲಿನ ಸನ್ನಿವೇಶ ಗಮನಿಸಿದಾಗ ಹೃದಯ ಭಾರವಾಗುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಇಂತಹ ಲಕ್ಷಾಂತರ ಜನರ ಬಲಿದಾನವಾಗಿದೆ. ಅದೇಕೋ ಆ ಸ್ವಾತಂತ್ರ್ಯ ಸಮರ ಹಾಗೂ ಅದರಲ್ಲಿ ಹುತಾತ್ಮ ದೇಶಭಕ್ತರ ಬಗ್ಗೆ ಇಂದಿನ ಯುವ ಸಮೂಹ ಮರೆಯುತ್ತಿದೆ ಎನಿಸುತ್ತಿದೆ. ಇಂತಹ ಜಾಗಗಳಿಗೆ ಭೇಟಿ ನೀಡಬೇಕು. ನಮ್ಮಲ್ಲಿ ಹೇಳುವ ಮುಖ್ಯವಾದ ಮಾತು ಎಂದರೆ 'ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ' ಎಂದು. ಹೀಗಾಗಿ ಇಂದಿನ ಯುವ ಸಮೂಹ ಇಂತಹ ಜಾಗಗಳಿಗೆ ಭೇಟಿ ನೀಡಿ ದೇಶದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವುದು ಅಗತ್ಯ ಎನಿಸುತ್ತದೆ.

ಅಮೃತಸರದಿಂದ 32 ಕಿಲೋ ಮೀಟರು ಕ್ರಮಿಸಿದರೆ ನಮಗೆ ವಾಘಾ ಗಡಿ ಸಿಗುತ್ತದೆ. 'ವಾಘಾ ಬಾರ್ಡರ್' ಎಂದೇ ಈ ಪ್ರದೇಶ ಹೆಸರುವಾಸಿ. 'ವಾಹ್ಗಾ' ಎಂಬುದು ಒಂದು ಪುಟ್ಟ ಹಳ್ಳಿ. ಅದರ ಹೆಸರಿನಿಂದ ವಾಘಾ ಬಂದಿದೆ. ಇಲ್ಲಿ ರಸ್ತೆ ರೈಲು ಸಂಪರ್ಕವಿದೆ. ಭಾರತ ಪಾಕಿಸ್ತಾನದ ನಡುವಿನ ಸಂಚಾರಕ್ಕೆ ಇದನ್ನು ಬಳಸಬಹುದು. ವಾಘಾ ಪಾಕಿಸ್ತಾನಕ್ಕೆ ಸೇರಿದ್ದರೆ ಅಟಾರಿ ಎಂಬ ಗ್ರಾಮ ಭಾರತದ್ದು. ಹಾಗಾಗಿ ವಾಘಬಾರ್ಡರ್ ಎಂದರೆ ನಮ್ಮವರಿಗೆ ಸ್ವಲ್ಪ ಸಿಟ್ಟು ಬರುತ್ತದೆ. ನಾವು ಅಟ್ಟಾರಿ ಗಡಿ ಎನ್ನಬೇಕು ಎಂದು ಅವರು ತಿದ್ದುತ್ತಾರೆ. ಭಾರತೀಯರು ಅಟ್ಟಾರಿ ಗಡಿ ಎಂದೇ ಕರೆಯಬೇಕು ಎಂಬುದು ಅವರ ಆಗ್ರಹ. ಈ ಅಟ್ಟಾರಿಯಿಂದ ಸುಮಾರು 18 ಕಿ. ಮೀ ದೂರದಲ್ಲಿ ಪಾಕಿಸ್ತಾನದ ಪ್ರಮುಖ ಪಟ್ಟಣ ಲಾಹೋರ್ ಇದೆ. ಅಂದರೆ ಭಾರತ ಪಾಕಿಸ್ತಾನದ ಗಡಿಯಿಂದ ಭಾರತದ ಪ್ರಮುಖ ಪಟ್ಟಣ ಅಮೃತಸರ 32 ಕಿ. ಮೀ ದೂರದಲ್ಲಿದ್ದರೆ, ಲಾಹೋರ್ ಕೇವಲ 18 ಕಿ.ಮೀ. ದೂರದಲ್ಲಿದೆ. ಲಾಹೋರ್ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಪ್ರದೇಶಗಳಲ್ಲಿ ಒಂದು. ಅಲ್ಲಿ ದೊಡ್ಡ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ದೇಶ ವಿಭಜನೆಯಾಯಿತು. ಪಾಕಿಸ್ತಾನ ಬೇರೆಯಾಯಿತು, ಭಾರತದ ಪ್ರಮುಖ ನಗರಗಳಲ್ಲಿ ಒಂದಾಗಿದ್ದ ಲಾಹೋರ್ ಭಾರತದಿಂದ ಬೇರೆಯಾಯಿತು. ಒಂದು ರೀತಿ ವಿರೋಧಿ ಪಾಳೆಯ ಸೇರಿದ ಸ್ನೇಹಿತನಂತೆ. ಇಂದು ಭಾರತ ಪಾಕಿಸ್ತಾನ ನಡುವಿನ ಸಂಬಂಧ ಉತ್ತಮ ಎಂದು ಹೇಳಬಹುದಾದ ಸ್ಥಿತಿಯಲ್ಲಿಲ್ಲ. ಭಾರತೀಯರು ಪಾಕಿಸ್ತಾನವನ್ನು ಇಷ್ಟಪಡದಂತೆ ಆ ದೇಶದವರೂ ನಮ್ಮ ದೇಶ ಇಷ್ಟಪಡದಿರಬಹುದು. ಇದೊಂದು ರಾಜಕೀಯದ ಚದುರಂಗದ ಆಟ. ಆದರೆ ಸಾಮಾನ್ಯ ಜನರಿಗೆ ಅವರ ಜೀವನ ನಿರ್ವಹಣೆ ಮುಖ್ಯವಾಗುವುದೇ ವಿನಃ ಇತರ ವಿಷಯಗಳಲ್ಲ. ಅಲ್ಲದೆ ಆಯಾ ದೇಶದಲ್ಲಿ ವಾಸಿಸುವವರು ಆಯಾ ದೇಶವನ್ನು ಟೀಕಿಸಬೇಕು. ಗೌರವಿಸಬೇಕು ಎಂಬುವುದೂ ಒಪ್ಪುವ ಮಾತೇ ಆಗಿದೆ.

ಆ ಅಟ್ಟಾರಿ(ವಾಘಾ) ಗಡಿಯಲ್ಲಿ ಪ್ರತಿದಿನ ಒಂದು ಕೌತುಕದ ಘಟನೆ ನಡೆಯುತ್ತದೆ. ಅದು ಧ್ವಜಾರೋಹಣ ಹಾಗೂ ಧ್ವಜಾವರೋಹಣದ ಸನ್ನಿವೇಶ. ನಮ್ಮ ದೇಶದಲ್ಲಿ (ಪಾಕಿಸ್ತಾನದಲ್ಲೂ) ರಾಷ್ಟ್ರಧ್ವಜವನ್ನು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಹಾರಿಸಬೇಕು ಎಂಬ ನಿಯಮವಿದೆ. ಅದರಂತೆ ಧ್ವಜಾರೋಹಣ, ಅವರೋಹಣ ನಡೆಯುತ್ತದೆ. ಆದರೆ ಅಟ್ಟಾರಿ ಬಾರ್ಡರ್‌ನ ಧ್ವಜಾರೋಹಣ ವಿಶಿಷ್ಟ ರೀತಿಯಲ್ಲಿ ನಡೆಯುವುದರಿಂದ ಅದು ಜನರನ್ನು ಆಕರ್ಷಿಸುತ್ತದೆ.

ಇಲ್ಲಿ, ಭಾರತ ಪಾಕಿಸ್ತಾನದ ಗಡಿಯಲ್ಲಿ, ಭಾರತ ಹಾಗೂ ಪಾಕಿಸ್ತಾನ ಎರಡೂ ದೇಶಗಳ ಧ್ವಜ ಹಾರಾಡುತ್ತದೆ. ಗಡಿಯ ರೇಖೆಯಲ್ಲಿ ಸಮಾನಾಂತರ ಧ್ವಜಸ್ತಂಭಗಳಲ್ಲಿ, ಸಮಾನತೆಯ ಅಳತೆಯ ಆಯಾ ದೇಶದ ಧ್ವಜ ಹಾರಾಡುತ್ತದೆ. ಧ್ವಜಾವರೋಹಣ ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ. ಈ ಗಡಿ ಗೆರೆಯ ಒಂದು ಕಡೆ ಭಾರತೀಯರು ಕುಳಿತು ಈ ಕೌತುಕದ ಘಟನೆ ವೀಕ್ಷಿಸಬಹುದಾದರೆ, ಮತ್ತೊಂದು ಕಡೆ ಪಾಕಿಸ್ತಾನೀಯರು ಕುಳಿತು ನೋಡುತ್ತಾರೆ. ಭಾರತದ ಭಾಗದಿಂದ ಸುಮಾರು 40–50 ಸಾವಿರ ಜನ ವೀಕ್ಷಿಸುವ ಅವಕಾಶ ಇದೆ.

ಸಂಜೆ 4ರ ಹೊತ್ತಿಗೆ ಅಲ್ಲಿ ಕುಳಿತುಕೊಳ್ಳಲು ಸಾರ್ವಜನಿಕರಿಗೆ ಅವಕಾಶ ನೀಡಲಾಯಿತು. ಈಗ ಅಲ್ಲಿ ಕಡು ಬಿಸಿಲ ಬೇಸಿಗೆ. ಕುಳಿತುಕೊಳ್ಳಲು ಗ್ಯಾಲರಿ ಇದೆ. ಗ್ಯಾಲರಿಯಲ್ಲಿ ಕಲ್ಲಿನ ಸ್ಲ್ಯಾಬ್ ಬಳಸಲಾಗಿದೆ. ಆದರೆ ಕಲ್ಲು ಕಾದಿರುವುದರಿಂದ ಹೆಚ್ಚು ಹೊತ್ತು ಕುಳಿತುಕೊಳ್ಳುವುದು ಕಷ್ಟ, ತಲೆ ಮೇಲೆ ತೀಕ್ಷ್ಣವಾದ ಬಿಸಿಲು. ಕುಳಿತಲ್ಲಿಗೇ ಕುಡಿಯುವ ನೀರಿನ ಬಾಟಲ್ ಮಾರುವವರು, ತಂಪು ಪಾನೀಯ–ತಿಂಡಿ ಮಾರುವವರು ಬರುತ್ತಾರೆ. ಬಿಸಿಲಿನ ಝಳ ಹೇಗೆ ಇರುತ್ತದೆ ಎಂದರೆ ಅರ್ಧ ಗಂಟೆಯೊಳಗೆ ಒಂದು ಲೀಟರ್ ನೀರು ಖಾಲಿಯಾಗುತ್ತದೆ. ಹಾಗೆಂದು ಜನರ ಉತ್ಸಾಹ ಕೊಂಚವೂ ಕಡಿಮೆಯಾಗುವುದಿಲ್ಲ. ಕುಳಿತಲ್ಲೇ ಎರಡೂ ದೇಶದ, ಎರಡೂ ಬದಿಯ ಗಡಿ ವೀಕ್ಷಿಸುವ ಅವಕಾಶ.

ಆ ಜಾಗದ ಮಹಿಮೆಯೋ ಏನೋ! ಅಲ್ಲಿ ಬಂದು ಕುಳಿತುಕೊಳ್ಳುತ್ತಿದ್ದಂತೆ ಜನರ ಬಾಯಲ್ಲಿ 'ಭಾರತ್ ಮಾತಾಕೀ ಜೈ', 'ವಂದೇ ಮಾತರಂ', 'ಹಿಂದೂಸ್ತಾನ್ ಜಿಂದಾಬಾದ್', 'ಇಂಡಿಯನ್ ಆರ್ಮಿ ಜಿಂದಾಬಾದ್' ಎಂಬ ಘೋಷಣೆ ನಿರಂತರವಾಗಿ ಉದ್ಘೋಷವಾಗುತ್ತಿರುತ್ತದೆ. ಒಬ್ಬ ಏರು ದನಿಯಲ್ಲಿ ಕೂಗಿದರೆ, ಅದೇ ಏರು ದನಿಯಲ್ಲಿ ಇತರರು ಘೋಷಣೆ ಕೂಗುತ್ತಾರೆ. ಕ್ರಮೇಣ ಇದು ಆವೇಶಕ್ಕೆ ತಿರುಗುತ್ತದೆ. ಗಡಿ ಭಾಗದಲ್ಲಿ ಮಾರಲಾಗುವ ನಮ್ಮ ತ್ರಿವರ್ಣ ಧ್ವಜ ಖರೀದಿಸಿ ತಂದವರು ಅದನ್ನು ಬೀಸಿದಾಗ ಜನ ಮತ್ತಷ್ಟು ಉದ್ವೇಗದಿಂದ ಘೋಷಣೆ ಕೂಗುತ್ತಾರೆ. ಇದು ಧ್ವಜಾರೋಹಣದವರೆಗೂ ನಿರಂತರವಾಗಿ ನಡೆಯುತ್ತದೆ. ನಾನು ಗಮನಿಸಿದಂತೆ ಸೇರುವ ಜನರಲ್ಲಿ ಮುಕ್ಕಾಲು ಭಾಗದವರು ಯುವ ಜನರು. ಅವರ ಉತ್ಸಾಹ ವರ್ಣಿಸಲು ಸಾಧ್ಯವಾಗದಂತಹುದು. ಗಂಟಲು ಕಟ್ಟಿ ಬರುವಂತೆ ಘೋಷಣೆ ಕೂಗುತ್ತಾರೆ. ಅವರ ನರನಾಡಿಗಳಲ್ಲಿ ದೇಶಭಕ್ತಿ ಉದ್ದೀಪನೆ ಆಗಿರುತ್ತದೆ. ಇದರ ಗುಂಗು ಹೇಗಿರುತ್ತದೆ ಎಂದರೆ ಸಮಾರಂಭ ಮುಗಿದು ಹೊರ ಬರುವಾಗಲೂ ಅದೇ ಮನೋಭಾವ. ಸಾವಿರಾರು ಜನರಿದ್ದರೂ ಯಾವುದೇ ಗಲಭೆ ಗೊಂದಲಗಳಿಲ್ಲ. ತಾವು ಯಾವುದೋ ಒಂದು ಕೃತಾರ್ಥ ಸಮಾರಂಭದಲ್ಲಿ ಭಾಗವಹಿಸಿ ಬಂದೆವು ಎಂಬ ಸಾರ್ಥಕ ಹಾಗೂ ಭಕ್ತಿಯ ಭಾವನೆ ಅಲ್ಲಿ ಕಂಡುಬರುತ್ತದೆ.

ಇದನ್ನು ಗಮನಿಸಿದಾಗ ನನಗೆ ನಮ್ಮ ಯುವಜನತೆಯ ಬಗ್ಗೆ ತಪ್ಪು ಕಲ್ಪನೆ ಕಂಡು ಬರುವುದಿಲ್ಲ. ಅವರು ಉಢಾಳರಂತೆ, ಶೋಕಿಲಾಲಾಗಳಂತೆಯೂ ಕಂಡು ಬರುವುದಿಲ್ಲ. ಹೊರಗಡೆ ಯುವಜನತೆ ಎಂದರೆ ಬೇಜವಾಬ್ದಾರಿಯವರು ಎಂಬಂತೆ ಕಂಡು ಬಂದರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದ ಆ ಯುವಕರು ಆ ರೀತಿ ಕಂಡು ಬರಲಿಲ್ಲ. ಅಂದರೆ ಅವರನ್ನು ನಾವು ಯಾವ ದಾರಿಯಲ್ಲಿ ಕರೆದೊಯ್ಯುತ್ತಿದ್ದೇವೆ ಎಂಬ ಬಗ್ಗೆ ಚಿಂತಿಸುವಂತೆ ಮಾಡಿತು. ಹೊರಗಡೆ ಬೇಜವಾಬ್ದಾರಿಯವರಂತೆ ಕಂಡು ಬರುವ ಯುವಕರು ಅಲ್ಲೇಕೆ ದೇಶಭಕ್ತಿಯ ಉತ್ತುಂಗತೆ ಮೆರೆಯುತ್ತಾರೆ? ಅವರಲ್ಲಿ ದೇಶಭಕ್ತಿ, ಆವೇಶದ ರೂಪದಲ್ಲಿ ಏಕೆ ಹರಿಯುತ್ತದೆ? ಇವರು ಅದೇ ಯುವಕರಾ? ಎಂಬ ಪ್ರಶ್ನೆ ಏಕೆ ಮೂಡುತ್ತದೆ? ಎಂಬ ಬಗ್ಗೆ ವಿಶ್ಲೇಷಿಸಬೇಕು ಎನಿಸುತ್ತದೆ.

ಮನೆಗೆ ತಂದು ಸಾಕುವ ಹಸು–ನಾಯಿ–ಬೆಕ್ಕುಗಳು ಹೇಗೆ ನಮ್ಮ ಸ್ವಭಾವವನ್ನೇ ಪ್ರತಿಬಿಂಬಿಸುವುದೋ ಹಾಗೆ ಈ ಘಟನೆಯೂ ಅಲ್ಲವೇ? ಎನಿಸುತ್ತದೆ. ಅವರನ್ನು ದೇಶಪ್ರೇಮಿಗಳನ್ನಾಗಿಸಬೇಕೋ? ಕಲ್ಲು ಹೊಡೆಯುವ ಸಂಸ್ಕೃತಿಯತ್ತ ಬೆಳೆಸಬೇಕೋ? ಎಂಬುದನ್ನು ನಾಡಿನ ನೇತಾರರು ತೀರ್ಮಾನಿಸಬೇಕಾಗುತ್ತದೆ. ಜಲಿಯನ್ ವಾಲಾಭಾಗ್ ನೋಡಿದಾಗ ಕಣ್ಣಂಚಿನಲ್ಲಿ ಮೂಡುವ ಕಂಬನಿ, ಭಾರತದ ಧ್ವಜ ಕಂಡಾಗ ಮೂಡುವ ಹುಮ್ಮಸ್ಸನ್ನು ಪರಿಗಣಿಸಬೇಕು. ನಾವು ಕಲಿಸುವುದನ್ನು ಅವರು ಕಲಿಯುತ್ತಾರೆ. ಯಾರದೋ ಸ್ವಾರ್ಥಕ್ಕೆ, ಅವರು ನೀಡುವ ಹಣದ ಆಸೆಗೆ ಕೈಯಲ್ಲಿ ಕಲ್ಲು ಹಿಡಿದು, ನಾಡ ವಿರೋಧಿ ಕೃತ್ಯದಲ್ಲಿ ತೊಡಗುವ ಯುವಕರಿಗೆ ಅದು ತಪ್ಪು ಎನಿಸುವಂತಹ ವಾತಾವರಣ ನಿರ್ಮಿಸಬೇಕು. ಒಮ್ಮೆ ಮನದಲ್ಲಿ ಮೂಡಿದ ದೇಶಪ್ರೇಮ ಹೃದಯಾಂತರ್ಗತವಾಗ ಬೇಕು. ಒಮ್ಮೆ ದೇಶಪ್ರೇಮ ಮನದಾಳಕ್ಕಿಳಿದರೆ ಅವರೆಂದೂ ದುಷ್ಕೃತ್ಯಕ್ಕೆ ಕೈ ಹಾಕುವುದಿಲ್ಲ. ನಮ್ಮ ರಾಜಕಾರಣ ಚುನಾವಣೆಗೆ ಮಾತ್ರ ಸೀಮಿತವಾಗಬೇಕು. ಚುನಾವಣೆಯ ನಂತರ ನಾವು ಭಾರತೀಯರು, ಈ ದೇಶ ನಮಗೆ ಮುಖ್ಯ ಎಂಬ ಭಾವನೆ ನಮ್ಮ ನೇತಾರರಲ್ಲಿ ಮೂಡಿದರೆ ಮಾತ್ರ ದೇಶಭಕ್ತ ಯುವ ಸಮೂಹ ನಿರ್ಮಾಣ ಆಗುತ್ತದೆ. ಹಾಗಾಗಲಿ ಎಂಬುದೇ ಹಂಬಲ.

ವಾರಭವಿಷ್ಯ



3.7.2022 ರಿಂದ 9.7.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಮಿಥುನ, ಚಂದ್ರ–ಸಿಂಹ, ಕನ್ಯಾ, ತುಲಾ,
ಕುಜ–ಮೇಷ, ಬುಧ–ಮಿಥುನ, ಗುರು–ಮೀನ,
ಶುಕ್ರ–ವೃಷಭ, ಶನಿ–ಕುಂಭ,
ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ
ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)



ವಾರದ ಆದಿಗೆ ಅನಿಶ್ಚಿತತೆ ಕಾಡುತ್ತದೆ. ಮುಖ್ಯ ಕೆಲಸ ಕಾರ್ಯಗಳು ಕುಂಟುತ್ತಾ ಸಾಗಲಿದೆ. ಸರ್ಕಾರಿ ನೌಕರರು ತಮ್ಮ ಜವಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿ, ಅನ್ಯಥಾ ಕಾನೂನು ತೊಂದರೆಗಳನ್ನು ಎದುರಿಸಬೇಕಾದೀತು. ವಾರಮಧ್ಯೆ ಭೂಮಿ ಕ್ರಯ–ವಿಕ್ರಯಗಳಿಂದ ಧನಪ್ರಾಪ್ತಿ. ಕೆಲಸ ಗಾರರು ಮೋಸ ಮಾಡಬಹುದು. 'ಹಂಗಿನ ಹಾಲಿಗಿಂತ ರಾಗಿ ಅಂಬಲಿ ಲೇಸು' ಎಂಬ ಸತ್ಯ ಈ ವಾರ ಅನುಭವಕ್ಕೆ ಬರಲಿದೆ.

– ಶ್ರೀ ಗಣಪತಿ ಪೂಜೆ, ಶುಭಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)



ಹಿರಿಯರ ಮಾತನ್ನು ನಿರ್ಲಕ್ಷಿಸಬೇಡಿ. ಅವರ ಮಾರ್ಗದರ್ಶನ ತೀರಾ ಅಗತ್ಯವಿದೆ. ಶುಭಕಾರ್ಯ ಯತ್ನಗಳು ಸಫಲತೆಯನ್ನು ಹೊಂದಲಿದೆ. ವಿದ್ಯಾಸಂಸ್ಥೆ, ಟುಟೋರಿಯಲ್ ಸಂಸ್ಥೆಗಳಿಗೆ ಹೆಚ್ಚಿನ ಆದಾಯವಾಗಲಿದೆ. ಹಲವು ಹೆಣ್ಣು ಮಕ್ಕಳಿಗೆ ಶುಕ್ರಗ್ರಹದ ಕೃಪೆಯಿಂದ ಕನ್ಯಾಸೆರೆಯಿಂದ ಬಿಡುಗಡೆ ಹೊಂದುವ ಯೋಗವಿದೆ. ಅಶುಭ ರಾಹು ಇರುವುದರಿಂದ 'ಜಾಣಕಿವುಡು ಬುದ್ಧಿವಂತರ ಲಕ್ಷಣ' ಎಂಬಂತೆ ಇರಿ.

– ಶ್ರೀ ಸಪ್ತಮಾತೃಕಾದೇವಿ ದರ್ಶನ, ಶುಭಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)



ಈ ಸಪ್ತಾಹದಲ್ಲಿ ನಿಮ್ಮ ಆದಾಯ ಮತ್ತು ಖರ್ಚುಗಳೂ ಹೆಚ್ಚಾಗುವುದು. ವಾಮಮಾರ್ಗದಿಂದಲೂ ಧನ ಸಂಪತ್ತನ್ನು ಗಳಿಸುವಿರಿ. ನಿಮ್ಮ ರಾಶ್ಯಾಧಿಪತಿ ಬುಧ ನಿಮ್ಮ ರಾಶಿಯಲ್ಲೇ ಇದ್ದು, 'ಮಾತು ಬಲ್ಲವ ಮಾಣಿಕ್ಯ ತಂದ' ಎಂಬಂತೆ ನಿಮ್ಮ ವಾಕ್ಚಾತುರ್ಯದಿಂದ ಎದುರಾಗುವ ಸಮಸ್ಯೆಗಳನ್ನು ನೀವೇ ಪರಿಹರಿಸಿಕೊಳ್ಳುವಿರಿ. ವಿದ್ಯಾ ಪ್ರಸಂಗಗಳಲ್ಲಿ ಉನ್ನತ ಸಾಧನೆ, ಗೌರವ ಪ್ರಾಪ್ತಿ.

– ಶ್ರೀ ವಿಷ್ಣು ಸಹಸ್ರನಾಮ ಪಠಿಸಿ, ಶುಭಸಂಖ್ಯೆ–5.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)



ವಾರದಾರಂಭಕ್ಕೆ ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರಗಳು ಇತ್ಯರ್ಥವಾಗುವ ಸಾಧ್ಯತೆ ಇದೆ. ಕಲಾವಿದರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ಆತ್ಮೀಯ ಬಂಧುಗಳು ಮನೆಗೆ ಭೇಟಿ, ಅವರ ಉಪಚಾರ, ಉಡುಗೊರೆಗಳಿಗೆ ಧನ ವ್ಯಯ. ಗುರುಕೃಪೆಯಿಂದ ಆಸ್ತಿ ಸಂಪತ್ತು ಗಳಿಸುವ ಸುಯೋಗವಿದೆ. ಹಲವರಿಗೆ ವಿದೇಶ ಸಂಚಾರ ಉಂಟಾಗ ಬಹುದು. ಉಷ್ಣ ಸಂಬಂಧಿ ಕಾಯಿಲೆ ಕಾಡಬಹುದು.

– ಶ್ರೀ ದೇವಿ ಉಪಾಸನೆ, ಶುಭಸಂಖ್ಯೆ–8.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)



ಪ್ರಯತ್ನವಿಲ್ಲದೆ ಫಲ ಸಿಗದು. ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ನಿತ್ಯ ವ್ಯವಹಾರಗಳಲ್ಲಿ ಲವಲವಿಕೆಯಿಂದ ನಡೆದುಕೊಳ್ಳುವಿರಿ. ಆಪ್ತ ಮಿತ್ರರ ಮಿಲನದಿಂದ ಹರ್ಷ, 'ಸ್ನೇಹ ಕೂಟ'ಗಳು ಜರುಗುವುದು. ಮನೆಯಲ್ಲಿ ದೇವತಾ ಕಾರ್ಯಗಳು ನಡೆಯುವುದು. ಪಾಲುದಾರಿಕೆ ವ್ಯವಹಾರಗಳನ್ನು ಎಚ್ಚರಿಕೆಯಿಂದ ಮಾಡಿ. ಸ್ತ್ರೀಯರ ದಾರಿಗಳ್ಳರಿಂದ ಜಾಗ್ರತರಾಗಿರಿ.

– ಶ್ರೀ ನಾರಾಯಣ ನಾಮಸ್ಮರಣೆ, ಶುಭಸಂಖ್ಯೆ–7.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)



ವಾರದ ಪೂರ್ವಾರ್ಧಕ್ಕೆ ಎಲ್ಲವೂ ಚೆನ್ನಾಗಿದೆ. ಧನ, ಕನಕ, ದುಬಾರಿ ವಸ್ತು, ವಾಹನ ಹೊಂದುವ ಅವಕಾಶವಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಮನಸ್ಸಾಗುವುದು. 'ಪಾಲಿಗೆ ಬಂದದ್ದು ಪಂಚಾಮೃತ' ಎಂಬ ತತ್ವವನ್ನು ಪಾಲಿಸಿ. ವಾರದ ಉತ್ತರಾರ್ಧಕ್ಕೆ ಹಣಕಾಸಿನ ವಿಷಯಗಳು ನೀವಂದುಕೊಂಡಂತೆ ಸಾಗದು. ದಾಖಲೆಗಳನ್ನು ಪರಿಶೀಲಿಸದೆ ಸ್ಥಿರಾಸ್ತಿಯನ್ನು ಖರೀದಿಸಬೇಡಿ. ಸಣ್ಣ ಪುಟ್ಟ ಅಪಘಾತಗಳಿಂದ ಎಚ್ಚರವಿರಿ.

– ಶ್ರೀ ಶ್ರೀನಿವಾಸ ದೇವರ ದರ್ಶನ, ಶುಭಸಂಖ್ಯೆ–4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)



ಪೂರ್ವಭಾವಿ ತಯಾರಿ ಇಲ್ಲದೆ ಯಾವ ಕೆಲಸವನ್ನೂ ಮಾಡದಿರಿ. ಹಲವು ಮೂಲಗಳಿಂದ ಧನಾದಾಯವಾಗುವುದು. ದವಸ–ಧಾನ್ಯ ವ್ಯಾಪಾರಿಗಳಿಗೆ ಉತ್ತಮ ಲಾಭವಿದೆ. ದೂರ ಸರಿದಿದ್ದವರು ಹತ್ತಿರ ಬರುವರು. ಫ್ಯಾನ್ಸಿ ವಸ್ತು ವ್ಯಾಪಾರಿಗಳಿಗೆ ಹೇರಳ ಲಾಭ ದೊರೆಯುವುದು. ಜನ್ಮಸ್ಥ ಕೇತುವಿದ್ದು, ಸ್ವಯಂಕೃತಾಪರಾಧಗಳಿಂದ ಚಿಂತೆಗೀಡಾಗುವಿರಿ. ದಾಂಪತ್ಯದಲ್ಲಿ ವಿರಸಗಳು ಬರದಂತೆ ನಡೆದುಕೊಳ್ಳಿ. ಸ್ನಾಯು ಸೆಳೆತ ಕಾಡುವ ಸಾಧ್ಯತೆ.

– ಶ್ರೀ ದೇವಿ ಖಡ್ಗಮಾಲಾ ಸ್ತೋತ್ರ ಪಠಿಸಿ, ಶುಭಸಂಖ್ಯೆ–2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)



ಪ್ರಯತ್ನಶೀಲರಿಗೆ ದೈವ ಸಹಾಯವೂ ದೊರೆಯುತ್ತದೆ. ರಫ್ತು–ಆಮದು ಉದ್ಯಮಿಗಳಿಗೆ ಕೈತುಂಬಾ ಆದಾಯವಾಗುವುದು. ವಸ್ತ್ರಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ಗುರು–ಹಿರಿಯರ ಭೇಟಿಯಿಂದ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್, ಮತ್ತೆ ಕೆಲವರಿಗೆ ವಾಯು ಯಾನ ಯೋಗವಿದೆ. ನ್ಯಾಯಾಲಯ ವಿಷಯಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ನೇತ್ರಬಾಧೆ ಕಾಡಬಹುದು.

– ಶ್ರೀ ಲಕ್ಷ್ಮೀನೃಸಿಂಹ ದರ್ಶನ, ಶುಭಸಂಖ್ಯೆ–3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)



ವಾರದಾರಂಭಕ್ಕೆ ಒತ್ತಡಭರಿತವಾಗಿರುತ್ತದೆ. ಋಣಾತ್ಮಕವಾಗಿ ಚಿಂತಿಸುವುದನ್ನು ಬಿಟ್ಟರೆ ಸಾಧನೆಯ ಮಾರ್ಗ ತೆರೆದುಕೊಳ್ಳುತ್ತದೆ. ನಂಬಿಸಿ ಮೋಸ ಮಾಡುವವರಿದ್ದಾರೆ ಜಾಗೃತರಾಗಿರಿ. ಹಿತಶತ್ರುಗಳ ಕಾಟವೂ ಇರುತ್ತದೆ. ನಿರಾಶರಾಗುವ ಅವಶ್ಯಕತೆ ಇಲ್ಲ. ವಾರಾಂತ್ಯಕ್ಕೆ ರೈತಾಪಿ ಜನರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಟೂರ್ಸ್ ಅಂಡ್ ಟ್ರಾವೆಲ್ಸ್‌ನವರಿಗೆ ಹೇರಳ ಧನಲಾಭವಾಗುವುದು.

–ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ, ಶುಭಸಂಖ್ಯೆ–9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)



ಉದ್ಯೋಗ ವ್ಯವಹಾರದಲ್ಲಿ ಧನಲಾಭ. ವಸ್ತ್ರಾಭರಣ ಖರೀದಿ. ಸಿವಿಲ್ ಇಂಜಿನಿಯರ್‌ಗಳಿಗೆ ದೊಡ್ಡ ಯೋಜನೆ ದೊರೆಯುವುದು. ಕಾರ್ಮಿಕರ ಸಹಕಾರವೂ, ಹಣಕಾಸಿನ ವ್ಯವಹಾರವನ್ನು ವಿಶ್ವಾಸಪಾತ್ರರೊಂದಿಗೆ ಮಾತ್ರ ಮಾಡಿ.ಶತ್ರು ಜನರು ಪ್ರಬಲರೆನಿಸುವರು. ಸರ್ಕಾರಿ ನೌಕರರು ನ್ಯಾಯಮಾರ್ಗ ಬಿಟ್ಟು ನಡೆದು ಕಾನೂನು ತೊಡಕಿಗೆ ಸಿಲುಕಿಕೊಳ್ಳುವರು. 'ಅತಿ ಆಸೆ ಗತಿಗೇಡು' ಈ ಗಾದೆ ನೆನಪಿರಲಿ.

– ಶ್ರೀ ಶನಿ ಚಾಲೀಸ ಪಠಿಸಿ, ಶುಭಸಂಖ್ಯೆ–1.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)



ಕಾಲವು ಯಾರಿಗೂ ಕಾಯುವುದಿಲ್ಲ. ದೈನಂದಿನ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವುದು. ಆಟೋಮೊಬೈಲ್ ಹಾಗೂ ಕೃಷಿ ಯಂತ್ರೋಪಕರಣ ಮಾರಾಟಗಾರರಿಗೆ ಹೇರಳ ಧನಲಾಭವಾಗುವುದು. ಹಲವರಿಗೆ ವೈವಾಹಿಕ ಜೀವನ ಭಾಗ್ಯ ದೊರೆಯುವುದು. ನೆರೆಹೊರೆಯವರಿಂದ ಸಮಯೋಚಿತ ಸಹಾಯವನ್ನು ನಿರೀಕ್ಷಿಸಬಹುದು. ಅಕಾಲಿಕ ಭೋಜನದಿಂದ ಆರೋಗ್ಯದಲ್ಲಿ ಏರುಪೇರು ಉಂಟಾದೀತು.

– ಶ್ರೀ ಆಂಜನೇಯ ದರ್ಶನ, ಶುಭಸಂಖ್ಯೆ–3.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)



ಗುರುತರವಾದ ಯೋಜನೆಗಳನ್ನು ಇನ್ನಷ್ಟು ಕಾಲ ಮುಂದೆ ಹಾಕುವುದು ಜಾಣತನ. ಸಾಡೇಸಾತಿಯ ಪ್ರಭಾವವಿದ್ದಾಗ್ಯೂ ಕೆಲವೊಂದು ಕಾರ್ಯಸಾಧನೆ ಆಗುವುದು. ಚಂದ್ರಗ್ರಹ ಪ್ರಭಾವದಿಂದ ಹೆಚ್ಚು ಹಣ ಸಂಗ್ರಹವಾದರೂ ಜೇಬು ಖಾಲಿಯೇ. ಲೋಹ, ಧಾನ್ಯ, ಎಣ್ಣೆ ವ್ಯಾಪಾರಗಳು ತೇಜಿಯಾಗಿ ನಡೆಯುವುದು. ವಿದ್ಯಾರ್ಥಿಗಳು ಆಲಸಿಗಳಾಗುವರು. ವಾಹನ ಚಾಲನೆ ಮೋಜಿಗಲ್ಲ ಎಂಬ ಅರಿವು ಇರಲಿ.

– ಶ್ರೀ ಮೃತ್ಯುಂಜಯ ಮಂತ್ರ ಜಪಿಸಿ, ಶುಭಸಂಖ್ಯೆ–6.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹೆಸರಾಂತ ಲೇಖಕ ಚೇತನ್ ಭಗತ್ ಅವರೊಂದಿಗಿನ ವಿಶೇಷ ಸಂದರ್ಶನ

ಭಾರತದ ಸಾಹಿತ್ಯದಲ್ಲೂ ಜಾತಿ ವ್ಯವಸ್ಥೆ ಇದೆ!



ಸಂದರ್ಶಕರು : ಸುಜಾತ ರಾಜ್‌ಪಾಲ್

ಚೇತನ್ ಭಗತ್‌ರಷ್ಟು ಅಪಹಾಸ್ಯಕ್ಕೆ ಗುರಿಯಾದ ಮತ್ತೊಬ್ಬ ಇಂಗ್ಲೀಷ್ ಲೇಖಕನಿಲ್ಲ. ಅವರ ಪುಸ್ತಕಗಳ ಓದುಗರು ಸಹ ಅವರ ಅಲ್ಪ ಇಂಗ್ಲೀಷ್ ಜ್ಞಾನ ಮತ್ತು ಸಾಧಾರಣ ಬುದ್ಧಿಮತ್ತೆಗಾಗಿ ಅಪಹಾಸ್ಯಕ್ಕೆ ಒಳಗಾಗುತ್ತಾರೆ. ಮೆಟ್ರೋಗಳ ಗಣ್ಯರ ಪಾರ್ಟಿಗಳಲ್ಲಿ ಈ ಹೆಸರಾಂತ ಲೇಖಕರ ಸಾಹಿತ್ಯಕ ಸಾಮರ್ಥ್ಯ ಅಥವಾ ಅದು ಇಲ್ಲದಿರುವ ಬಗ್ಗೆ ಕೇಳಿ ಬರುವುದು ಅಸಾಮಾನ್ಯವೇನಲ್ಲ. ಅದೇನೇ ಇರಲಿ ಚೇತನ್ ಭಗತ್, ಓದುಗರಲ್ಲದವರನ್ನು ಓದುಗರನ್ನಾಗಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. ಭಾರತವನ್ನು ಓದಿಸಿದ ಪ್ರಥಮ ಲೇಖಕರಾಗಿದ್ದಾರೆ. ಮಾತ್ರವಲ್ಲ ಸಾವಿರಾರು ಓದುಗರು ಬರಹಗಾರರಾಗಲು ಅವರು ಸ್ಫೂರ್ತಿಯಾಗಿದ್ದಾರೆ. ಒಳ್ಳೆಯದು, ಆಹಾರ ಸ್ವಾದನೆ ಅದನ್ನು ತಿನ್ನುವುದರಲ್ಲಿದೆ. ಅವರ ಇಂಗ್ಲೀಷ್ ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದು ಅಪ್ರಸ್ತುತ. ಮುಖ್ಯವಾದ ವಿಚಾರವೆಂದರೆ, ಬಿಸಿ ಬಿಸಿ ಕೇಕುಗಳ ರೀತಿಯಲ್ಲಿ ಅವರ ಕೃತಿಗಳು ಮಾರಾಟವಾಗುತ್ತವೆ. ಅವರ ಪುಸ್ತಕಗಳು ಒಂದು ಮಿಲಿಯನ್ ಪ್ರತಿಗಳಷ್ಟು ಮಾರಾಟವಾಗುತ್ತವೆ. ಅವರ ಪ್ರತಿಯೊಂದು ಪುಸ್ತಕವೂ ಒಂದು ಚಿತ್ರದಲ್ಲಿ ಅಳವಡಿಸಲಾಗುತ್ತದೆ. ಚೇತನ್ ಭಗತ್, ಪ್ರತಿಯೊಬ್ಬ ಲೇಖಕನ ಜೀವಂತ ಕನಸಾಗಿದ್ದಾರೆ. ಈ ಹೆಸರಾಂತ ಲೇಖಕ, ಅಂಕಣಕಾರ ಹಾಗೂ ಮಾರ್ಗದರ್ಶಿ ಮಾತುಗಾರ. ಇತ್ತೀಚೆಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ "ಇವೆಂಟ್ ಮಿತ್ರ" ಏರ್ಪಡಿಸಿದ್ದ ಒಂದು ಪ್ರೇರಣಾತ್ಮಕ ಭಾಷಣ ಮಾಡಲು ಆಗಮಿಸಿದ್ದರು. 'ಮೈಸೂರು ಮಿತ್ರ'ನ ಪರವಾಗಿ ಮೈಸೂರು ಮೂಲದ ಲೇಖಕಿ ಸುಜಾತ ರಾಜ್‌ಪಾಲ್ ಅವರು ಚೇತನ್ ಭಗತ್ ಅವರನ್ನು ಅಂದಿನ ಕಾರ್ಯಕ್ರಮಕ್ಕೆ ಮುನ್ನ ಸಂದರ್ಶನ ನಡೆಸಿದ್ದರು. ಅದು ನಮ್ಮ ಓದುಗರಿಗಾಗಿ...

ಮೈಸೂರು ಮಿತ್ರ: ಹಲವು ತಿರಸ್ಕಾರಗಳ ನಂತರವೂ 2004 ರಿಂದ ನಿಮ್ಮ ಮಹತ್ವಾಕಾಂಕ್ಷೆಯ ಕೃತಿ "ಫೈವ್ ಪಾಯಿಂಟ್ ಸಮ್ವೊನ್" ರೂಪ ಪ್ರಕಾಶನದಿಂದ ಪ್ರಕಟವಾಯಿತು. ಅಲ್ಲಿಂದ ಇಲ್ಲಿಯವರೆಗೆ ನಿಮ್ಮ ಪಯಣ ಹೇಗಿತ್ತು?

ಚೇತನ್ ಭಗತ್: ಅದೊಂದು ಅತ್ಯದ್ಭುತವಾದ ಪಯಣ. ಹಲವು ಓದುಗರ ಪ್ರೀತಿಗೆ ಪಾತ್ರನಾದ ನಾನೇ ಅದೃಷ್ಟಶಾಲಿ. ಹಲವಾರು ಜನ, ನನ್ನ ಪುಸ್ತಕಗಳನ್ನು ಕೊಂಡುಕೊಳ್ಳುತ್ತಾರೆ ಹಾಗೂ ನನ್ನ ಭಾಷಣವನ್ನು ಕೇಳಲು ಬರುತ್ತಾರೆ. ಇದೊಂದು ರೀತಿಯ ವಿನೀತಭಾವ. ಒಬ್ಬ ಲೇಖಕನಿಗೆ ಇದಕ್ಕಿಂತ ಹೆಚ್ಚಿನದೇನು ಬೇಕು ಹೇಳಿ?

ಮಿತ್ರ: ನಿಮ್ಮ ಬರವಣಿಗೆಗೆ ಸ್ಫೂರ್ತಿ ಏನು?

ಚೇತನ್ ಭಗತ್: ಪ್ರಾರಂಭದಲ್ಲಿ, ನಾನು ಖ್ಯಾತಿ ಗಳಿಸಲು ಬರೆದೆ. ಓರ್ವ ಲೇಖಕನಾಗಿ ಛಾಪು ಮೂಡಿಸಲು ಬಯಸಿದ್ದೆ. ಇದುವರೆಗೆ ನಾನು 10 ಅತ್ಯುತ್ತಮ ಮಾರಾಟದ ಕೃತಿಗಳನ್ನು ಬರೆದಿದ್ದೇನೆ. ಆದ್ದರಿಂದ ಇನ್ನೂ ಎರಡನ್ನು ಬರೆದರೆ ಅದೇನು ದೊಡ್ಡ ವಿಷಯವಲ್ಲ. ಅತ್ಯುತ್ತಮ ಮಾರಾಟ ಹೊಂದುವುದು ಇನ್ನೂ ಒಳ್ಳೆಯದು. ಆದರೆ ಇವುಗಳಿಂದ ನನ್ನ ಮೇಲೆ ಪರಿಣಾಮ ಬೀರುವುದಿಲ್ಲ. ನಾನು ಒಂದು ಹಂತವನ್ನು ತಲುಪಿದ್ದೇನೆ. ಅದೇನೆಂದರೆ, ನನ್ನ ಸಮಯವನ್ನು ಯುವಜನರಲ್ಲಿ ಪ್ರೇರಣೆ ತುಂಬಲು ವಿನಿಯೋಗಿಸುತ್ತೇನೆ. ಯುವ ಜನರನ್ನು ತಮ್ಮ ಫೋನು ಮತ್ತು ಸಾಮಾಜಿಕ ಜಾಲತಾಣಗಳಿಂದ ದೂರವಿರಿಸುವುದು ಬಹಳ ಕಷ್ಟದ ಕೆಲಸ. ಅದಕ್ಕಿಂತಲೂ ಕಷ್ಟಕರವಾದದ್ದು ಅವರ ಗಮನವನ್ನು ಓದಿನ ಕಡೆ ಸೆಳೆಯುವುದು. ನಾನು ನಮ್ಮ ಯುವ ಜನರನ್ನು ಅವರು ತಮ್ಮ ಬಗ್ಗೆ ತಾವೇ ಯೋಚಿಸುವುದರತ್ತ ಹಾಗೂ ದೇಶದ ಬಗ್ಗೆ ಯೋಚಿಸುವುದರತ್ತ ಪ್ರೇರೇಪಿಸುತ್ತೇನೆ.

ಆದ್ದರಿಂದ ಈಗ ನನ್ನ ಗುರಿ ಇದೇ ಆಗಿದೆ. ಇದಕ್ಕಾಗಿ, ನಾನು ನನ್ನ ಯು ಟ್ಯೂಬ್‌ನ ಪ್ರೇರಣಾತ್ಮಕ ಚಾನಲ್ ಪ್ರಾರಂಭಿಸಿದ್ದೇನೆ. ಅವರಿಗೆ ನಾನು ನೀಡುವ ಸಲಹೆ ವಿಶೇಷವಾದುದೇನಲ್ಲ. ಅವರ ತಂದೆ ತಾಯಿ ನೀಡುವ ಸಲಹೆಯನ್ನೇ ನಾನೂ ಸಹ ನೀಡುತ್ತೇನೆ. ಆದರೆ ಅದನ್ನು ಯಾರೂ ಕಿವಿಗೆ ಹಾಕಿಕೊಳ್ಳುವುದಿಲ್ಲ. ನನ್ನ ಸ್ವಂತ ಮಕ್ಕಳೇ ನನ್ನ ಮಾತನ್ನು ಕೇಳುವುದಿಲ್ಲ, ಆದರೆ ಅದನ್ನೇ ಬೇರೆಯವರು ಹೇಳಿದರೆ ಅವರು ಕೇಳುತ್ತಾರೆ. ಇದರ ಪರಿಣಾಮವಾಗಿ, ಅನೇಕ ವಿದ್ಯಾರ್ಥಿಗಳು ತಮ್ಮ ಫೋನುಗಳನ್ನು ಬದಿಗಿಟ್ಟು, ಹೆಚ್ಚು ಓದುತ್ತಿದ್ದಾರೆ ಹಾಗೂ ವಿದ್ಯಾಭ್ಯಾಸವನ್ನು ಚೆನ್ನಾಗಿ ಮಾಡುತ್ತಿದ್ದಾರೆ. ಯುವಜನರ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನು ನಾನು ಹೊಂದಿದ್ದು, ಅದು ವಯಸ್ಸಿಗೂ ಉತ್ತಮ ಮಾರ್ಗ.

ಮಿತ್ರ: ಚೇತನ್ ಭಗತ್‌ರಂತಾಗಲು ಏನೆಲ್ಲಾ ಮಾಡಬೇಕಾಗುತ್ತದೆ?

ಚೇತನ್ ಭಗತ್: ಕಠಿಣ ಪರಿಶ್ರಮ. ಅದರ ಜೊತೆಗೆ, ನಾನು ಪ್ರಾರಂಭಿಕನ ಮನೋಭಾವನೆಯನ್ನು ಅಥವಾ ವರ್ತನೆಯನ್ನು ಹೊಂದಿದ್ದೇನೆ. ಪ್ರತಿ ದಿನ ನಾನು ಏನಾದರೂ ಹೊಸದನ್ನು ಕಲಿಯಲು ಇಷ್ಟಪಡುತ್ತೇನೆ.



ಹೆಸರಾಂತ ಲೇಖಕ ಚೇತನ್ ಭಗತ್‌ರೊಂದಿಗೆ ಲೇಖಕಿ ಸುಜಾತ ರಾಜ್‌ಪಾಲ್

ಯೂಟ್ಯೂಬಿನ ಬಗ್ಗೆ ನನಗೇನೂ ತಿಳಿದಿಲ್ಲ. ಆದರೆ ಅದರ ಬಗ್ಗೆ ಕಲಿತಿದ್ದೇನೆ ಹಾಗೂ ಅದರಿಂದ ಪ್ರತಿಯೊಂದು ಕ್ಷಣವೂ ಕೂಡ ಒಳ್ಳೆಯದು ಎನ್ನಿಸುತ್ತದೆ. ನಾನು ಕಲಿಯುತ್ತಿದ್ದೇನೆ. ನನ್ನ ಸಲಹೆಯೆಂದರೆ – ನಿಮ್ಮ ಹಿಂದಿನ ಯಶಸ್ಸಿನಿಂದಲೇ ಹಿಗ್ಗಬೇಡಿ. ಪ್ರತಿಯೊಂದು ದಿನವೂ ಒಳ್ಳೆಯ ಮನುಷ್ಯನಾಗಲು ಪ್ರಯತ್ನಿಸಿ.

ಮಿತ್ರ: ನೀವು ಸರಳ, ಪ್ರತಿಷ್ಠೆಯಿಲ್ಲದ ಲೇಖಕರಾಗಬಯಸುತ್ತೀರೋ ಅಥವಾ ಅಂತರರಾಷ್ಟ್ರೀಯ ಮನ್ನಣೆ ಗಳಿಸುವಂತಹ ಪ್ರಶಸ್ತಿ ವಿಜೇತ ಲೇಖಕರಾಗ ಬಯಸುತ್ತಿರೋ (ಅಂತಹ ಎಷ್ಟೋ ಲೇಖಕರ ಕೃತಿಗಳು ಅನೇಕರಿಗೆ ಅರ್ಥವಾಗುವುದೇ ಇಲ್ಲ)?

ಚೇತನ್ ಭಗತ್: ವಾಸ್ತವವಾಗಿ ನೀವು ಎರಡೂ ಆಗಬಹುದು. ಜಟಿಲವಾಗಿದ್ದರೆ, ನಿಮಗೆ ಪ್ರಶಸ್ತಿ ಸಿಗಲಾರದು. ಆದರೆ, ಉತ್ತಮವಾದ ಸಂವಹನೆಗೆ ನಿಮಗೆ ಪ್ರಶಸ್ತಿ ಸಿಗಬಹುದು. ನೀವು ಜಟಿಲ ಮನೋಭಾವದ ಲೇಖಕರಾದರೆ, ನಿಮ್ಮನ್ನು ಜನ ಸಮೂಹದ ಕಾರ್ಯಕ್ರಮಗಳಿಗೆ ಯಾರೂ ಆಹ್ವಾನಿಸಲಾರರು. ಆದರೆ ನಿಮ್ಮನ್ನು ಗಣ್ಯರ ಕಾರ್ಯಕ್ರಮಗಳಿಗೆ ಮಾತ್ರ ಆಹ್ವಾನಿಸಿ ವೈನ್ ಸೇವಿಸುತ್ತಾ, ಪುಸ್ತಕಗಳ ಬಗ್ಗೆ ಚರ್ಚಿಸಬಹುದು. ಪ್ರಶಸ್ತಿ ಗಳಿಸುವುದಕ್ಕಿಂತ ಜನ ಮಾನಸದ ಅಥವಾ ಜನರು ಇಷ್ಟಪಡುವ ವ್ಯಕ್ತಿಯಾಗುವುದು ಮುಖ್ಯವಾಗುತ್ತದೆ.

ಮಿತ್ರ: ನಿಂದನೆಗಳನ್ನು ನೀವು ಹೇಗೆ ನಿರ್ವಹಿಸುತ್ತೀರಿ?

ಚೇತನ್ ಭಗತ್ : ನೀವು ಪ್ರತಿಯೊಬ್ಬರನ್ನೂ ಸಂತೋಷಪಡಿಸಲು ಸಾಧ್ಯವಿಲ್ಲ. ನೀವು ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿದರೆ, ಬೇರೊಬ್ಬ ಅಥವಾ ಮಗದೊಬ್ಬನಿಗೆ ತೊಂದರೆಯಾಗಬಹುದು. ವಾಸ್ತವವಾಗಿ, ನೀವು ಆಕಾಶ ನೀಲಿಯಾಗಿದೆ ಎಂಬ ಒಂದು ಸಾಮಾನ್ಯವಾದ ಹೇಳಿಕೆ ನೀಡಿದರೂ ಸಹ ಕೆಲವು ಜನ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಬಹುದು. ರಾತ್ರಿ ವೇಳೆಯಲ್ಲಿ ಆಕಾಶ ನೀಲಿಯಾಗಿರುವುದಿಲ್ಲವೆಂದು ಅವರು ವಾದಿಸಬಹುದು. ಕುತೂಹಲಕಾರಿ ಸಂಗತಿ ಎಂದರೆ, ಯಾರು ನನ್ನನ್ನು ಟೀಕಿಸುತ್ತಾರೋ ಅಂತಹವರು ನನ್ನ ಅಂಕಣ ಅಥವಾ ಪುಸ್ತಕಗಳನ್ನು ಸಹ ಓದಿರುವುದಿಲ್ಲ.

ಮಿತ್ರ: ಜನ ನಿಮ್ಮ ಪುಸ್ತಕಗಳನ್ನು ಟೀಕೆ ಮಾಡುತ್ತಾರೆ, ನಿಮ್ಮ ಪುಸ್ತಕಗಳನ್ನು ಕೇವಲ ಬುದ್ಧಿಜೀವಿಗಳಲ್ಲದವರು ಮಾತ್ರ ಓದುತ್ತಾರೆ ಎಂದು ಹೇಳುತ್ತಾರೆ. ಅನೇಕರು ತಾವು ನಿಮ್ಮ ಪುಸ್ತಕಗಳನ್ನು ಓದುತ್ತೇವೆ ಎಂದು ಸಾರ್ವಜನಿಕವಾಗಿ ಒಪ್ಪಿಕೊಳ್ಳಲು ಇಷ್ಟಪಡುವುದಿಲ್ಲ. ಕೆಲವು ಕಾಲದ ಹಿಂದೆ, ಪತ್ರಕರ್ತರೊಬ್ಬರು ತಮ್ಮನ್ನು "ಬರವಣಿಗೆ ನಿಲ್ಲಿಸಿ" ಎಂದು ಕೇಳಿದರು. ಇವುಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಚೇತನ್ ಭಗತ್: ಆ ಪತ್ರಕರ್ತನ ಪತ್ರಿಕಾ ವೃತ್ತಿ ಹೇಗಿದೆ? **(ಒಳಗೊಳಗೆ ನಗುತ್ತಾ)** ಪುಸ್ತಕಗಳನ್ನು ಬುದ್ಧಿಜೀವಿಗಳಲ್ಲದವರು ಮಾತ್ರ ಓದುತ್ತಾರೆ ಎಂದು ಹೇಳುವುದು ಸರಿಯಲ್ಲ. ಮಾಜಿ ಕೇಂದ್ರ ಸಚಿವ ಶಶಿ ತರೂರ್‌ರವರು ನನ್ನ ಪುಸ್ತಕಗಳನ್ನು ಓದುತ್ತಾರೆ. ಭಾರತದ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ದಿವಂಗತ ಲೀಲಾ ಸೇಥ್‌ರವರು "ತಾವು ನನ್ನ ಪುಸ್ತಕಗಳ ಅಭಿಮಾನಿ" ಎಂದು ಹೇಳುತ್ತಿದ್ದರು. ಗುಲ್ಜಾರ್ ಸಾಹಿಬ್ ಅವರು ನನ್ನ ಪುಸ್ತಕಗಳನ್ನು ತಪ್ಪದೇ ಓದುತ್ತಾರೆ. ವಾಸ್ತವವಾಗಿ ನನಗಿಂತ ಹೆಚ್ಚಿನದೇನು ಮಾಡದವರು ನನ್ನನ್ನು ಟೀಕಿಸುತ್ತಾರೆ. ನನ್ನಷ್ಟು ಉತ್ತಮ ರೀತಿ ಬರೆಯದ ಲೇಖಕರಿಗೆ ಮಾತ್ರ ನನ್ನ ಪುಸ್ತಕಗಳ ಹಾಗೂ ನನ್ನ ಇಂಗ್ಲೀಷ್ ಬಗ್ಗೆ ಅಪಸ್ವರವಿದೆ. ನನ್ನದೇ ಬ್ರ್ಯಾಂಡ್ ಚೆನ್ನಾಗಿದೆ. ಆದ್ದರಿಂದ ಅಂತಹ ಅಭಿಪ್ರಾಯಗಳು ನನ್ನನ್ನು ಹೆಚ್ಚಿಗೆ ಬಾಧಿಸಲಾರದು.

ದುಃಖದ ಸಂಗತಿ ಎಂದರೆ, ನನ್ನನ್ನು ಟೀಕಿಸುವವರು, ಯಾವ ಲೇಖಕರ ಇಂಗ್ಲೀಷ್ ಉತ್ತಮವಾಗಿದೆಯೆಂದು, ವ್ಯರ್ಥವಾದುದೆಂದು, ಮೂರ್ಖತನದಿಂದ ಕೂಡಿದೆಯೆಂದು ಹೇಳುತ್ತಾರೋ ಅಂತಹವರು, "ಯಾರು ಯುವ ಜನತೆಯನ್ನು ಪುಸ್ತಕಗಳತ್ತ ಸೆಳೆದಿದ್ದಾರೆ "ಎಂಬುದನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಅದನ್ನು ನಾನು ಮಾಡಿದ್ದೇನೆ.

ಓದಲು ಸರಳವಾಗಿರುವುದರಿಂದಲೇ ಓದುಗರು ಚೇತನ್ ಭಗತ್ ಪುಸ್ತಕಗಳನ್ನು ಮಾತ್ರ ಓದುತ್ತಾರೆ. ಚೇತನ್ ಭಗತ್‌ರವರು ಉಪಯೋಗವಲ್ಲದ್ದನ್ನು ಬರೆಯುತ್ತಾರೆ ಎಂಬುದು ಲೇಖನ ಓದುವ ಸಂದರ್ಭ ಮನಸ್ಸಿಗೆ ಬಂದರೆ, ಅವರು ಅದನ್ನು ಓದುವುದನ್ನು ನಿಲ್ಲಿಸುತ್ತಾರೆ ಹಾಗೂ ಇನ್ಸ್ಟಾಗ್ರಾಮ್ ರೀಲುಗಳನ್ನು ನೋಡಲು ಹೋಗುತ್ತಾರೆ. ಕೆಲವು ವ್ಯಕ್ತಿಗಳ ಅಹಂಕಾರ ಅಥವಾ ಒಣ ಪ್ರತಿಷ್ಠೆಯಿಂದ ನಾವು ಜೀವನಪರ್ಯಂತ ಓದುಗನೊಬ್ಬನನ್ನು ಕಳೆದುಕೊಂಡಿದ್ದೇವೆ.

ನಮ್ಮ ಸೀಮಿತ ಪ್ರದೇಶವನ್ನು ಇಂಟರ್ನೆಟ್ ಆಕ್ರಮಿಸಿಕೊಳ್ಳುತ್ತಿರುವುದರಿಂದ, ನಮ್ಮ ಪಾತ್ರ ಕುಗ್ಗುತ್ತಿದೆ. ಯುವಕ ಯುವತಿಯರನ್ನು ಯಾವ ರೀತಿಯಲ್ಲಿ ಪುಸ್ತಕಗಳ ಕಡೆ ಆಕರ್ಷಿಸಬೇಕು ಎಂಬ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು. ಭಾರತ ಜಾತಿ ವ್ಯವಸ್ಥೆಯನ್ನು ಪ್ರೀತಿಸುತ್ತದೆ. ಸಾಹಿತ್ಯದಲ್ಲಿ ಕೂಡ ಒಂದು ಜಾತಿ ಪದ್ಧತಿಯಿದೆ. ತುತ್ತ ತುದಿಯಲ್ಲಿ ಒಂದು ಜಾತಿ ಇದ್ದರೆ, ಉಳಿದವು ಅದರ ಕೆಳಗೆ ಇರಬೇಕು.

ಒಳ್ಳೆಯ ಇಂಗ್ಲೀಷ್ ಅಂದರೆ ಕಠಿಣ ಪದಗಳಿಂದ ಹಾಗೂ ಅರ್ಥವಾಗದ ವಾಕ್ಯಗಳನ್ನು ಹೊಂದಿದ ಭಾಷೆ ಎಂಬ ಅರ್ಥದೊಂದಿಗೆ ಸಮೀಕರಿಸಲಾಗಿದೆ. ಒಳ್ಳೆಯ ಬರವಣಿಗೆ ಅಂದರೆ ಒಳ್ಳೆಯ ಆಲೋಚನೆ. ನಾವು ಕೆಲವೇ ಸೀಮಿತ ವರ್ಗಗಳ ಲೇಖಕರನ್ನು ಮಾತ್ರ ಪ್ರೋತ್ಸಾಹಿಸುತ್ತಾ ಬಂದಿದ್ದೇವೆ. ಆದರೆ ಕಠಿಣ ಪದಗಳನ್ನು ಅರ್ಥ ಮಾಡಿಕೊಳ್ಳಲಾಗದ ಓದುಗರ ಪಾಡೇನು?

ಕೊಠಡಿಯಲ್ಲಿ ಇರುವ ಆನೆಯನ್ನು ಹೆಚ್ಚು ಕಾಲ ಕಡೆಗಣಿಸಲಾಗದು. ಇನ್ನೂ ಒಂದು ಅವಕಾಶವಿದೆ. ಭಯಾನಕ, ಮಕ್ಕಳ ಸಾಹಿತ್ಯಗಳೆಂಬ ಹಲವಾರು ಸಾಹಿತ್ಯ ಪ್ರಕಾರಗಳಿವೆ. ಇವುಗಳ ಬಗ್ಗೆ ಈಗಲೂ ಹೆಚ್ಚಿನ ಪುಸ್ತಕಗಳಿಲ್ಲ. ಯುವ ಜನರು ವೀಡಿಯೋಗಳಿಂದ ನಿತ್ರಾಣರಾಗಿದ್ದಾರೆ. ಅವರಿಗೆ ಹೆಚ್ಚಿನ ಪ್ರಯಾಸವಿಲ್ಲದೆ ಸುಲಭವಾಗಿ ಅರ್ಥವಾಗುವ ಪುಸ್ತಕಗಳು ಬೇಕಾಗಿವೆ. ವಿಡಿಯೋ ಅಥವಾ ಚಿತ್ರವನ್ನು ವೀಕ್ಷಿಸುವುದಕ್ಕಿಂತ ಮಿಗಿಲಾದ ಆನಂದ ಪುಸ್ತಕ ಓದುವುದರಲ್ಲಿದೆ.

ಮಿತ್ರ: ನಿಮ್ಮ ಹಾಗೆ ಇರಬೇಕೆಂದು ಬಯಸುವ ಲೇಖಕರಿಗೆ ನಿಮ್ಮ ಸಲಹೆಯೇನು?

ಚೇತನ್ ಭಗತ್: ಯಾರಾದರೂ ನನ್ನ ಹಾಗೆ ಏಕೆ ಇರಬೇಕು? ನೀವು ನಿಮ್ಮ ಹಾಗೆ ಇರಿ. ನಾನು ಮತ್ತೊಬ್ಬ ಅರುಂಧತಿ ರಾಯ್ ಅಥವಾ ಸಲ್ಮಾನ್ ರುಷ್ದಿ ಆಗಲು ಬಯಸಿರಲಿಲ್ಲ. ನಾಳೆಯ ಲೇಖಕರು ಭಿನ್ನವಾಗಿರುತ್ತಾರೆ. ಇದು ಬರೀ ಪುಸ್ತಕ ಬರೆಯುವುದಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಇದು ವಿಡಿಯೋ, ಬ್ಲಾಗ್ ಇನ್ನಿತರೆ ವಿಷಯದಲ್ಲೂ ಇರಬಹುದು.

ಮಿತ್ರ: ನೀವು ಒಬ್ಬ ನಟ, ಅಂಕಣಕಾರ, ಪ್ರೇರಣಾತ್ಮಕ ಭಾಷಣಕಾರ, ಬರಹಗಾರ ಹಾಗೂ ರಿಯಾಲಿಟಿ ಪ್ರದರ್ಶನಗಳ ತೀರ್ಪುಗಾರರಾಗಿದ್ದೀರಿ. ಯಾವ ಪಾತ್ರವನ್ನು, ತಾವು ಅತೀ ಹೆಚ್ಚಾಗಿ ಇಷ್ಟಪಡುತ್ತೀರಿ?

ಚೇತನ ಭಗತ್: ಎಲ್ಲವನ್ನೂ ಇಷ್ಟಪಡುತ್ತೇನೆ. ಅಭಿನಯದಲ್ಲಿ ಖುಷಿಪಟ್ಟಿದ್ದೇನೆ. ("ದಿ ಕಪಲ್ಡ್" ಚಿತ್ರದಲ್ಲಿ ನಟನೆ) ಅದೊಂದು ರೀತಿ ತಮಾಷೆಯಾಗಿತ್ತು. ಆದರೆ ಈಗ ನನ್ನನ್ನು ಯಾರೂ ಪಾತ್ರ ಮಾಡಲು ಕರೆಯುತ್ತಿಲ್ಲ. ಜೀವನದಲ್ಲಿ ಹಲವಾರು ಅನುಭವಗಳನ್ನು ಪಡೆಯುವುದು ಮಹತ್ವಪೂರ್ಣವಾಗಿರುತ್ತದೆ.

ಮಿತ್ರ: ನಿಮಗೆ ಓದಲು ಸಮಯ ಸಿಗುತ್ತದೆಯೇ?

ಚೇತನ ಭಗತ್: ಕಡೆಯ ಪಕ್ಷ ಪ್ರತಿ ತಿಂಗಳು ಒಂದು ಪುಸ್ತಕವನ್ನು ಓದಲು ನಾನು ಪ್ರಯತ್ನಪಡುತ್ತೇನೆ. ಪ್ರಸ್ತುತ ನಾನು "Molecular Mode" ಶೀರ್ಷಿಕೆಯ ನರವಿಜ್ಞಾನಕ್ಕೆ ಸಂಬಂಧಪಟ್ಟ ಪುಸ್ತಕ ಓದುತ್ತಿದ್ದೇನೆ. ಇದು ಮೆದುಳಿನ ಚಲನೆ, ಅದು ಹೇಗೆ ಕೆಲಸ ಮಾಡುತ್ತದೆ, ಏಕೆ ಕೆಲವು ಜನರು ಸ್ವಯಂ ಪ್ರೇರಕರಾಗಿರುತ್ತಾರೆ ಹಾಗೂ ಕೆಲವರು ಹಾಗಿಲ್ಲದಿರುವ ಬಗ್ಗೆ ಮಾಹಿತಿ ನೀಡುತ್ತದೆ. ಬರಹಗಾರರಿಗೆ ಓದುವಿಕೆ ಮುಖ್ಯವಾಗುತ್ತದೆ. ಇದೊಂದು ರೀತಿಯ ಕಲೆಯಾಗಿದ್ದು ಅದನ್ನು ಆಗಾಗ್ಗೆ ಸಾಣೆ ಹಿಡಿಯಬೇಕು. ಓದುವಿಕೆ ನಿಮ್ಮನ್ನು ಆ ಪಥದತ್ತ ಕರೆದೊಯ್ಯುತ್ತದೆ. ಇದಕ್ಕೆ ವಿರುದ್ಧವಾಗಿ, ರೀಲುಗಳನ್ನು ನೋಡುವುದರಿಂದ ಯಾವ ಪ್ರಯೋಜನವೂ ಇಲ್ಲ. ನಿಮ್ಮ ಮೆದುಳನ್ನು ಅದು ತುಕ್ಕು ಹಿಡಿಸುತ್ತದೆ.

> "ಜಟಿಲತೆಗಳಿದ್ದರೆ ನಿಮಗೆ ಪ್ರಶಸ್ತಿ ದೊರೆಯುವುದಿಲ್ಲ. ಆದರೆ ಸಂವಹನವಿದ್ದರೆ ನಿಮಗೆ ಸಿಗಬಹುದು. ನೀವು ಜಟಿಲ ರೀತಿಯ ಲೇಖಕರಾದರೆ ಜನ ಸಮೂಹ ಸೇರುವ ಸಭೆ ಸಮಾರಂಭಗಳಿಗೆ ನಿಮ್ಮನ್ನು ಆಹ್ವಾನಿಸುವುದಿಲ್ಲ. ಆದರೆ ಗಣ್ಯ ವ್ಯಕ್ತಿಗಳು ವೈನ್ ಸೇವಿಸುತ್ತಾ ಪುಸ್ತಕಗಳ ಬಗ್ಗೆ ವಿಮರ್ಶೆ ಮಾಡುವ ಸಮಾರಂಭಕ್ಕೆ ಆಹ್ವಾನಿಸಬಹುದು. ಪ್ರಶಸ್ತಿ ಗಳಿಸುವುದಕ್ಕಿಂತ ಓರ್ವ ಜನಪ್ರಿಯ ವ್ಯಕ್ತಿಯಾಗಿ ಉಳಿಯುವುದು ನನಗೆ ಮುಖ್ಯವಾಗಿದೆ."

ಮಿತ್ರ: ಮೆಟ್ರೋಗಳ ಲೇಖಕರಿಗೆ ದೊಡ್ಡಮಟ್ಟದ ಸಾಧನೆಗಳನ್ನು ಮಾಡುವುದು, ಮೈಸೂರಿನಂತಹ ಚಿಕ್ಕ ನಗರದ ಲೇಖಕರಿಗಿಂತ ಸುಲಭವೆಂದು ನಿಮಗೆ ಅನಿಸುತ್ತದೆಯೇ?

ಚೇತನ ಭಗತ್: ಸಾಮಾಜಿಕ ಜಾಲತಾಣದ ಈ ಯುಗದಲ್ಲಿ, ಸ್ಥಳದ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಲೇಖಕ, ಪ್ರಚಾರ ನಿರ್ವಹಣೆಯ ಹೊರೆಯನ್ನು ತಾನೇ ಹೊರಬೇಕು. ದೊಡ್ಡ ಪ್ರಕಾಶಕರು ಸಹ, ನಿಮಗೋಸ್ಕರ ಪುಸ್ತಕದ ಪ್ರಚಾರ ಮಾಡುವುದಿಲ್ಲ. ನಾನು ನನ್ನ ಪ್ರಥಮ ಪುಸ್ತಕವನ್ನು ಬರೆದಾಗ, ಅದರ ವಿಮರ್ಶೆ "ಇಂಡಿಯಾ ಟುಡೇ"ಯಲ್ಲಿ ಪ್ರಕಟವಾಗಿತ್ತು. ಆಗ ಅದೊಂದು ದೊಡ್ಡ ವಿಷಯವಾಗಿತ್ತು. ಆದರೆ ಇಂದಿನ ದಿನಗಳಲ್ಲಿ ಅಷ್ಟೊಂದು ಹೆಚ್ಚುಗಾರಿಕೆಯೇನಿಲ್ಲ. ಸಾಮಾಜಿಕ ಜಾಲತಾಣದಲ್ಲಿ ನಿಮ್ಮ ಪುಸ್ತಕದ ಬಗ್ಗೆ ಚರ್ಚೆಯಾದರೆ ಅದು ಹೆಚ್ಚು ಮಹತ್ವಪೂರ್ಣವಾಗುತ್ತದೆ. ನೀವು ಮೈಸೂರು ಅಥವಾ ಯಾವುದೇ ಪ್ರದೇಶಕ್ಕೆ ಸೇರಿದವರಾಗಿದ್ದರೂ ಸಹ ಯಶಸ್ವಿಯಾಗಬಹುದು. ಮನೋಭಾವನೆ ಬದಲಾಗಬೇಕಿದೆ. ಪ್ರತಿಯೊಂದು ವ್ಯಾಪಾರವೂ ಸಹ ಆನ್‌ಲೈನ್ ವ್ಯೂಹವನ್ನು ಹೊಂದಿರಬೇಕು. ಪ್ರತಿಯೊಬ್ಬ ಲೇಖಕನೂ ಆನ್‌ಲೈನ್‌ನಲ್ಲಿ ಪ್ರಸ್ತುತನಾಗಿರಬೇಕು. ಸಾಮಾಜಿಕ ಜಾಲತಾಣದ ಪಟ್ಟುಗಳನ್ನು ಕಲಿಯುವುದು ಪ್ರತ್ಯೇಕವಾದ ಕೌಶಲ್ಯವಾಗಿದೆ. ಆದರೆ ನಿಮಗೆ ಬೇರೆ ದಾರಿಯಿಲ್ಲ, ಕಲಿಯಲೇಬೇಕು.

ಮಿತ್ರ: ಚೇತನ್ ಭಗತ್ ಅವರ ಜೀವನದಲ್ಲಿ ವಿಶೇಷವಾದ ದಿನ ಯಾವುದು?

ಚೇತನ ಭಗತ್: ಬೆಳಗಿನ ಎರಡು ಗಂಟೆಗಳ ಕಾಫಿ ಸಮಯವನ್ನು ನಾನು ಪ್ರೀತಿಸುತ್ತೇನೆ. ಈ ಸಮಯದಲ್ಲಿ ನನ್ನನ್ನು ನಾನು ಹೇಗೆ ವೃದ್ಧಿಸಿಕೊಳ್ಳಬಹುದೆಂಬುದರ ಬಗ್ಗೆ ಯೋಚಿಸುತ್ತೇನೆ. ಅದೇನು ಅಂತಹ ದೊಡ್ಡ ಸಾಧನೆಯಾಗಿರಬೇಕೆಂದಿಲ್ಲ. ಆದರೆ ಮಹತ್ವಪೂರ್ಣ ಸಂಗತಿಗಳು. ನಂತರ ಬರವಣಿಗೆ, ಆಡಳಿತಾತ್ಮಕ ಕೆಲಸ, ಅಂದರೆ, ತೆರಿಗೆ ಪಾವತಿ, ಮಕ್ಕಳ ಮತ್ತು ಸಂಸಾರದ ಜೊತೆ ಸಮಯ ಕಳೆಯುವುದು. ಕೌಟುಂಬಿಕ ಸಹಕಾರ ಅಗತ್ಯವಾಗಿರುತ್ತದೆ. ಆದರೆ ಕೊನೆಯಲ್ಲಿ ನಿಮಗೆ ನೀವೇ ಆಗಬೇಕಾಗುತ್ತದೆ. ನಿಮ್ಮ ಪ್ರಯಾಣವು ನಿಮ್ಮದೇ ಆಗಿರುತ್ತದೆ. ಆದ್ದರಿಂದಲೇ, ವೇದಗಳಲ್ಲಿ ಪರಿತ್ಯಕ್ತತೆಯ ಬಗ್ಗೆ ಹೇಳಲಾಗುತ್ತದೆ. ಬೇರೊಬ್ಬರ ಬೆಂಬಲವನ್ನು ಲೆಕ್ಕ ಹಾಕಬೇಡಿ.

ಮಿತ್ರ : ನೀವು ವಿವಾದಗಳಿಂದಲೇ ಸುತ್ತುವರೆದಿದ್ದೀರಿ. ಅವೇ ನಿಮ್ಮನ್ನು ಹುಡುಕಿಕೊಂಡು ಬರುತ್ತವೆಯೋ ಅಥವಾ ನೀವೇ ಅವುಗಳನ್ನು ಆಹ್ವಾನಿಸುತ್ತೀರೋ?

ಚೇತನ್ ಭಗತ್: ಯಾವಾಗಲೂ ಅಲ್ಲ. ಹಿಂದೆ ನಾನು ರಾಜಕೀಯ ಕುರಿತು ವಿಮರ್ಶೆ ಮಾಡುತ್ತಿದ್ದೆ. ಆದರೆ ಅದನ್ನು ಸಹ ಬಿಟ್ಟು ಬಿಟ್ಟಿದ್ದೇನೆ. ರಾಜಕೀಯ ಕೆಟ್ಟದ್ದು. ಯಾರೊಬ್ಬರೂ ರಾಜಕೀಯದ ಬಗ್ಗೆ ಅಥವಾ ಧರ್ಮದ ಬಗ್ಗೆ ಮಾತನಾಡಬಾರದು. ಜನರು ಈ ಎರಡು ವಿಷಯಗಳ ಬಗ್ಗೆ ಸಂವೇದನಾಶೀಲರಾಗಿದ್ದಾರೆ.

ಮಿತ್ರ: ನೀವು ರಾಜಕೀಯ ಸೇರುತ್ತೀರಾ?

ಚೇತನ್ ಭಗತ್: ಒಂದಾನೊಂದು ಕಾಲದಲ್ಲಿ ರಾಜಕೀಯದ ಬಗ್ಗೆ ನನಗೆ ತುಂಬಾ ಆಸಕ್ತಿ ಇತ್ತು ಹಾಗೂ ನಾನು ರಾಜಕೀಯ ಸೇರಬೇಕೆಂದುಕೊಂಡಿದ್ದೆ. ಆದರೆ ಈಗ ಬದಲಾವಣೆಯಿಂದ ಆಕರ್ಷಿತನಾಗಿದ್ದೇನೆ. ನಿಮ್ಮ ದೇಶದಲ್ಲಿ ಬದಲಾವಣೆ ತರಲು ರಾಜಕೀಯ ಒಂದು ಮಾರ್ಗ. ಆದರೆ ಅದು ಅತೀ ಕಠಿಣವಾದ ಕೆಲಸ. ಭಾರತದ ರಾಜಕೀಯ 24×7 ಗಂಟೆಗಳ ಕಾಲ ಕೆಲಸ ಮಾಡುತ್ತದೆ. ಆಗ ನಿಮ್ಮದು ಶೂನ್ಯಕರವಾದ ಕುಟುಂಬ ಜೀವನವಾಗುತ್ತದೆ. ಅದೇ ರೀತಿ ಶೂನ್ಯ ಖಾಸಗೀತನ ಉಂಟಾಗುತ್ತದೆ. ಒಂದೇ ದಿನದಲ್ಲಿ ತಾವು 08 ವಿವಾಹ ಮಹೋತ್ಸವಗಳಲ್ಲಿ ಭಾಗಿಯಾಗಿದ್ದನ್ನು ಮಾಜಿ ಕೇಂದ್ರ ಸಚಿವ ಶಶಿ ತರೂರ್ ಒಮ್ಮೆ ನನಗೆ ಹೇಳಿದ್ದರು. ಅವರು ಐದು ನಿಮಿಷಗಳಾದರೂ ತಮ್ಮ ಮುಖವನ್ನು ತೋರಿಸಲೇಬೇಕು. ಇದಲ್ಲದೆ, ಕ್ಷೇತ್ರದ ಕೆಲಸ ಮತ್ತು ಸಂಸತ್ತಿನ ಕೆಲಸ ಬೇರೆ ಇರುತ್ತದೆ.

ಮಿತ್ರ: ನಿಮ್ಮ ಕಾದಂಬರಿಗಳಿಗೆ ಐಡಿಯಾಗಳನ್ನು ಎಲ್ಲಿಂದ ಪಡೆಯುತ್ತೀರಿ?

ಚೇತನ್ ಭಗತ್: ನನ್ನ ಪ್ರಯಾಣದ ಮೂಲಕ. ಇದರ ಜೊತೆಗೆ ಪ್ರೇರಣಾತ್ಮಕ ವಿಡಿಯೋಗಳನ್ನು ಹಾಕುತ್ತೇನೆ. ಹಾಗೂ ವೈಫಲ್ಯತೆಗಳ ಬಗ್ಗೆ ಬರುವ ವಿಮರ್ಶೆ ಓದುತ್ತೇನೆ. ಹೃದಯ ವಿದ್ರಾವಕ ಘಟನೆಗಳು ನನ್ನ ಕಥೆಗಳಿಗೆ ಮೂಲ ಹಾಗೂ ಒಳ್ಳೆಯ ವಸ್ತುವನ್ನು (ಕಥಾ ಹಂದರ) ಒದಗಿಸುತ್ತದೆ. ಈಗಿನ ಕಾಲದಲ್ಲಿ ಸಾಂಪ್ರದಾಯಿಕವಾಗಿ ಪ್ರಕಟಿಸುವುದು ಕಷ್ಟ. ಆದರೆ ಇ-ಪುಸ್ತಕಗಳು, ಸ್ವಯಂ ಪ್ರಕಟಿಸುವುದು, ಬ್ಲಾಗಿಂಗ್, ಇನ್ಸ್ಟಾ ಪೋಸ್ಟ್ ಇತ್ಯಾದಿ ಹೊಸ ಮಾರ್ಗಗಳನ್ನು ಲೇಖಕರಿಗಾಗಿ ತೆರೆಯುತ್ತಿವೆ. ಆದ್ದರಿಂದ ಪುಸ್ತಕ ಪ್ರಕಟಣೆಗೆ ಮಾತ್ರ ಏಕೆ ಸೀಮಿತವಾಗಬೇಕು?

ಮಿತ್ರ: ನಿಮ್ಮ ನೆಚ್ಚಿನ ಲೇಖಕರು ಯಾರು?

ಚೇತನ್ ಭಗತ್: ನಾನು ಆರ್.ಕೆ.ನಾರಾಯಣ್ ಅವರ ಪುಸ್ತಕಗಳನ್ನು ಇಷ್ಟಪಡುತ್ತೇನೆ. ನಾನು ಅವರ ಸಂಗ್ರಹಾಲಯಕ್ಕೆ ಭೇಟಿ ನೀಡಿ ಅಲ್ಲಿ ಚಿತ್ರಗಳನ್ನು ತೆಗೆಯುತ್ತೇನೆ. ಮುಂಬಯಿಯಲ್ಲಿ ನನಗೊಂದು ಫ್ಲಾಟ್ ಇದೆ. ಅದನ್ನು ಸಂಗ್ರಹಾಲಯದ ರೀತಿ ಮಾಡಬಹುದು.

ಮಿತ್ರ: ನಿಜವಾದ ಚೇತನ್ ಭಗತ್ ಯಾರು?

ಚೇತನ್ ಭಗತ್: ನನ್ನ ಆಂತರಿಕ ಬೆಳವಣಿಗೆಗಾಗಿ ನಾನು ನಿರಂತರವಾಗಿ ಕೆಲಸ ಮಾಡಲು ಇಷ್ಟಪಡುತ್ತೇನೆ. ನನಗೆ ಹಲವಾರು ಮಂದಿ ಸ್ನೇಹಿತರಿದ್ದಾರೆ. ಅವರಲ್ಲಿ ಆಗರ್ಭ ಶ್ರೀಮಂತರೂ ಇದ್ದಾರೆ. ಆದರೆ ಅವರು ನಿಜವಾಗಿ ಸುಖಿಗಳಾಗಬೇಕೆಂದೇನಿಲ್ಲ. ಜನರು ಸಂಪತ್ತನ್ನು ಗಳಿಸುವ ತರಹ, ಪ್ರಶಸ್ತಿ ಗಳಿಸುವ ಮೂಲಕ ಬಾಹ್ಯ ರೀತಿಯ ಬೆಳವಣಿಗೆ ಹೊಂದಬಹುದು. ಆದರೆ ಅವರು ಆಂತರಿಕ ಸಂಪತ್ತನ್ನು ಗಳಿಸುವಲ್ಲಿ ವಿಫಲರಾಗುತ್ತಾರೆ. ಇದು (ಆಂತರಿಕ ಸಂಪತ್ತು) ಸಂತೋಷಕ್ಕೆ ಅಥವಾ ನೆಮ್ಮದಿಗೆ ಮುಖ್ಯ ಕಾರಣವಾಗಿದೆ.

ಸಿಗ್ಮಾ ಆಸ್ಪತ್ರೆಯಲ್ಲಿ ವೈದ್ಯ ದಿನಾಚರಣೆ

ಶತಾಯುಷಿಗೆ ಸನ್ಮಾನಿಸಿ ಧನ್ಯತೆ ಮೆರೆದ ಆಸ್ಪತ್ರೆ ಆಡಳಿತ ವರ್ಗ



ಮೈಸೂರು, ಜು.2–ವೈದ್ಯ ದಿನಾಚರಣೆ ಅಂಗವಾಗಿ ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಜ್ಞಾನಶಂಕರ್ ಅವರ ತಾಯಿ 102 ವರ್ಷದ ಶತಾಯುಷಿ ಶ್ರೀಮತಿ ದಾಕ್ಷಾಯಿಣಮ್ಮ ಶಿವಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಮಾತನಾಡಿದ ಜ್ಞಾನಶಂಕರ್, ವೈದ್ಯರು ದೇವರಿಗೆ ಸಮಾನ. ಹಾಗಾಗಿಯೇ ಅವರನ್ನು 'ವೈದ್ಯೋ ನಾರಾಯಣೋ ಹರಿಃ' ಎಂದು ಕರೆಯುವುದು. ಮನು ಕುಲಕ್ಕೆ ವೈದ್ಯರ ಸೇವೆ ಒಂದು ರೀತಿಯಲ್ಲಿ ದೈವ ಸಂಕಲ್ಪಿತ. ಈಗ ವೈದ್ಯ ಸಮೂಹ ನಿಸ್ವಾರ್ಥ ಸೇವೆ ಸಲ್ಲಿಸುತ್ತಾ ಸಮಾಜಕ್ಕೆ ಮಾದರಿ ವರ್ಗವಾಗಿದೆ. ದೈವದತ್ತವಾಗಿ ಬಂದಿರುವಂತಹ ಸೇವೆಯನ್ನು ವೈದ್ಯರು ಆಧುನಿಕ ಕಾಲದಲ್ಲೂ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು. ಸಿಗ್ಮಾ ಆಸ್ಪತ್ರೆಯಲ್ಲಿ ಕೇಂದ್ರ, ರಾಜ್ಯ ಸರ್ಕಾರ ಮತ್ತು ಖಾಸಗಿ ಆರೋಗ್ಯ ವಿಮಾ ಯೋಜನೆಗಳ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದ್ದು, ಇತರೆ ಆಸ್ಪತ್ರೆಗಳಿಗಿಂತ ಕನಿಷ್ಠ ಖರ್ಚಲ್ಲಿ ಆರೋಗ್ಯ ಸೇವೆ ನೀಡಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಆಸ್ಪತ್ರೆ ನಿರ್ದೇಶಕರುಗಳಾದ ಡಾ. ರಾಜೇಶ್ವರಿ ಮಾದಪ್ಪ, ಡಾ. ಅಂಜಲಿ ಸಿದ್ದೇಶ್, ಡಾ. ಕೆ.ಎಂ.ಮಾದಪ್ಪ, ಡಾ. ಜಿ.ಸಿದ್ದೇಶ್, ತಜ್ಞ ವೈದ್ಯಾಧಿಕಾರಿಗಳಾದ ಡಾ. ಅನಿತಾ ಶೇಷಾದ್ರಿ, ಡಾ. ಶ್ರೀದೇವಿ, ಡಾ. ಕೃಷ್ಣ ಪ್ರಸನ್ನ ಇತರರು ಉಪಸ್ಥಿತರಿದ್ದರು.

ಕೋರ್ಟ್ ಆವರಣದಲ್ಲಿ ಕನ್ಹಯ್ಯ ಲಾಲ್ ಹತ್ಯೆ ಆರೋಪಿಗಳಿಗೆ ಜನರಿಂದ ಗೂಸಾ

ಜುಲೈ 12ರವರೆಗೆ 4 ಆರೋಪಿಗಳು ಎನ್ಐಎ ಕಸ್ಟಡಿಗೆ

ಉದಯಪುರ (ರಾಜಸ್ತಾನ), ಜು.2– ಕನ್ಹಯ್ಯ ಲಾಲ್ ಹತ್ಯೆ ಪ್ರಕರಣದ ಪ್ರಮುಖ ಆರೋಪಿಗಳಾದ ಮೊಹಮ್ಮದ್ ರಿಯಾಜ್ ಮತ್ತು ಗೌಸ್ ಮೊಹಮ್ಮದ್ ಸೇರಿದಂತೆ ನಾಲ್ವರು ಆರೋಪಿಗಳನ್ನು ಜುಲೈ 12ರವರೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ ಕಸ್ಟಡಿಗೆ



ಕಳುಹಿಸಲಾಗಿದೆ. ಇಂದು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಂದರ್ಭದಲ್ಲಿ ಅಲ್ಲಿ ನೆರೆದಿದ್ದ ಲಾಯರ್‌ಗಳು ಹತ್ಯೆ ಆರೋಪಿಗಳ ಮೇಲೆ ಹಲ್ಲೆ ನಡೆಸಿದ್ದು ಅಲ್ಲದೆ ಬಾಟಲಿಗಳನ್ನು ಅವರ ಮೇಲೆ ಎಸೆದಿದ್ದಾರೆ.

ಜೂನ್ 28ರಂದು ಹಾಡುಹಗಲೇ ಆರೋಪಿಗಳು ಹಿಂದೂ ವ್ಯಕ್ತಿ ಕನ್ಹಯ್ಯಾ ಲಾಲ್ ಅವರ ಶಿರಚ್ಛೇದ ಮಾಡಿದ್ದರು. ಉದಯಪುರ ಹತ್ಯೆಯ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿತ್ತು. ಬಿಜೆಪಿ ನಾಯಕಿ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿದ್ದಕ್ಕೆ ಟೈಲರ್ ಅವರನ್ನು ಹತ್ಯೆ ಮಾಡಲಾಗಿತ್ತು. ಇಬ್ಬರು ಪ್ರಮುಖ ಆರೋಪಿಗಳು ಬೈಕ್‌ನಲ್ಲಿ ಪರಾರಿಯಾಗುತ್ತಿದ್ದಾಗ ರಾಜಸ್ತಾನ ಪೊಲೀಸರು ಬೆನ್ನಟ್ಟಿ ಬಂಧಿಸಿದ್ದರು. ಏತನ್ಮಧ್ಯೆ, ಗುಪ್ತಚರ ಮೂಲಗಳು, ಪ್ರಮುಖ ಆರೋಪಿಯನ್ನು ಪಾಕಿಸ್ತಾನ ಮೂಲದ ಹ್ಯಾಂಡ್ಲರ್‌ಗಳು ಸಲ್ಮಾನ್ ಹೈದರ್ ಮತ್ತು ಅಬು ಇಬ್ರಾಹಿಂ ಎಂದು ಗುರುತಿಸಿದ್ದಾರೆ. ನೂಪುರ್ ಶರ್ಮಾ ಅವರು ಪ್ರವಾದಿಯವರ ಬಗ್ಗೆ ಮಾಡಿದ ಹೇಳಿಕೆಗಳ ವಿವಾದದ ಹಿನ್ನೆಲೆಯಲ್ಲಿ ಹೈದರ್ ಮತ್ತು ಇಬ್ರಾಹಿಂ ಇಬ್ಬರು ಆರೋಪಿಗಳನ್ನು ದೊಡ್ಡ ದಾಳಿ ನಡೆಸಲು ಮುಂದಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಮೂಲಗಳ ಪ್ರಕಾರ, ಮೊಹಮ್ಮದ್ ರಿಯಾಜ್ ಮತ್ತು ಘೌಸ್ ಮೊಹಮ್ಮದ್ ಭಯೋತ್ಪಾದಕ ದಾಳಿಗಳನ್ನು ನಡೆಸಲು ಆರ್‌ಡಿಎಕ್ಸ್‌ನಂತಹ ಸ್ಫೋಟಕಗಳನ್ನು ವ್ಯವಸ್ಥೆ ಮಾಡಲು ಪ್ರಯತ್ನಿಸುತ್ತಿದ್ದರು ಎಂದು ಆರೋಪಿಸಲಾಗಿದೆ. ಇಬ್ಬರೂ 'ಏನಾದರೂ ದೊಡ್ಡದನ್ನು ಮಾಡುವ' ಬಗ್ಗೆ ಮಾತನಾಡಿದ್ದರು ಎಂದು ಹೇಳಲಾಗಿದೆ.

ಒಂದಕ್ಕೆ ಮೂರರಷ್ಟು ಹಣ ನೀಡುವ ಆಸೆ ತೋರಿಸಿ 8 ಲಕ್ಷ ವಂಚನೆ

ಮೈಸೂರು, ಜು.2–ಒಂದಕ್ಕೆ ಮೂರರಷ್ಟು ಹಣ ನೀಡುವುದಾಗಿ ನಂಬಿಸಿ ಉದ್ಯಮಿಯೊಬ್ಬರಿಗೆ 8 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೂಲತಃ ಕೇರಳದವರಾಗಿದ್ದು, ಮೈಸೂರಿನ ಹಂಚ್ಯಾ ಸಾತಗಳ್ಳಿಯಲ್ಲಿ ವಾಸವಿರುವ ರಿಯಲ್ ಎಸ್ಟೇಟ್ ಉದ್ಯಮಿ ಆರ್.ಶಶಿಕುಮಾರ್ ಹಣ ಕಳೆದುಕೊಂಡವರು. ಇವರು ಕೇರಳದ ಡಾ. ಪೈಜಲ್, ಗುತ್ತಿಗೆದಾರರಾದ ಪ್ರಸೂಲ್ ಹಾಗೂ ಯಾಕೂಬ್ ಅವರೊಡಗೂಡಿ ವಂಚಕರಿಗೆ 8 ಲಕ್ಷ ರೂ. ನೀಡಿ ಮೋಸ ಹೋಗಿದ್ದಾರೆ.

ವಿವರ: ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಶಶಿಕುಮಾರ್ ಅವರಿಗೆ ಹೂಟಗಳ್ಳಿ ನಿವಾಸಿ ಶಿವಶಂಕರ್ ಎಂಬುವರು ಪರಿಚಯವಾಗಿದ್ದಾರೆ. ನಾವು ಒಂದಕ್ಕೆ ಮೂರು ಪಟ್ಟು ಹಣ ಕೊಡುತ್ತೇವೆ. ಕನಿಷ್ಠ 5 ಲಕ್ಷ ರೂ. ನೀಡಿದರೆ ಅದಕ್ಕೆ ಮೂರರಷ್ಟು ಕಪ್ಪು ಮಸಿ ಇರುವ ಹಣ ನೀಡುತ್ತೇವೆ. ಅದನ್ನು ಲಿಕ್ವಿಡ್‌ನಲ್ಲಿ ಅದ್ದಿದರೆ ಅದು 500 ರೂ. ಮುಖಬೆಲೆಯ ಅಸಲಿ ನೋಟಾಗುತ್ತದೆ ಎಂದು ನಂಬಿಸಿದ್ದಾರೆ. ಒಂದಕ್ಕೆ ಮೂರರಷ್ಟು ಹಣ ಗಳಿಸಬಹುದು ಎಂಬ ಆಸೆಯಿಂದ ಶಶಿಕುಮಾರ್ ಕೇರಳಾದಿಂದ ತನ್ನ ಸ್ನೇಹಿತರಾದ ಡಾ. ಪೈಜಲ್, ಗುತ್ತಿಗೆದಾರರಾದ ಪ್ರಸೂಲ್ ಮತ್ತು ಯಾಕೂಬ್ ಅವರನ್ನು ಮೈಸೂರಿಗೆ ಕರೆಸಿಕೊಂಡಿದ್ದಾರೆ. ಜೂ.29ರಂದು ಸಂಜೆ ಶಶಿಕುಮಾರ್ ಮನೆಗೆ ಶಿವಶಂಕರ್ ಜೊತೆ ವಿನೋದ್ ಮತ್ತು ಶೇಖರ್ ಎಂಬುವರು ಬರುತ್ತಾರೆ. ಶಶಿಕುಮಾರ್ ಮತ್ತು ಸ್ನೇಹಿತರಿಂದ 8 ಲಕ್ಷ ರೂ. ಪಡೆದುಕೊಂಡ ಅವರು, ಒಂದು ಬ್ಯಾಗ್ ಅನ್ನು ಅವರಿಗೆ ನೀಡಿ, ಇದರಲ್ಲಿ ಕಪ್ಪು ಮಸಿ ಬಳಿದಿರುವ ನೋಟ್‌ಗಳಿವೆ. ಕ್ಯಾನಿನಲ್ಲಿ ಲಿಕ್ವಿಡ್ ಕೂಡ ಇದೆ. ಲಿಕ್ವಿಡ್‌ನಿಂದ ನೋಟನ್ನು ತೊಳೆದರೆ 500 ರೂ. ಮುಖಬೆಲೆಯ ಅಸಲಿ ನೋಟ್ ಬರುತ್ತದೆ ಎಂದು ಹೇಳಿ ಹೋಗಿದ್ದಾರೆ. ಅವರು ಹೇಳಿದಂತೆ ಲಿಕ್ವಿಡ್‌ನಲ್ಲಿ ತೊಳೆದರೆ ಅಸಲಿ ನೋಟು ಅಂತೂ ಬಂದಿಲ್ಲ. ನಂತರ ಆ ಮೂವರಿಗೂ ಕರೆ ಮಾಡಿದರೆ ಫೋನ್‌ಗಳು ಸ್ವಿಚ್ ಆಫ್ ಆಗಿವೆ ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಮನೆ ಮಾಲೀಕನ ಪುತ್ರಿಯಿಂದ ಕಿರುಕುಳ ಆರೋಪ: ಗೃಹಿಣಿ ದೂರು

ಮೈಸೂರು, ಜು.2–ಮನೆ ಮಾಲೀಕರ ಪುತ್ರಿ ತನ್ನನ್ನು ಆಂಬುಲೆನ್ಸ್‌ನಲ್ಲಿ ಅಪಹರಿಸಿ ನಿದ್ದೆ ಬರುವ ಇಂಜೆಕ್ಷನ್ ಕೊಡಿಸಿದ್ದಲ್ಲದೇ, ತನ್ನ ಕೆಲವು ವಸ್ತುಗಳನ್ನು ಕಸಿದಿದ್ದಾಳೆ ಎಂದು ಮೈಸೂರಿನ ಕಾಳಿದಾಸ ರಸ್ತೆಯ ಮನೆಯೊಂದರಲ್ಲಿ ಬಾಡಿಗೆಗಿರುವ ಗೃಹಿಣಿ ಆರೋಪಿಸಿದ್ದು, ಈ ಸಂಬಂಧ ಮೈಸೂರಿನ 6ನೇ ಅಡಿಷನಲ್ ಸಿವಿಲ್ ಜಡ್ಜ್ (ಕಿರಿಯ ಶ್ರೇಣಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಆದೇಶದ ಮೇರೆಗೆ ವಿವಿ ಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಾಳಿದಾಸ ರಸ್ತೆ 11ನೇ ಕ್ರಾಸ್, ಮನೆ ಸಂಖ್ಯೆ 2796ರಲ್ಲಿ ಬಾಡಿಗೆಗಿದ್ದ ಮಹಿಳೆ ಎ.ಬಿ.ನೂರ್ (35) ದೂರು ನೀಡಿದವರಾಗಿದ್ದು, 2021ರ ಡಿ.24ರಂದು ಮನೆ ಮಾಲೀಕ ರಮೇಶ್ ಎಂಬುವರ ಪುತ್ರಿ ಗೀತಾಂಜಲಿ ಪ್ರೇರಣಾ ಆಸ್ಪತ್ರೆಯ ಆಂಬುಲೆನ್ಸ್ ಅನ್ನು ಕರೆಸಿದರು. ಅದರಲ್ಲಿ ಬಂದ ಇಬ್ಬರು ಮಹಿಳಾ ನರ್ಸ್‌ಗಳು, ಅಟೆಂಡರ್ ಮತ್ತು ಡ್ರೈವರ್ ಗೀತಾಂಜಲಿ ಜೊತೆ ಸೇರಿ ತನ್ನನ್ನು ಹಾಗೂ ಮಗಳನ್ನು ಆಂಬುಲೆನ್ಸ್‌ನಲ್ಲಿ ಬಲವಂತವಾಗಿ ನೂಕಿದರು. ಅಲ್ಲದೇ ಮನೆ ಕೀ, ಮೊಬೈಲ್ ಫೋನ್, ಎಟಿಎಂ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಆಧಾರ್, ಪಾನ್ ಕಾರ್ಡ್, ಕಿವಿಯೋಲೆ, ಬಳೆಗಳು, ಕೈಗಡಿಯಾರ, ಸ್ಕೂಟರ್ ಕೀ ಕಿತ್ತುಕೊಂಡ ನಂತರ ಆಂಬುಲೆನ್ಸ್‌ನಲ್ಲಿ ತನಗೆ ನಿದ್ರೆ ಇಂಜೆಕ್ಷನ್ ನೀಡಿ ಪ್ರೇರಣಾ ಆಸ್ಪತ್ರೆಗೆ ಕರೆದೊಯ್ದರು ಎಂದು ದೂರಿನಲ್ಲಿ ನೂರ್ ತಿಳಿಸಿದ್ದಾರೆ.

ಪ್ರೇರಣಾ ಆಸ್ಪತ್ರೆಯ ಐಸಿಯುನಲ್ಲಿ ಡಾ. ಅಭಿಜಿತ್ ಅವರು ತನಗೆ ಮತ್ತೆ ನಿದ್ರೆ ಇಂಜೆಕ್ಷನ್ ನೀಡಿ, ಅಲ್ಲಿಂದ ನಿಮ್ಹಾನ್ಸ್ ಆಸ್ಪತ್ರೆಗೆ ಶಿಫ್ಟ್ ಮಾಡಿದ್ದು, ಅಲ್ಲಿ ಡಾ. ಹರೀಶ್ ಎಂಬುವರು ಚಿಕಿತ್ಸೆ ನೀಡಿ ತನ್ನನ್ನು ಜ.4ರಂದು ಡಿಸ್ಚಾರ್ಜ್ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಗೀತಾಂಜಲಿ ವಿರುದ್ಧ ವಿವಿ ಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಿಂಗ್ ರಸ್ತೆಯಲ್ಲಿ ಉದ್ಯಮಿಗೆ ಚಾಕು ತೋರಿಸಿ ಲಕ್ಷ ರೂ. ಸುಲಿಗೆ

ಮೈಸೂರು, ಜು.2–ಮೂವರು ದುಷ್ಕರ್ಮಿಗಳು ಉದ್ಯಮಿಯೊಬ್ಬರ ಸ್ಕೂಟರ್ ಅಡ್ಡ ಹಾಕಿ, ಚಾಕು ತೋರಿಸಿ ಅವರನ್ನು ಬೆದರಿಸಿ ಲಕ್ಷ ರೂ. ದೋಚಿದ ಘಟನೆ ಮೈಸೂರಿನ ರಿಂಗ್ ರೋಡ್‌ನ ಶೇಷಾದ್ರಿಪುರಂ ಕಾಲೇಜು ಜಂಕ್ಷನ್‌ನಲ್ಲಿ ಜೂ.30ರಂದು ರಾತ್ರಿ ನಡೆದಿದೆ.

ಮೈಸೂರಿನ ಕೂರ್ಗಳ್ಳಿಯಲ್ಲಿ ವಾಸವಿದ್ದು, ಎನ್.ಆರ್.ಮೊಹಲ್ಲಾ ಶಿವಾಜಿ ರಸ್ತೆಯಲ್ಲಿ ನಂದಿನಿ ಅಸೋಸಿಯೇಟ್ಸ್ ಎಂಬ ಹೆಸರಿನಲ್ಲಿ ಎಡಿಬಲ್ ಆಯಿಲ್ ಡಿಸ್ಟ್ರಿಬ್ಯೂಷನ್ ಸೆಂಟರ್ ನಡೆಸುತ್ತಿರುವ ಕೆ.ನಂಜುಂಡ(44) ಹಣ ಕಳೆದುಕೊಂಡವರಾಗಿದ್ದು, ಇವರು ಜೂ.30ರಂದು ರಾತ್ರಿ ಎನ್.ಆರ್. ಮೊಹಲ್ಲಾದಿಂದ ಸ್ಕೂಟರ್‌ನಲ್ಲಿ (ಕೆಎ 09 ಇ 8369) ಕೂರ್ಗಳ್ಳಿಗೆ ರಿಂಗ್ ರಸ್ತೆಯಲ್ಲಿ ತೆರಳುತ್ತಿದ್ದಾಗ ರಾತ್ರಿ 10.15ರ ಸುಮಾರಿನಲ್ಲಿ ಶೇಷಾದ್ರಿಪುರಂ ಕಾಲೇಜು ಜಂಕ್ಷನ್‌ನಲ್ಲಿ ಹೀರೋ ಹೋಂಡಾ ಸ್ಪ್ಲೆಂಡರ್‌ನಲ್ಲಿ ಬಂದ ಮೂವರು ದುಷ್ಕರ್ಮಿಗಳು ಇವರ ಸ್ಕೂಟರ್ ಅಡ್ಡ ಹಾಕಿ ಚಾಕು ತೋರಿಸಿ ಬೆದರಿಸಿದ್ದಲ್ಲದೇ, ಅವರ ಮೇಲೆ ಹಲ್ಲೆ ಮಾಡಿ ಕ್ಯಾಷ್‌ಬ್ಯಾಗ್‌ನಲ್ಲಿದ್ದ ಲಕ್ಷ ರೂ.ಗಳನ್ನು ಕಸಿದು ಪರಾರಿಯಾಗಿದ್ದಾರೆ. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ ವಾಹಿನಿ ವಿರುದ್ಧ ಪವಿತ್ರಾ ಲೋಕೇಶ್ ದೂರು

ವಾಹಿನಿಯಿಂದಲೂ ಪ್ರತಿ ದೂರು ದಾಖಲು



ಮೈಸೂರು, ಜು.2(ಜಿಎ)– ಖಾಸಗಿ ಸುದ್ದಿ ವಾಹಿನಿ ವಿರುದ್ಧ ನಟಿ ಪವಿತ್ರಾ ಲೋಕೇಶ್ ಮೈಸೂರಿನ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.


ನರೇಶ್ ಹಾಗೂ ಪವಿತ್ರಾ ವಿಚಾರದ ವಿವಾದದ ನಡುವೆ ಅವರು ಶನಿವಾರ ರಾತ್ರಿ ನಗರದ ವಿವಿ ಪುರಂ ಪೊಲೀಸ್ ಠಾಣೆ ಭೇಟಿ ನೀಡಿದ ಪವಿತ್ರ ಲೋಕೇಶ್ ಖಾಸಗಿ ವಾಹಿನಿ ವಿರುದ್ಧ ದೂರು ಸಲ್ಲಿಸಿದ್ದಾರೆ.

ಖಾಸಗಿ ಸುದ್ದಿ ವಾಹಿನಿಯವರು ನಾನು ಎಲ್ಲಿ ಹೋದರು ಬೆನ್ನಟ್ಟಿ ಬರುತ್ತಿದ್ದು, ನನ್ನ ಮನೆ ಮತ್ತು ಮಕ್ಕಳ ಫೋಟೋಗಳನ್ನು ತೆಗೆಯುತ್ತಿದ್ದಾರೆ. ಇದರಿಂದ ನನಗೆ ಆತಂಕವಾಗುತ್ತಿದೆ. ಹಾಗಾಗಿ ನನಗೆ ರಕ್ಷಣೆ ನೀಡಿ ಎಂದು ದೂರು ನೀಡಿದ್ದಾರೆ. ಈ ದೂರಿಗೆ ಪ್ರತಿಯಾಗಿ ಖಾಸಗಿ ಮಾಧ್ಯಮವು ಪವಿತ್ರಾ ಲೋಕೇಶ್ ವಿರುದ್ಧ ದೂರು ನೀಡಿದ್ದು, ನಾವು ಸುದ್ದಿ ಮಾಡಲು ನಮ್ಮ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಪವಿತ್ರ ಲೋಕೇಶ್ ಕಾರಿನಲ್ಲಿದ್ದ ಇಬ್ಬರು ಬೆಂಗಾವಲುಗಾರರು ಕಾರಿನಿಂದ ಇಳಿದು ನಮ್ಮ ಐಡಿ ಕಾರ್ಡ್ ಕಸಿದುಕೊಂಡು ತೆಲುಗಿನಲ್ಲಿ ಮತ್ತೆ ಬಂದರೆ, ಸಾಯಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿ ಹೋದರು ಎಂದು ದೂರು ನೀಡಿದ್ದಾರೆ.

ಡಾ. ಸಂಜಯ್ ವಿರಚಿತ 'ಹಾರುವ ನರಿ ಮತ್ತು ಇತರ ಪರಿಸರದ ಕತೆಗಳು' ಕೃತಿ ಇಂದು ಬಿಡುಗಡೆ

ಮೈಸೂರು, ಜು.2– ವೈದ್ಯದಂಪತಿ ಡಾ.ಹೆಚ್.ಬಿ.ರಾಜಶೇಖರ್ ಹಾಗೂ ಡಾ. ಲತಾ ರಾಜಶೇಖರ್ ಅವರ ಪುತ್ರ ಡಾ. ಹೆಚ್.ಆರ್.ಸಂಜಯ್ ವಿರಚಿತ 'ಹಾರುವ ನರಿ ಮತ್ತು ಇತರ ಪರಿಸರದ ಕತೆಗಳು' ಪುಸ್ತಕ ನಾಳೆ(ಜು.3) ಬಿಡುಗಡೆಯಾಗಲಿದೆ.





ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಲ್ಪವೃಕ್ಷ ಟ್ರಸ್ಟ್ ಸಹಯೋಗದಲ್ಲಿ ವಿಜಯನಗರದ ಸಾಹಿತ್ಯ ಭವನದಲ್ಲಿ ನಾಳೆ(ಜು.3) ಸಂಜೆ 5ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಕೃತಿಯನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಎನ್.ಹೆಗ್ಡೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಪತ್ರಕರ್ತ ಮೈಸೂರು ರಂಗನಾಥ್, ಡಾ.ಮುರಳಿ ನಾಡಿಗ್ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ. ವೃತ್ತಿಯಲ್ಲಿ ವೈದ್ಯರಾಗಿರುವ ಡಾ.ಹೆಚ್.ಆರ್.ಸಂಜಯ್, ಪರಿಸರದೊಂದಿಗಿನ ತಮ್ಮ ಒಡನಾಟದ ಅನುಭವಗಳನ್ನು ಅಕ್ಷರಗಳಲ್ಲಿ ಹಿಡಿದಿಟ್ಟಿದ್ದು, ಇದೀಗ ಪುಸ್ತಕ ರೂಪದಲ್ಲಿ ಓದುಗರ ಕೈಸೇರಲಿದೆ.

ಪೌರಕಾರ್ಮಿಕರ ಮುಷ್ಕರ: ಸ್ವಚ್ಛತಾ ನಿರ್ವಹಣೆಯಲ್ಲಿ ವ್ಯತ್ಯಯ ಸಾಧ್ಯತೆ

ಮೈಸೂರು,ಜು.2(ಎಸ್‌ಬಿಡಿ)–ನೌಕರಿ ಖಾಯಂಗೊಳಿಸಲು ಆಗ್ರಹಿಸಿ ಪೌರ ಕಾರ್ಮಿಕರು ರಾಜ್ಯಾದ್ಯಂತ ನಡೆಸುತ್ತಿರುವ ಮುಷ್ಕರ ಎರಡನೇ ದಿನಕ್ಕೆ ಕಾಲಿಟ್ಟಿದ್ದು, ಸ್ವಚ್ಛತಾ ನಿರ್ವಹಣೆಯಲ್ಲಿ ವ್ಯತ್ಯಯ ಶುರುವಾಗಿದೆ.


ಸಂಗ್ರಹ ಚಿತ್ರ

ಮೈಸೂರು ಮಹಾನಗರ ಪಾಲಿಕೆಯ 530 ಖಾಯಂ ಕಾರ್ಮಿಕರು ಮಾತ್ರ ಸ್ವಚ್ಛತೆ ಕೆಲಸಕ್ಕೆ ಹಾಜರಾಗಿದ್ದು, ಉಳಿದ 1600ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಮುಷ್ಕರದಲ್ಲಿ ತೊಡಗಿದ್ದಾರೆ. ಇವರಲ್ಲಿ ರಸ್ತೆ ಸ್ವಚ್ಛಗೊಳಿಸುವ ಕಾರ್ಮಿಕರನ್ನು ಹೊರತುಪಡಿಸಿ ಒಳಚರಂಡಿ ಸಹಾಯಕರು ಹಾಗೂ ಕಸ ಸಾಗಾಣಿಕೆ ವಾಹನ ಚಾಲಕರು ನೇರ ವೇತನ ಪಾವತಿ ವ್ಯವಸ್ಥೆಗೂ ಒಳಪಟ್ಟಿಲ್ಲ. ಸದ್ಯ ಈ ಎಲ್ಲಾ ಕಾರ್ಮಿಕರೂ ತಮ್ಮ ಸೇವೆಯನ್ನು ಖಾಯಂಗೊಳಿಸುವವರೆಗೆ ಮುಷ್ಕರ ನಡೆಸುವುದಾಗಿ ಪಟ್ಟು ಹಿಡಿದಿದ್ದಾರೆ.

ಕಸ ಸಮಸ್ಯೆ ಕಗ್ಗಂಟು: ಖಾಯಂ ಪೌರಕಾರ್ಮಿಕರು ನಗರದ ಪ್ರಮುಖ ಪ್ರದೇಶದ ಸ್ವಚ್ಛತೆ ಕಾರ್ಯ ನಡೆಸಿದರಾದರೂ ವಾರ್ಡ್‌ಗಳಲ್ಲಿ ಸ್ವಚ್ಛತೆ ಕಷ್ಟಸಾಧ್ಯವಾಗಿದೆ. ಮನೆಗಳಿಂದ ಕಸ ಸಂಗ್ರಹಿಸುವ ಹಾಗೂ ವಿಲೇವಾರಿ ಮಾಡುವ ಆಟೋ ಚಾಲಕರು ಹಾಗೂ ಸಹಾಯಕರೂ ಪ್ರತಿಭಟನೆಯಲ್ಲಿ ಭಾಗಿಯಾಗಿರುವುದರಿಂದ ಸಮಸ್ಯೆ ಮತ್ತಷ್ಟು ಕಗ್ಗಂಟಾಗಿದೆ. ಒಂದೆರಡು ದಿನಗಳ ನಂತರವೂ ಮನೆಯಲ್ಲಿ ಕಸ ಇಟ್ಟುಕೊಳ್ಳಲು ಸಾಧ್ಯವಾಗದ ಕಾರಣ ರಸ್ತೆ ಬದಿಯಲ್ಲಿ ಕಸ ಬಿಸಾಡುವ ಸಾಧ್ಯತೆ ಇದೆ. ಹಾಗಾದರೆ ಕಂಡಕಂಡಲೆಲ್ಲಾ ಕಸದ ರಾಶಿ ಬಿದ್ದು, ಹೈರಾಣಾಗುವ ಭೀತಿ ಎದುರಾಗಿದೆ.

ಇನ್ನು ಒಳಚರಂಡಿ ಸಮಸ್ಯೆ ಎದುರಾದರೆ ಪರಿಹಾರ ಕ್ರಮ ಕೈಗೊಳ್ಳುವುದು ಸವಾಲಾಗಲಿದೆ. ಎರಡು ದಿನದಲ್ಲೇ ಸಮಸ್ಯೆ ಬಿಗಡಾಯಿಸಿರುವ ಕಾರಣ ಪಾಲಿಕೆ ಅಧಿಕಾರಿಗಳನ್ನು ಚಿಂತೆಗೀಡುಮಾಡಿದೆ. ಮನೆಗಳಿಂದ ಕಸ ಸಂಗ್ರಹಣೆ ಹಾಗೂ ಒಳಚರಂಡಿ ನಿರ್ವಹಣೆ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರ ಶೀಘ್ರ ಪೌರಕಾರ್ಮಿಕರ ಬೇಡಿಕೆ ಸಂಬಂಧ ನಿರ್ಣಯ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ತೊಂದರೆಯಾಗಲಿದೆ. ಒಂದು ವೇಳೆ ಮುಷ್ಕರ ಮುಂದುವರೆದರೆ ಸ್ಥಳೀಯವಾಗಿ ಕೈಗೊಳ್ಳಬಹುದಾದ ತಾತ್ಕಾಲಿಕ ಕ್ರಮಗಳ ಬಗ್ಗೆ ಪಾಲಿಕೆ ಅಧಿಕಾರಿಗಳು ಚರ್ಚೆ ನಡೆಸುವ ಸಾಧ್ಯತೆ ಇದೆ.

ಸಂತೇಬಾಚಹಳ್ಳಿ: ಕಣ್ಣಿನ ತಪಾಸಣಾ ಶಿಬಿರಕ್ಕೆ ಚಾಲನೆ



> ಕೆಆರ್.ಪೇಟೆ ತಾಲೂಕನ್ನು ಅಭಿವೃದ್ಧಿ ಮಾಡುವುದೇ ನನ್ನ ಗುರಿ. ಸಂತೇಬಾಚಹಳ್ಳಿ, ಶೀಳನೆರೆ ವ್ಯಾಪ್ತಿಯಲ್ಲಿ ಏತ ನೀರಾವರಿ ಯೋಜನೆಗೆ 212 ಕೋಟಿ ರೂ. ಅನುದಾನ ತಂದು ಕಾಮಗಾರಿ ಆರಂಭಿಸಿದ್ದೇನೆ. ತಾಯಿ ಮಕ್ಕಳ ಆಸ್ಪತ್ರೆ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆ ತಂದಿದ್ದೇನೆ. ಉಸಿರಿರೋರುವರೆಗೂ ತಾಲೂಕಿನ ಸೇವೆ ಮಾಡೋದನ್ನು ನಿಲ್ಲಿಸಲ್ಲ.
>
> –ಡಾ.ನಾರಾಯಣಗೌಡ, ಸಚಿವ,

ಕೆ.ಆರ್.ಪೇಟೆ, ಜು.2(ಶ್ರೀನಿವಾಸ್)– ತಾಲೂಕಿನ ಸಂತೇಬಾಚಹಳ್ಳಿಯಲ್ಲಿ ಜಿಲ್ಲಾ ಡಳಿತ ಮತ್ತು ಆರೋಗ್ಯ ಇಲಾಖೆ ಹಾಗೂ ಆದಿಚುಂಚನಗಿರಿ ವೈದ್ಯಕೀಯ ಮಹಾ ವಿದ್ಯಾಲಯದ ನೇತೃತ್ವದಲ್ಲಿ ನಡೆದ ಹೋಬಳಿ ಮಟ್ಟದ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರಕ್ಕೆ ರೇಷ್ಮೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣ ಗೌಡ ಚಾಲನೆ ನೀಡಿದರು.

ಎಲ್ಲಾ ಗ್ರಾಮಗಳಿಂದಲೂ ಸಾವಿರಾರು ಜನರು ಆಗಮಿಸಿ ತಪಾಸಣೆ ಮಾಡಿಸಿದರು. ಅಗತ್ಯವಿರುವವರಿಗೆ ಇಂದೇ ಶಸ್ತ್ರ ಚಿಕಿತ್ಸೆ ಮಾಡಿಸಲು ಬಸ್ ವ್ಯವಸ್ಥೆ ಕೂಡ ಮಾಡಿಸಲಾಗಿತ್ತು. ನೇತ್ರ ತಪಾಸಣೆಗೆ ಆಗಮಿಸಿದ್ದ ವಯೋವೃದ್ಧರನ್ನು ಸಚಿವ ಡಾ.ನಾರಾಯಣ ಗೌಡರು ಖುದ್ದು ಭೇಟಿ ಮಾಡಿ, ಆತ್ಮೀಯವಾಗಿ ಮಾತನಾಡಿಸಿ ಆರೋಗ್ಯ ವಿಚಾರಿಸಿದರು.

ಬಳಿಕ ಮಾತನಾಡಿದ ಅವರು, ಕಳೆದ ಮಾರ್ಚ್‌ನಲ್ಲಿ ಕೆ.ಆರ್.ಪೇಟೆಯಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಅಂದು 20 ಸಾವಿರಕ್ಕೂ ಹೆಚ್ಚಿನ ಜನರು ಆರೋಗ್ಯ ತಪಾಸಣೆ ಮಾಡಿಸಿದ್ದರು. ಜೊತೆಗೆ ಐದಾರು ಸಾವಿರ ಜನ ಕಣ್ಣಿನ ತಪಾಸಣೆ ಮಾಡಿಸಿಕೊಂಡಿದ್ದರು. ಹಾಗಿದ್ದರೂ ತಾಲೂಕಿನಲ್ಲಿ ಇನ್ನೂ ಹಲವಾರು ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕಿದೆ ಎಂಬ ಮಾಹಿತಿ ಇತ್ತು ಹಾಗಾಗಿ, ಹೋಬಳಿ ಮಟ್ಟದಲ್ಲಿ ನೇತ್ರ ತಪಾಸಣಾ ಶಿಬಿರ ಆಯೋಜಿಸಲು ನಿರ್ಧರಿಸಿ, ಚಾಲನೆ ನೀಡಲಾಗಿದೆ ಎಂದರು.

ಇಂದಿನಿಂದ ಜು. 12ವರೆಗೂ ಕೆಆರ್ ಪೇಟೆಯ ಎಲ್ಲಾ ಹೋಬಳಿಗಳಲ್ಲಿ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಈ ಮೂಲಕ ಎಲ್ಲರಿಗೂ ನೇತ್ರ ತಪಾಸಣೆ ನಡೆಸಿ, ಅಗತ್ಯವಿದ್ದವರಿಗೆ ಉಚಿತ ಶಸ್ತ್ರ ಚಿಕಿತ್ಸೆ ನಡೆಸಿ ಕನ್ನಡಕ ನೀಡಲಾಗುತ್ತದೆ. ಪ್ರತಿಯೊಬ್ಬರಿಗೂ ಆರೋಗ್ಯ ಮುಖ್ಯ ಎಲ್ಲರಿಗೂ ಉತ್ತಮ ಆರೋಗ್ಯ ಸಿಗಬೇಕು ಎಂಬ ನಿಟ್ಟಿನಲ್ಲಿ ಎಲ್ಲಾ ಕಡೆ ಉಚಿತ ಆರೋಗ್ಯ ತಪಾಸಣೆ ಮಾಡುವ ಮೂಲಕ ಜನರಿಗೆ ಆರೋಗ್ಯ ಸೇವೆ ನೀಡುವ ಪ್ರಯತ್ನ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಇದೇ ವೇಳೆ ಸಂತೇಬಾಚಹಳ್ಳಿ ವ್ಯಾಪ್ತಿಯಲ್ಲಿ ಪಿಂಚಣಿ ಸೇರಿದಂತೆ ವಿವಿಧ ಯೋಜನೆಗಳ ಪ್ರಯೋಜನ ಪಡೆದ ಎರಡು ಸಾವಿರಕ್ಕೂ ಹೆಚ್ಚು ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ಸಚಿವರು ವಿತರಿಸಿದರು.

ಕಾರ್ಯಕ್ರಮದಲ್ಲಿ ಸಚಿವರ ಆಪ್ತ ಕಾರ್ಯದರ್ಶಿ ಪ್ರಭಾಕರ್, ಜಿಪಂ ಮಾಜಿ ಉಪಾಧ್ಯಕ್ಷರಾದ ಕಿಕ್ಕೇರಿ ಪ್ರಭಾಕರ್, ಶೀಳನೆರೆ ಅಂಬರೀಶ್, ಜಿಲ್ಲಾ ಹಾಪ್ ಕಾಮ್ಸ್ ನಿಗಮದ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಧನಂಜಯ್, ಉಪ ವಿಭಾಗಾಧಿಕಾರಿ ಶಿವಾನಂದಮೂರ್ತಿ, ತಹಸೀಲ್ದಾರ್ ರೂಪಾ, ತಾಪಂ ಇಓ ಸತೀಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂಧನ್. ತಾಲೂಕು ಆಯುಷ್ ಅಧಿಕಾರಿ ಡಾ.ಲೋಕೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಅಘಲಯ ಶ್ರೀಧರ್, ತಾ.ಪಂ.ಮಾಜಿ ಸದಸ್ಯ ಬಿಲ್ಲೇನ ಹಳ್ಳಿ ಕುಮಾರ್, ಗ್ರಾಪಂ ಅಧ್ಯಕ್ಷ ಮೋಹನ್, ಗೊರವಿ ಮಂಜೇಗೌಡ, ಮುಖಂಡರಾದ ಕೊಡಗಹಳ್ಳಿ ಜಯರಾಮೇಗೌಡ, ಎ.ಎಸ್.ಶ್ರೀಧರ್, ಡಿ.ಪಿ.ಪರಮೇಶ್, ಮರೀಗೌಡ ಚೇತನ್, ಸಾರಂಗಿ ನಾಗಣ್ಣ, ಭಾರತೀಪುರ ಪುಟ್ಟಣ್ಣ, ರಂಗಸ್ವಾಮಿ, ಸೋಮಶೇಖರ್, ಚೋಕನಹಳ್ಳಿ ಪ್ರಕಾಶ್, ಭಾರತೀಪುರ ಶ್ರೀನಿವಾಸ್, ಸಂತೇ ಬಾಚಹಳ್ಳಿ ಗ್ರಾಪಂ ಸದಸ್ಯರಾದ ದೇವರಾಜು (ದಿನೇಶ್), ನಾಡಕಚೇರಿ ಉಪ ತಹಸೀಲ್ದಾರ್ ಗೌರಮ್ಮ, ಸಚಿವರ ಆಪ್ತ ಸಹಾಯಕ ದಯಾ ನಂದ್, ಪ್ರದೀಪ್ ಸೇರಿದಂತೆ ನೂರಾರು ಗಣ್ಯರು ಸಾವಿರಾರು ಮಂದಿ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾಂಗ್ರೆಸ್‌ನ ಮಾಜಿ ಶಾಸಕ ರಾಜಣ್ಣ ವಿರುದ್ಧ ಪ್ರತಿಭಟನೆ



ಪಾಂಡವಪುರ, ಜು.2– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಬಗ್ಗೆ ಕಾಂಗ್ರೆಸ್‌ನ ಮಾಜಿ ಶಾಸಕ ಕೆ.ಎನ್.ರಾಜಣ್ಣ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ, ಪಟ್ಟಣದಲ್ಲಿ ಶನಿವಾರ ಜೆಡಿಎಸ್ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಐದು ದೀಪ ವೃತ್ತದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಶ್ರೀರಂಗಪಟ್ಟಣ–ಜೇವರ್ಗಿ ಮುಖ್ಯ ರಸ್ತೆ ತಡೆದು ಮಾನವ ಸರಪಳಿ ನಿರ್ಮಿಸಿ ರಾಜಣ್ಣ ಪ್ರಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಹೆಚ್.ಡಿ. ದೇವೇಗೌಡರು ರಾಜ್ಯದ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ ಹಲವು ಜನಪರ ಕಾರ್ಯಕ್ರಮ, ಯೋಜನೆ ನೀಡಿದ್ದಾರೆ. ಹಾಗಾಗಿ, ದೇಶ, ರಾಜ್ಯದ ಜನರು ಮಾಜಿ ದೇವೇಗೌಡರನ್ನು ಆರಾಧಿಸುತ್ತಿದ್ದಾರೆ. ಅಂತಹ ನಾಯಕರ ಬಗ್ಗೆ ಕಾಂಗ್ರೆಸ್‌ನ ಮಾಜಿ ಶಾಸಕ ರಾಜಣ್ಣ ಹಗುರವಾಗಿ ಹೇಳಿಕೆ ನೀಡಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ರಾಜಣ್ಣ ನಮ್ಮ ನಾಯಕ ದೇವೇಗೌಡರ ಮನೆಗೆ ತೆರಳಿ ನೇರವಾಗಿ ಅವರ ಬಳಿ ಕ್ಷಮೆಯಾಚಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ದೇವೇಗೌಡರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ನಿಮಗೆ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಜಿಪಂ ಸಾಮಾಜಿಕ ನ್ಯಾಯಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್, ಪುರಸಭೆ ಅಧ್ಯಕ್ಷೆ ಅರ್ಚನಾ ಚಂದ್ರು, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ನಿರ್ದೇಶಕ ರಾಮಕೃಷ್ಣೇಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಚಲುವರಾಜು, ಎಸ್.ಎ.ಮಲ್ಲೇಶ್, ವಿ.ಎಸ್.ನಿಂಗೇಗೌಡ, ಚಿಕ್ಕಾಡೆ ಚೇತನ್, ತಿಮ್ಮೇಗೌಡ, ಶಿಂಡ ಭೋಗನಹಳ್ಳಿ ನಾಗಣ್ಣ, ಅಂಕೇಗೌಡ, ಹಾರೋಹಳ್ಳಿ ಕೃಷ್ಣ, ಅಲ್ಪಳ್ಳಿ ಗೋವಿಂದಯ್ಯ, ರವಿಕರ, ಹೊಸಕೋಟೆ ಪುಟ್ಟಣ್ಣ, ಕೆನ್ನಾಳು ಗ್ರಾಪಂ ಅಧ್ಯಕ್ಷೆ ಶ್ವೇತಾ ಸುರೇಶ್, ಚಿನಕುರಳಿ ಗ್ರಾಪಂ ಅಧ್ಯಕ್ಷ ಇತ್ತಿಯಾಸ್ ಪಾಷ, ಸದಸ್ಯ ಸಿ.ಎ.ಲೋಕೇಶ್, ಚಿನಕುರಳಿ ಡೇರಿ ಮಾಜಿ ಅಧ್ಯಕ್ಷ ರಮೇಶ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣೇಗೌಡ, ನಿರ್ದೇಶಕ ಮಂಜು ನಾಥ್, ಬಲರಾಮೇಗೌಡ, ದೇಶವಳ್ಳಿ ಪ್ರಭಾಕರ್, ಕಾಮ ನಾಯಕನಹಳ್ಳಿ ರಾಮಚಂದ್ರು, ಬನ್ನಂಗಾಡಿ ಯೋಗೇಶ್, ಪುರಸಭೆ ಸದಸ್ಯರು, ಗ್ರಾಪಂ ಸದಸ್ಯರು ಹಾಜರಿದ್ದರು.

ಕೆಆರ್‌ಎಸ್ ಜಲಾಶಯದ ಒಳ ಹರಿವು ಹೆಚ್ಚಳ

ಶ್ರೀರಂಗಪಟ್ಟಣ, ಜು.2(ವಿನಯ್ ಕಾರೇಕುರ)– ಕೊಡಗು ಜಿಲ್ಲೆ ಸೇರಿದಂತೆ ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ ಕಳೆದ ನಾಲ್ಕೈದು ದಿನಗಳಿಂದ ಉತ್ತಮ ಮಳೆಯಾಗುತ್ತಿರುವ ಪರಿಣಾಮ ಕೆಆರ್‌ಎಸ್ ಜಲಾಶಯದ ಒಳಹರಿವು ಹೆಚ್ಚಳವಾಗಿದ್ದು, ಪ್ರಸ್ತುತ ಜಲಾಶಯದ ನೀರಿನ ಮಟ್ಟ 108.46 ಅಡಿ ತಲುಪಿದೆ. ಶನಿವಾರ ಸಂಜೆ ವೇಳೆಗೆ ಜಲಾಶಯಕ್ಕೆ ಒಳಹರಿವು 8,103 ಕ್ಯೂಸೆಕ್, ಹೊರಹರಿವು 1,215 ಕ್ಯೂಸೆಕ್ ಇದ್ದು, ಜಲಾಶಯದಲ್ಲಿ 30.202ರಷ್ಟು ಟಿಎಂಸಿ ನೀರಿನ ಸಂಗ್ರಹವಿದೆ.

ಸಾಲಬಾಧೆ: ರೈತ ಮಹಿಳೆ ಆತ್ಮಹತ್ಯೆ



ಮದ್ದೂರು, ಜು.2– ಸಾಲಬಾಧೆ ತಾಳಲಾರದೆ ರೈತ ಮಹಿಳೆಯೋರ್ವರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಹುಲಿಗೆರೆಪುರ ಗ್ರಾಮದಲ್ಲಿ ಶನಿವಾರ ವರದಿಯಾಗಿದೆ. ಗ್ರಾಮದ ಲೇ.ಮಹದೇವ್ರ ಅವರ ಪತ್ನಿ ಹೆಚ್.ಎಂ.ಪೂರ್ಣಿಮಾ (40) ಆತ್ಮಹತ್ಯೆ ಮಾಡಿಕೊಂಡ ಮಹಿಳೆ. ಇವರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ಕಳೆದ ನಾಲ್ಕು ವರ್ಷಗಳ ಹಿಂದೆ ಪೂರ್ಣಿಮಾ ಅವರ ಪತಿ ಮಹದೇವ್ರ ಮರಣ ಹೊಂದಿದ ಹಿನ್ನೆಲೆಯಲ್ಲಿ ತಂದೆ ಸಿದ್ದೇಗೌಡರೊಂದಿಗೆ ಪೂರ್ಣಿಮಾ ವಾಸವಾಗಿದ್ದರು.

ತಂದೆಯ ಹೆಸರಿನಲ್ಲಿ ಒಂದು ಎಕರೆ ಜಮೀನಿನಲ್ಲಿ ಭತ್ತ, ರಾಗಿ ಬೇಸಾಯ ಮಾಡಲು ಹಾಗೂ ಇಬ್ಬರು ಪುತ್ರಿಯರ ವಿದ್ಯಾಭ್ಯಾಸಕ್ಕಾಗಿ ಮದ್ದೂರು ಡಿಸಿಸಿ ಬ್ಯಾಂಕ್ ಶಾಖೆಯಲ್ಲಿ 50 ಸಾವಿರ ಹಾಗೂ ಅದೇ ಶಾಖೆಯಲ್ಲಿ 1.5ಲಕ್ಷ ರೂಗಳಿಗೆ ಆಭರಣಗಳನ್ನು ಅಡವಿಟ್ಟಿದ್ದರು. ಜೊತೆಗೆ, 2ಲಕ್ಷ ರೂಗಳ ಕೈಸಾಲ ಮಾಡಿರುವುದಾಗಿ ತಿಳಿದು ಬಂದಿದೆ.

ಜೀವನದಲ್ಲಿ ಜಿಗುಪ್ಸೆಗೊಂಡ ಹಾಗೂ ಸಾಲಬಾಧೆಯನ್ನು ತಾಳಲಾರದೆ ಪೂರ್ಣಿಮಾ ತಮ್ಮ ಪತಿ ಮನೆಯಲ್ಲಿ ಹೆಚ್ಚಿನ ಮಾತ್ರೆಗಳನ್ನು ಸೇವಿಸಿ ತೀವ್ರವಾಗಿ ಅಸ್ವಸ್ಥಗೊಂಡಿದ್ದ ಇವರಿಗೆ ತಾಲೂಕು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಮೃತಳ ತಂದೆ ಸಿದ್ದೇಗೌಡ ನೀಡಿದ ದೂರಿನ ಮೇರೆಗೆ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮಂಡ್ಯ,ಜು.2–ಮಂಡ್ಯ–ಬೆಂಗಳೂರು ಮುಖ್ಯ ರಸ್ತೆ ಅಗಲೀಕರಣ ಪ್ರಯುಕ್ತ ಲೈನ್ ಕಾಮಗಾರಿ ನಡೆಯುತ್ತಿರುವುದರಿಂದ ಜು.3ರಂದು ಬೆಳಗ್ಗೆ 10ರಿಂದ ಸಂಜೆ 6ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಮಂಡ್ಯ ಕೆ.ಐ.ಎ.ಡಿ.ಬಿ ಎಂಯುಎಸ್‌ಎಸ್‌ನಿಂದ ಹೊರಹೊಮ್ಮುವ ಎಫ್–3 ಡೈರಿ ಫೀಡರ್, ಎಫ್–2 ಹನಕೆರೆ ಮತ್ತು ಎಫ್–7 ವೆಲ್ಸ್‌ಫನ್ ಫೀಡರ್‌ನ ಅಡಿ ಬರುವಂತಹ ಗ್ರಾಮಗಳಾದ ಶ್ರೀನಿವಾಸಪುರ ಗೇಟ್, ಹೊಸಬೂದನೂರು, ಹಳೆಬೂದನೂರು, ಕಟ್ಟೆದೊಡ್ಡಿ, ಮಲ್ಲಯ್ಯನದೊಡ್ಡಿ, ಬಿ.ಗೌಡಗೆರೆ ಹಾಗೂ ಹನಕೆರೆ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಕತ್ತು ಕೊಯ್ದು ಯುವಕನ ಕೊಲೆ

ಶ್ರೀರಂಗಪಟ್ಟಣ, ಜು.2(ವಿನಯ್ ಕಾರೇಕುರ)– ಕತ್ತು ಕೊಯ್ದು ಯುವಕನೊಬ್ಬನನ್ನು ದುಷ್ಕರ್ಮಿಗಳು ಕೊಲೆ ಮಾಡಿರುವ ಘಟನೆ ತಾಲೂಕಿನ ಹುಲಿಕೆರೆ ಗ್ರಾಮದ ಬಳಿಯ ವರುಣಾ ಕಾಲುವೆ ಸಮೀಪದ ಖಾಲಿ ಜಾಗದಲ್ಲಿ ನಡೆದಿದೆ.

ಕೆಆರ್.ಸಾಗರ ತಲಕಾಡು ಫೈಲ್ ನಿವಾಸಿ ಸುಂದರರಾಜ್(32) ಕೊಲೆಯಾದ ಯುವಕ. ಈತ ಚಾಲಕ ಮತ್ತು ಎಲೆಕ್ಟ್ರಾನಿಕ್ ಕೆಲಸ ಮಾಡುತ್ತಿದ್ದ ಕುತ್ತಿಗೆ ಕುಯ್ದು ಸ್ಥಿತಿಯಲ್ಲಿ ಈತನ ಶವ ಪತ್ತೆಯಾಗಿದ್ದು, ಶನಿವಾರ ಸಂಜೆ ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಕೆ.ಆರ್.ಸಾಗರ ಪಿಎಸ್ಐ ಲಿಂಗರಾಜು ಭೇಟಿ ನೀಡಿ ಪರಿಶೀಲಿಸಿ, ಯುವಕನ ಗುರುತು ಪತ್ತೆ ಹಚ್ಚಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಯಾವ ಕಾರಣಕ್ಕೆ ಈತನ್ನು ಕೊಲೆ ಮಾಡಿದ್ದಾರೆ ಎಂಬುದು ತಿಳಿದು ಬಂದಿಲ್ಲ. ಸ್ಥಳಕ್ಕೆ ಎಎಸ್‌ಪಿ ವೇಣುಗೋಪಾಲ್ ಮತ್ತು ವೃತ್ತ ನಿರೀಕ್ಷಕ ಯೋಗೇಶ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿ ಕೊಲೆ ಮಾಡಿದ ಆರೋಪಿಗಳ ಪತ್ತೆಗೆ ತಂಡ ರಚಿಸಿದ್ದಾರೆ.

ಈ ಸಂಬಂಧ ಕೆ.ಆರ್.ಸಾಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವೇಗೌಡರ ವಿರುದ್ಧ ಕೆ.ಎನ್.ರಾಜಣ್ಣ ಹೇಳಿಕೆ: ಕಾಂಗ್ರೆಸ್ ಭವಿಷ್ಯಕ್ಕೆ ಕೊಡಲಿ ಪೆಟ್ಟು



ಮಂಡ್ಯ ಜು.2(ಮೋಹನ್‌ರಾಜ್)– ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಬಗ್ಗೆ ಮಧುಗಿರಿಯ ಮಾಜಿ ಶಾಸಕ ಹಾಗೂ ಹಿರಿಯ ಕಾಂಗ್ರೆಸ್ಸಿಗ ಕೆಎನ್.ರಾಜಣ್ಣ ನೀಡಿದ ಹೇಳಿಕೆಯಿಂದ ಇಡೀ ಕಾಂಗ್ರೆಸ್ ಭವಿಷ್ಯಕ್ಕೆ ಧಕ್ಕೆ ಉಂಟಾಗಲಿದ್ದು, ಕಾಂಗ್ರೆಸ್ ತನ್ನ ರಾಜಕೀಯ ಹಿತದೃಷ್ಟಿಯಿಂದ ಕೆಎನ್. ರಾಜಣ್ಣರನ್ನು ಕೂಡಲೇ ಪಕ್ಷದಿಂದ ಉಚ್ಚಾಟಿಸಬೇಕು ಎಂದು ಜೆಡಿಎಸ್ ಶಾಸಕ ಸಿ.ಎಸ್.ಪುಟ್ಟರಾಜು ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಇತಿಹಾಸವಿರುವ ಪಕ್ಷ. ದೇವೇಗೌಡರ ಶಕ್ತಿ ಏನೆಂಬುದು ಇಂದಿರಾ ಗಾಂಧಿಯಿಂದ ರಾಹುಲ್‌ಗಾಂಧಿವರೆಗೂ ತಿಳಿದಿದೆ. ಗೌಡರ ಬಗ್ಗೆ ಮಾತನಾಡದಂತೆ ಸ್ವತಃ ರಾಹುಲ್ ರಾಜ್ಯ ಕಾಂಗ್ರೆಸ್ಸಿಗರಿಗೆ ಸೂಚನೆ ನೀಡುತ್ತಾರೆ. ಅಂತಹದ್ದರಲ್ಲಿ ಕಾಂಗ್ರೆಸ್‌ನ ಒಬ್ಬ ಸಾಮಾನ್ಯ ಮುಖಂಡ, ಮಾಜಿ ಪ್ರಧಾನಿಗಳನ್ನು ಹಗುರವಾಗಿ ಟೀಕಿಸಿದ್ದು ಸರಿಯೇ? ಎಂದು ಪ್ರಶ್ನಿಸಿದರು.

ಕೆ.ಎನ್.ರಾಜಣ್ಣ ದೇವೇಗೌಡರ ಸಹಕಾರದಿಂದ ಶಾಸಕನಾಗಿ, ಸಹಕಾರ ಕ್ಷೇತ್ರದಲ್ಲಿ ಹೆಸರು ಮಾಡಿ ಇದೀಗ ಅವರ ಬಗ್ಗೆ ಮಾತನಾಡುವುದು ವಿಕೃತ ಮನಸ್ಥಿತಿ. ಒಬ್ಬ ಹಿರಿಯ ಮುತ್ಸದ್ದಿ ರಾಜಕಾರಣಿಯಾಗಿ ಈ ರೀತಿ ಕೀಳಾಗಿ ಮಾತನಾಡುವುದು ಸರಿಯಲ್ಲ. ಮಾನವೀಯ ಗುಣ ಹೊಂದಿರುವ ದೇವೇಗೌಡರು ಇಡೀ ರಾಷ್ಟ್ರಕ್ಕೆ ಮಾದರಿ. ಅವರಿಗೆ ಧಕ್ಕೆ ತರುವ ಕೆಲಸ ಮಾಡುತ್ತಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು. ಕಾಂಗ್ರೆಸ್ ಹೈಕಮಾಂಡ್ ಕೂಡಲೇ ರಾಜಣ್ಣ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಇಂದಿರಾ ಗಾಂಧಿ, ವಾಜಪೇಯಿ ಅವರಿಗೆ ಸಮಕಾಲೀನರಾಗಿರುವ ಗೌಡರ ಬಗ್ಗೆ ಹಗುರ ಮಾತನಾಡಿರುವ ಕೆ.ಎನ್.ರಾಜಣ್ಣ ಮೇಲೆ ಕಠಿಣ ಕ್ರಮ ಅಗತ್ಯವಿದೆ. ಈಗಾಗಲೇ ಪಾಂಡವಪುರ, ಕೆ.ಆರ್.ಪೇಟೆ, ಕೆ.ಎಂ.ದೊಡ್ಡಿಯಲ್ಲಿ ಪ್ರತಿಭಟನೆ ನಡೆದಿದ್ದು, ನಾಳೆ ಮಂಡ್ಯ, ಮದ್ದೂರು, ಮಳವಳ್ಳಿಯಲ್ಲಿ ನಡೆಯಲಿದೆ. ನಾಡಿದ್ದು ಶ್ರೀರಂಗಪಟ್ಟಣ ಹಾಗೂ ನಾಗಮಂಗಲದಲ್ಲಿಯೂ ಪ್ರತಿಭಟನೆ ನಡೆಯಲಿದೆ ಎಂದು ವಿವರಿಸಿದರು.

ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಕೆ.ಎನ್.ರಾಜಣ್ಣ ಒಬ್ಬ ಅನಾಗರಿಕ. ಶಾಸಕನಾಗಲು ದೇವೇಗೌಡರ ಆಶೀರ್ವಾದ ಬೇಕಿತ್ತು. ಸ್ವತಃ ಪ್ರಧಾನಿ ಮೋದಿ ಗೌಡರನ್ನು ಮನೆಯಂಗಳಕ್ಕೆ ಬಂದು ಸ್ವಾಗತ ಮಾಡುತ್ತಾರೆ. ಸಮಸ್ಯೆಗೆ ಸಲಹೆ ಪಡೆಯಲು ಗೌಡರನ್ನು ಸಂಪರ್ಕಿಸುತ್ತಾರೆ. ಅಂತಹ ನಾಯಕನ ವಿರುದ್ಧ ಮಾತನಾಡುವುದು ತರವಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಶಾಸಕ ಎಂ.ಶ್ರೀನಿವಾಸ್, ಮುಖಂಡರಾದ ಡಿ.ರಮೇಶ್, ಸಿದ್ದಲಿಂಗೇಗೌಡ ಇದ್ದರು.

ಬೆಂ–ಮೈ ಹೆದ್ದಾರಿ ಕ್ರೆಡಿಟ್ ಪ್ರತಾಪ್ ಸಿಂಹ, ಸುಮಲತಾಗಲ್ಲ ನನಗೆ ಸಲ್ಲಬೇಕು

ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕ್ರೆಡಿಟ್ ಪಡೆಯಲು ಮೈಸೂರು ಸಂಸದ ಪ್ರತಾಪ್‌ಸಿಂಹ ಹಾಗೂ ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಗುದ್ದಾಟಕ್ಕೆ ಬಿದ್ದಿದ್ದು, ರಸ್ತೆ ನಿರ್ಮಾಣ ಕ್ರೆಡಿಟ್ ಅಂದು ಸಂಸದನಾಗಿದ್ದ ನನಗೆ ಸಲ್ಲಬೇಕು ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ನಾನು, ಸಚಿವ ಅನಂತ್‌ಕುಮಾರ್, ಅಂದು ಸಂಸದರಾಗಿದ್ದ ಹೆಚ್.ಡಿ.ದೇವೇಗೌಡ, ಬಿ.ಎಸ್.ಯಡಿಯೂರಪ್ಪ ಎಲ್ಲರ ಒತ್ತಡದಿಂದ ಕೇಂದ್ರ ಸರ್ಕಾರ ರಸ್ತೆ ನಿರ್ಮಾಣಕ್ಕೆ ಮುಂದಾಯಿತು. ಆದರೆ, ಇಂದು ರಸ್ತೆ ಕಾಮಗಾರಿ ಮುಗಿಯುವ ಹಂತಕ್ಕೆ ಬಂದಾಗ ಕ್ರೆಡಿಟ್‌ಗಾಗಿ ಸುಮಲತಾ ಹಾಗೂ ಪ್ರತಾಪ್‌ಸಿಂಹ ಕಿತ್ತಾಡುತ್ತಿದ್ದಾರೆ. ಆದರೆ, ಇದಕ್ಕೆ ಭದ್ರ ಬುನಾದಿ ಹಾಕಿದ್ದೇ ನಾನು ಎಂದು ಪುಟ್ಟರಾಜು ಹೇಳಿದರು.

ಮೈಸೂರು ಮಿತ್ರ ಭಾನುವಾರ 3 ಜುಲೈ 2022

ದುಬಾರೆ ಪ್ರವಾಸಿ ತಾಣಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಭೇಟಿ

ಗಿಡ ನೆಡುವ ಮೂಲಕ ವನಮಹೋತ್ಸವಕ್ಕೆ ಚಾಲನೆ



ಕುಶಾಲನಗರ, ಜು.2– ಕೊಡಗು ಜಿಲ್ಲೆಯ ಪ್ರಮುಖ ಪ್ರವಾಸಿ ತಾಣ ದುಬಾರೆ ಸಾಕಾನೆ ಶಿಬಿರಕ್ಕೆ ಶನಿವಾರ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಭೇಟಿ ನೀಡಿದ್ದರು.

ಸಾಕಾನೆ ಶಿಬಿರದ ಆನೆ ಮಹಲ್ ಬಳಿ ಅರಣ್ಯ ಇಲಾಖೆ ವತಿಯಿಂದ ಏರ್ಪಡಿಸಿದ್ದ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗಿಡವನ್ನು ನೆಟ್ಟು ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ದುಬಾರೆ ಕಾವೇರಿ ನದಿಯನ್ನು ದೋಣಿ ಮೂಲಕ ದಾಟಿ ಸಾಕಾನೆ ಶಿಬಿರಕ್ಕೆ ಬಂದ ರಾಜ್ಯಪಾಲರು ಸಾಕಾನೆಗಳು ಹಾಗೂ ದುಬಾರೆ ಸುಂದರ ಪರಿಸರವನ್ನು ವೀಕ್ಷಿಸಿ ಸಂಭ್ರಮಿಸಿದರು. ಸಾಕಾನೆಗಳ ಜೀವನ ಕ್ರಮ ಹಾಗೂ ದಿನಚರಿಯನ್ನು ರಾಜ್ಯಪಾಲರಿಗೆ ಮಾವುತರು ತಿಳಿಸಿಕೊಟ್ಟರು. ಜೊತೆಗೆ ಸಾಕಾನೆ ತನ್ನ ಸೊಂಡಿಲಿನಿಂದ ತಲೆ ಮುಟ್ಟಿ ಆಶೀರ್ವಾದ ಮಾಡಿತು. ರಾಜ್ಯಪಾಲರು ಆನೆಗಳನ್ನು ಮುಟ್ಟಿ ಅವುಗಳೊಂದಿಗೆ ಫೋಟೋ ತೆಗೆಸಿಕೊಂಡು ಸಂತಸ ಪಟ್ಟರು. ದುಬಾರೆ ಕಾಡಿನಲ್ಲಿರುವ ಆದಿವಾಸಿ–ಗಿರಿಜನರ ಜೀವನ ಕ್ರಮದ ಕುರಿತು ಅಧಿಕಾರಿಗಳಿಂದ ತಿಳಿದುಕೊಂಡರು. ಸಾಕಾನೆಗಳ ಮಾವುತರೊಂದಿಗೆ ಸಮಾಲೋಚನೆ ನಡೆಸಿ ಅವರ ಸಮಸ್ಯೆ ಆಲಿಸಿದರು. ಇದೇ ಸಂದರ್ಭ ಮಾವುತರು ತಮ್ಮ ವೇತನವನ್ನು ಹೆಚ್ಚಳ ಮಾಡುವಂತೆ ಮನವಿ ಸಲ್ಲಿಸಿದರು. ಆನೆ ಮಹಲ್‌ನಲ್ಲಿ ಕೆಲ ಕಾಲ ವಿಶ್ರಾಂತಿ ಪಡೆದು ನಂತರ ನಿರ್ಗಮಿಸಿದರು.

ಸನ್ಮಾನ: ದುಬಾರೆ ಪ್ರವಾಸಿ ತಾಣಕ್ಕೆ ಪ್ರಥಮ ಬಾರಿಗೆ ಆಗಮಿಸಿದ ರಾಜ್ಯಪಾಲರಿಗೆ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ಎಲ್.ವಿಶ್ವ ಶಾಲು ಹೊದಿಸಿ ಹೂ ಮಾಲೆ ಅರ್ಪಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಸತೀಶ್, ಸಿಸಿಎಫ್ ಬಿ.ಎನ್.ಎನ್.ಮೂರ್ತಿ, ಡಿಎಫ್‌ಓ ಪೂವಯ್ಯ, ಕುಶಾಲನಗರ ತಾಲೂಕು ತಹಶೀಲ್ದಾರ್ ಪ್ರಕಾಶ್, ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್, ದುಬಾರೆ ಉಪ ಅರಣ್ಯಾಧಿಕಾರಿ ರಂಜನ್ ಹಾಗೂ ಡಿಆರ್‌ಎಫ್‌ಓ ಗಳಾದ ಅನಿಲ್ ಡಿಸೋಜ, ವಿಲಾಸ್, ಚೇತನ್, ಮಂಜೇಗೌಡ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಲ್ಪನಾ, ಇತರೆ ಅಧಿಕಾರಿಗಳು ಹಾಗೂ ಭದ್ರತಾ ಸಿಬ್ಬಂದಿ ಉಪಸ್ಥಿತರಿದ್ದರು.

ಮೈದುಂಬಿದ ಹಾರಂಗಿಗೆ ಶಾಸಕ ಅಪ್ಪಚ್ಚು ರಂಜನ್ ಬಾಗಿನ

ಜಲಾಶಯದಿಂದ 10,000 ಕ್ಯೂಸೆಕ್ ನೀರು ನದಿಗೆ ಬಿಡುಗಡೆ

ಮಡಿಕೇರಿ, ಜು.2– ಕೊಡಗು ಜಿಲ್ಲೆಯ ಹಾರಂಗಿ ಜಲಾಶಯ ಮೈದುಂಬಿ ಹರಿಯುತ್ತಿದ್ದು, ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಬಾಗಿನ ಸಮರ್ಪಿಸಿದರು.

ಶಾಸಕ ಅಪ್ಪಚ್ಚು ರಂಜನ್ ಅವರು ಹಾರಂಗಿ ಜಲಾಶಯ ಬಳಿ ಇರುವ ಕಾವೇರಿ ಮಾತೆಗೆ ವಿಶೇಷ ಪೂಜೆ ಸಲ್ಲಿಸಿದ ನಂತರ, ಹಾರಂಗಿ ಜಲಾಶಯಕ್ಕೆ ಬಾಗಿನ ಅರ್ಪಿಸಿ, ಬಳಿಕ ಜಲಾಶಯದ ನಾಲ್ಕು ಕ್ರೆಸ್ಟ್ ಗೇಟ್ ಮೂಲಕ ನೀರು ಬಿಡುಗಡೆಗೆ ಚಾಲನೆ ನೀಡಿದರು. ಹಾರಂಗಿ ಜಲಾಶಯ ಭರ್ತಿಯಾಗಿದ್ದು, ಜಲಾಶಯದಿಂದ 10,000 ಕ್ಯೂಸೆಕ್ಸ್ ನೀರು ನದಿಗೆ ಬಿಡಲಾಯಿತು.

ಬಳಿಕ ಮಾತನಾಡಿದ ಶಾಸಕ ಎಂ.ಪಿ. ಅಪ್ಪಚ್ಚುರಂಜನ್ ಅವರು 2018 ಮತ್ತು 2019 ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದಿಂದ ಜಿಲ್ಲೆಯ ಜನರು ತುಂಬಾ ನೊಂದಿದ್ದಾರೆ. ಆ ರೀತಿ ಆಗದೆ, ಮಳೆಯೂ ಬರಲಿ ನಾಡಿನ ಜಲಾಶಯಗಳು ತುಂಬುವಂತಾಗಲಿ, ಕೃಷಿ ಚಟುವಟಿಕೆಗಳು ಕೂಡ ಸಮೃದ್ಧಿಯಾಗಲಿ ಎಂದರು.

ಕಾವೇರಿ ನದಿ ಪಾತ್ರದಲ್ಲಿ ಉತ್ತಮ ಮಳೆಯಾಗಿ ಕರ್ನಾಟಕ, ತಮಿಳುನಾಡು, ಪಾಂಡಿಚೇರಿಗೆ ಕುಡಿಯುವ ನೀರು ಹಾಗೂ ಕೃಷಿ ಚಟುವಟಿಕೆಗೆ ಅನುಕೂಲ ಆಗಲಿ ಎಂದ ಅವರು, ಕಳೆದ ಬಾರಿ ಜುಲೈ 16 ರಂದು ಜಲಾಶಯದಿಂದ ನೀರನ್ನು ನದಿಗೆ ಬಿಡಲಾಗಿತ್ತು ಈ ಬಾರಿ ಜಲಾಶಯ ತುಂಬಲು ಇನ್ನೂ 3 ಅಡಿ ಬಾಕಿ ಇರುವಾಗಲೇ ನದಿಗೆ ಜಲಾಶಯದಿಂದ ನೀರನ್ನು ಹರಿಯ ಬಿಡಲಾಗಿದೆ. ಇದರಿಂದ ಯಾರಿಗೂ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಗಮನ ಹರಿಸಲಾಗಿದೆ ಎಂದರು.

ಕೊಡಗು ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಮುಂಗಾರು ಚುರುಕುಗೊಂಡಿರುವ ಹಿನ್ನೆಲೆ ಜಲಾಶಯ ಭರ್ತಿಯಾಗಿದೆ. ಆ ದಿಸೆಯಲ್ಲಿ ಇಂದು 10,000 ಕ್ಯೂಸೆಕ್ ನೀರನ್ನು ನದಿಗೆ ಹರಿಯ ಬಿಡಲಾಗಿದೆ. ಜೊತೆಗೆ ಮಳೆ ಬೀಳುತ್ತಿರುವುದರಿಂದ ಹೆಚ್ಚಿನ ಒಳ ಹರಿವು ಇದೆ. ಆದ್ದರಿಂದ ಎರಡು ವಾರ ಮುಂಚಿತವಾಗಿ ನದಿಗೆ ನೀರನ್ನು ಹರಿಯ ಬಿಡಲಾಗಿದೆ ಎಂದು ಅವರು ವಿವರಿಸಿದರು.





ವಿಶೇಷ ಪ್ಯಾಕೇಜ್ ಪ್ರಕಟಿಸಲು ಮನವಿ: ಕೊಡಗು ಜಿಲ್ಲೆಯ ಕಾವೇರಿ ನದಿಪಾತ್ರದಿಂದ ಸುಮಾರು 450 ಟಿಎಂಸಿ ನೀರು ಹರಿದು ಹೋಗುತ್ತಿದೆ. ಒಂದು ಟಿಎಂಸಿ ನೀರನ್ನು 25 ಸಾವಿರ ಎಕರೆ ಕೃಷಿ ಚಟುವಟಿಕೆಗೆ ಒದಗಿಸಬಹುದಾಗಿದೆ. ಆ ನಿಟ್ಟಿನಲ್ಲಿ ಕೊಡಗು ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಿಂದಾಗಿ ರಸ್ತೆ, ಸೇತುವೆ, ವಿದ್ಯುತ್ ಕಂಬಗಳು ಸೇರಿದಂತೆ ಅಪಾರ ಪ್ರಮಾಣದಲ್ಲಿ ಹಾನಿಯಾಗುತ್ತವೆ. ಆದ್ದರಿಂದ ಕೊಡಗು ಜಿಲ್ಲೆಗೆ ಸರ್ಕಾರ ವಿಶೇಷ ಪ್ಯಾಕೇಜ್ ಪ್ರಕಟಿಸಬೇಕು ಎಂದು ಇದೇ ಸಂದರ್ಭದಲ್ಲಿ ಅವರು ಮನವಿ ಮಾಡಿದರು.

ಹೂಳು ತೆಗೆಯಲು ಸರ್ಕಾರದಿಂದ 10 ಕೋಟಿ ರೂ. ಬಿಡುಗಡೆಯಾಗಿದ್ದು, ನವೆಂಬರ್ ತಿಂಗಳ ನಂತರ ಕುಶಾಲನಗರದ ಸಾಯಿ, ಕುವೆಂಪು ಹಾಗೂ ಇತರೆ ಬಡಾವಣೆ ಸೇರಿದಂತೆ ಕಾವೇರಿ ನದಿ ಪಾತ್ರದಲ್ಲಿ ಹೂಳು ತೆಗೆಯಲಾಗುವುದು ಎಂದರು.

ಹಾರಂಗಿ ಜಲಾಶಯಕ್ಕೆ ಒಳಹರಿವು, ಜಲಾಶಯದ ನೀರಿನ ಪ್ರಮಾಣ, ಹೊರಹರಿವು ಹೀಗೆ ಪ್ರತಿಯೊಂದು ಮಾಹಿತಿಯನ್ನು ಪ್ರತಿ ನಿತ್ಯ ಎಂಜಿನಿಯರ್ ಅವರಿಂದ ಪಡೆದು, ಯಾವುದೇ ರೀತಿಯ ಸಮಸ್ಯೆಗಳು ಉಂಟಾಗದಂತೆ ಮುನ್ನೆಚ್ಚರ ವಹಿಸಲಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲೆಯ ಚೆಂಬು ಗಡಿ ಭಾಗದಲ್ಲಿ ಆಗಾಗ ಭೂಕಂಪನ ಸಂಭವಿಸುವುದರಿಂದ ಮುನ್ನೆಚ್ಚರ ವಹಿಸಬೇಕಿದೆ. ಹಾರಂಗಿ ಜಲಾಶಯ ಸುಭದ್ರವಾಗಿದೆ. ಯಾವುದೇ ತೊಂದರೆಯಿಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಶಾಸಕರು ಪ್ರತಿಕ್ರಿಯಿಸಿದರು.

ಕುಶಾಲನಗರ ಪಪಂ ಅಧ್ಯಕ್ಷ ಜಯವರ್ಧನ, ಕೂಡುಮಂಗಳೂರು ಗ್ರಾಪಂ ಅಧ್ಯಕ್ಷೆ ಇಂದಿರಾ, ಕುಶಾಲನಗರ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಚರಣ್, ಪ್ರಮುಖರಾದ ಲೋಕೇಶ್ವರಿ ಗೋಪಾಲ್, ಮಂಜುಳಾ, ಹಾರಂಗಿ ಜಲಾಶಯದ ಕಾರ್ಯಪಾಲಕ ಎಂಜಿನಿಯರ್ ಐ.ಕೆ.ಪುಟ್ಟಸ್ವಾಮಿ, ಎಇಇ ಮಹೇಂದ್ರ ಕುಮಾರ್, ಎಇ ಸಿದ್ದರಾಜು, ಕಿರಣ್, ಸತ್ಯ, ಸ್ಥಳೀಯ ಮುಖಂಡರು ಇತರರು ಇದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಪ್ರತಿಭಟನೆ



ಉಪವಿಭಾಗಾಧಿಕಾರಿ ಡಾ.ನಂಜುಂಡೇಗೌಡ ಅವರ ಮೂಲಕ ಸಿಎನ್‌ಸಿ ಪ್ರಮುಖರು ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಮಡಿಕೇರಿ,ಜು.2– ಸಂವಿಧಾನದ 371(ಕೆ) ವಿಧಿಯಡಿ ಕೊಡವ ಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆ ನೀಡಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ನಡೆಸಿತು.


ಕೊಡವರನ್ನು ಬುಡಕಟ್ಟು ಜನಾಂಗವೆಂದು ಅಧಿಕೃತವಾಗಿ ಘೋಷಿಸಿ ಎಸ್‌ಟಿ ಟ್ಯಾಗ್ ನೀಡಬೇಕು, ಕೊಡವ ಭೂ ರಾಜಕೀಯ ಸ್ವಾಯತ್ತತೆ ನೀಡಬೇಕು, ಕೊಡವ ಜನಾಂಗೀಯ ಸಂಸ್ಕಾರಗನ್ ಅನ್ನು ಸಂವಿಧಾನದ 25 ಮತ್ತು 26 ನೇ ವಿಧಿಗಳಲ್ಲಿ ಅಳವಡಿಸಬೇಕು, ಕೊಡವ ಭಾಷೆಯನ್ನು 8ನೇ ಶೆಡ್ಯೂಲ್‌ಗೆ ಸೇರಿಸಬೇಕು ಮತ್ತು ವಿಶಿಷ್ಟವಾದ ಕೊಡವ ಸಂಸ್ಕೃತಿಯನ್ನು ಯುನೆಸ್ಕೋದ ಸಾಂಸ್ಕೃತಿಕ ಪರಂಪರೆಯ ಪಟ್ಟಿಯಲ್ಲಿ ಸೇರಿಸಬೇಕೆಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದರು.

ಕೊಡಗು ಕರ್ನಾಟದೊಂದಿಗೆ ವಿಲೀನವಾದ ನಂತರ ಕೊಡವ ಬುಡಕಟ್ಟು ಜನಾಂಗ ಎಲ್ಲಾ ಅಂಶಗಳಲ್ಲೂ ಮೂಲೆ ಗುಂಪಾಗುತ್ತಿದೆ. ಆಡಳಿತ ವ್ಯವಸ್ಥೆ ಕೊಡಗನ್ನು ಸಂಪನ್ಮೂಲ ಉತ್ಪಾದಿಸುವ ವಸಾಹತು ಎಂದು ಪರಿಗಣಿಸಿದೆ. 1956ರ ಏಕೀಕರಣದ ಸಂದರ್ಭದ ನಿಯಮ ಮತ್ತು ಭರವಸೆಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿದರು.

ಕೊಡವ ಜನಾಂಗ ಇಡೀ ವಿಶ್ವದಲ್ಲಿ ಕೊಡಗಿನಲ್ಲಿ ಮಾತ್ರ ಬೇರೂರಿದೆ. ಕೊಡವರಿಗೆ ಕೊಡಗೇ ಆತ್ಮ ಮತ್ತು ಹೃದಯವಾಗಿದೆ. ಆದ್ದರಿಂದ ಕೊಡವರ ಪರವಾಗಿ ಸಿಎನ್‌ಸಿ ಸಂಘಟನೆ ಕಳೆದ ಅನೇಕ ವರ್ಷಗಳಿಂದ ಪ್ರತಿಪಾದಿಸುತ್ತಾ ಬಂದಿರುವ ಹಕ್ಕುಗಳನ್ನು ಗಂಭೀರವಾಗಿ ಪರಿಗಣಿಸಿ ಇವುಗಳನ್ನು ಈಡೇರಿಸಲು ಸರಕಾರಗಳು ತುರ್ತು ಕ್ರಮ ಕೈಗೊಳ್ಳಬೇಕೆಂದು ನಾಚಪ್ಪ ಒತ್ತಾಯಿಸಿದರು. ಬಳಿಕ ಉಪವಿಭಾಗಾಧಿಕಾರಿ ಡಾ.ನಂಜುಂಡೇಗೌಡ ಅವರ ಮೂಲಕ ಸಿಎನ್‌ಸಿ ಪ್ರಮುಖರು ಸರಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಬೊಟ್ಟಂಗಡ ಸವಿತಾ ಗಿರೀಶ್, ಪುಲ್ಲೇರ ಸ್ವಾತಿ ಕಾಳಪ್ಪ, ಚೋಳಪಂಡ ಜ್ಯೋತಿ ನಾಣಯ್ಯ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಕಲಿಯಂಡ ಪ್ರಕಾಶ್, ಬಾಚರಣಿಯಂಡ ಚಿಪ್ಪಣ್ಣ, ಪುಲ್ಲೇರ ಕಾಳಪ್ಪ, ಅಜ್ಜಿಕುಟೀರ ಲೋಕೇಶ್, ಅರೆಯಡ ಗಿರೀಶ್, ಪಟ್ಟಮಾಡ ಕುಶ, ಚಂಬಂಡ ಜನತ್, ಕಾಟುಮಣಿಯಂಡ ಉಮೇಶ್, ನಂದಿನೆರವಂಡ ವಿಜು, ಮಂದಪಂಡ ಮನೋಜ್, ಕೂಪಾಧೀರ ಸಾಬು, ಪುಟ್ಟಿಚಂಡ ದೇವಯ್ಯ, ಪುದಿಯೊಕ್ಕಡ ಕಾಶಿ, ಮಣವಟ್ಟಿರ ಚಿಣ್ಣಪ್ಪ, ಚೋಳಪಂಡ ನಾಣಯ್ಯ, ನಂದಿನೆರವಂಡ ಅಪ್ಪಯ್ಯ, ಮಂದಪಂಡ ಗಣಪತಿ, ಮೇದೂರ ಕಾಂತಿ, ಕನ್ನಿಕಂಡ ಸ್ವರೂಪ್, ಮಣವಟ್ಟಿರ ನಂದ, ಒಡಿಯಂಡ ದಿನೇಶ್ ಮತ್ತಿತರರು ಪಾಲ್ಗೊಂಡಿದ್ದರು.

ವಿದ್ಯುತ್ ಸ್ಪರ್ಶದಿಂದ ಸಲಗ ಸಾವು




ಗೋಣಿಕೊಪ್ಪ, ಜು.2– ಕುಟ್ಟ– ಬಾಡಗ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶಿಸಿ ಸಲಗವೊಂದು ಮೃತಪಟ್ಟಿದೆ. ಆನೆಗೆ ಸುಮಾರು 15 ವರ್ಷ ವಯಸ್ಸಾಗಿರಬಹುದು ಎಂದು ಅಂದಾಜಿಸಲಾಗಿದೆ. ಕಾಫಿ ಬೆಳೆಗಾರ ಜಯರಾಮ್ ಎಂಬುವವರಿಗೆ ಸೇರಿದ ಕಾಫಿ ತೋಟದಲ್ಲಿ ವಿದ್ಯುತ್ ತಂತಿ ತಗುಲಿ ಆನೆ ಸ್ಥಳದಲ್ಲಿಯೇ ಸಾವಿಗೀಡಾಗಿದೆ ನಾಗರಹೊಳೆ ವನ್ಯಜೀವಿ ಇಲಾಖೆ ಅಧಿಕಾರಿಗಳು ಪರಿ ಶೀಲನೆ ನಡೆಸಿ ತನಿಖೆಕೈಗೊಂಡಿದ್ದಾರೆ.

ನಾಳೆ ನಿವೇಶನ ಹಸ್ತಾಂತರ

ಮಡಿಕೇರಿ, ಜು.2– ವಿರಾಜಪೇಟೆ ಪುರಭೂಮಿ ಮುನ್ಸಿಪಲ್ ಶಾಲಾ ಕಟ್ಟಡವನ್ನು ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನವರಿಗೆ ಹಸ್ತಾಂತರಿಸುವ ಸಲುವಾಗಿ ನಿವೇಶನ ಹಸ್ತಾಂತರ ಕಾರ್ಯಕ್ರಮವನ್ನು ಜು.4 ರಂದು ಮಧ್ಯಾಹ್ನ 2.30 ಗಂಟೆಗೆ ಏರ್ಪಡಿಸಲಾಗಿದೆ.

ರಂಗಶೆಟ್ಟಿ ನಿಧನ



ಸೋಮವಾರಪೇಟೆ, ಜು.2– ಚನ್ನಾಪುರ ಗ್ರಾಮದ ನಿವಾಸಿ ಸಿ.ಕೆ. ರಂಗಶೆಟ್ಟಿ(97) ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಐವರು ಪುತ್ರರು ಹಾಗೂ ಇಬ್ಬರು ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಇವರು ಕಳೆದ 60 ವರ್ಷಗಳ ಕಾಲ ಕುಂಬಾರಿಕೆ ವೃತ್ತಿಯಲ್ಲಿ ತೊಡಗಿದ್ದರು.

ಪೌರಕಾರ್ಮಿಕರ ಕಾಲೋನಿಗಳ ಅಭಿವೃದ್ಧಿಗೆ ಕ್ರಮ

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಭರವಸೆ



ಚಾಮರಾಜನಗರ, ಜು.2–ಜಿಲ್ಲೆಯಲ್ಲಿರುವ ಕೊಳಚೆ ಪ್ರದೇಶಗಳು ಹಾಗೂ ಪೌರಕಾರ್ಮಿಕರ ಕಾಲೋನಿಗಳ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು ಎಂದು ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಭರವಸೆ ನೀಡಿದ್ದಾರೆ.

ನಗರದ ಸತ್ತಿ ರಸ್ತೆಯಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿಂದು ವಸತಿ ಇಲಾಖೆ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕರಿನಂಜನಪುರ ರಸ್ತೆ ಪೌರಕಾರ್ಮಿಕರ ಕಾಲೋನಿಯ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ 21 ಕೊಳಚೆ ಪ್ರದೇಶಗಳಿದ್ದು, 3 ಸರ್ಕಾರಿ ಸ್ಥಳದಲ್ಲಿದೆ. ಸೂರಿಲ್ಲದವರಿಗೆ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದಲ್ಲಿ 24 ಸಾವಿರ ಕುಟುಂಬ ಗುರುತಿಸಿ ಅವರಿಗೆ ಮನೆ ನಿರ್ಮಾಣ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲೆಯ ಉಳಿದ ಕೊಳಚೆ ಪ್ರದೇಶಗಳಲ್ಲಿಯೂ ಮುಂಬರುವ ದಿನಗಳಲ್ಲಿ ಕುಡಿಯುವ ನೀರು, ರಸ್ತೆ, ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗುವುದು. ವಸತಿ ಹಾಗೂ ನಿವೇಶನ ರಹಿತರಿಗೆ ಸೂರು ವ್ಯವಸ್ಥೆ ಮಾಡಲಾಗುವುದು. ರೈತರು, ಜೀತಮುಕ್ತರು ಹಾಗೂ ಇತರರ ಸಂಬಂಧ ಸಭೆ ಕರೆಯಲಾಗುತ್ತಿದೆ. ಪೌರ ಕಾರ್ಮಿಕರ ಸಮಸ್ಯೆಗಳನ್ನು ಸಹ ಚರ್ಚಿಸಲಾಗುವುದು ಎಂದರು.

ಕರಿನಂಜನಪುರ ರಸ್ತೆಯಲ್ಲಿರುವ 88 ಫಲಾನು ಭವಿಗಳಿಗೆ ಇಂದು ಹಕ್ಕು ಪತ್ರ ವಿತರಣೆ ಮಾಡುತ್ತಿದ್ದು, ಮಹಿಳೆಯರ ಹೆಸರಿನಲ್ಲೇ ಹಕ್ಕು ಪತ್ರ ನೀಡಬೇಕು. ಅವರು ಜವಾಬ್ದಾರಿಯಿಂದ ತಮ್ಮ ಸ್ವತ್ತನ್ನು ರಕ್ಷಿಸಿಕೊಳ್ಳುತ್ತಾರೆ. ಇಂದಿಗೂ ಕಡಿಮೆ ಜಾಗದಲ್ಲಿ ಪೌರಕಾರ್ಮಿಕರ ಎರಡು ಮೂರು ಕುಟುಂಬಗಳು ವಾಸ ಮಾಡುತ್ತಿವೆ ಎಂದರೆ ತುಂಬಾ ದುರದೃಷ್ಟಕರ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ನಗರದ ಕರಿನಂಜನಪುರ ರಸ್ತೆ ಪೌರ ಕಾರ್ಮಿಕರ ಕಾಲೋನಿಯ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಲಾಯಿತು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎನ್.ಮಹೇಶ್, ಸಿ.ಎಸ್. ನಿರಂಜನ್‌ಕುಮಾರ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರ ಸಭಾ ಅಧ್ಯಕ್ಷೆ ಆಶಾ ನಟರಾಜು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ನಿರ್ದೇಶಕ ನಾಗರಾಜ ಎಂ.ಬಿರಾದರ್, ನಗರಸಭೆ ಸದಸ್ಯರಾದ ಮಹೇಶ್, ಮನೋಜ್ ಪಟೇಲ್, ಚಂದ್ರು, ನಗರ ಸಭಾ ಆಯುಕ್ತ ಕರಿಬಸವಯ್ಯ ಹಾಗೂ ಇತರರು ಕಾರ್ಯಕ್ರಮದಲ್ಲಿದ್ದರು.

ಧರಣಿ ಕೈಬಿಡಲು ಸಚಿವರು, ಜಿಲ್ಲಾಧಿಕಾರಿ ಮನವಿ

ಚಾಮರಾಜನಗರ: ವಿವಿಧ ಬೇಡಿಕೆಗಳ ಈಡೇರಿಕೆ ಹಾಗೂ ಹಲವು ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸಿ ಜು.4ರಂದು ನಗರದ ಜಿಲ್ಲಾಡಳಿತ ಭವನದಲ್ಲಿ ನಡೆಸಲು ಉದ್ದೇಶಿಸಿರುವ ಧರಣಿಯನ್ನು ರೈತ ಸಂಘಟನೆಗಳ ಮುಖಂಡರು ಕೈಬಿಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾಧ್ಯಮಗಳ ಮೂಲಕ ಮನವಿ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಮನವಿ ಮಾಡಿದ ಸಚಿವರು, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ವಿವಿಧ ಹಂತದ ಅಧಿಕಾರಿಗಳ ಜೊತೆ ಇಂದು ಚರ್ಚೆ ಮಾಡಿದ್ದೇನೆ. ಜು.10 ಹಾಗೂ 11 ರಂದು ನಾನು ಚಾಮರಾಜನಗರದಲ್ಲೇ ಇರುತ್ತೇನೆ. ಜು.11 ರಂದು ರೈತ ಮುಖಂಡರ ಸಭೆ ಕರೆದು ರೈತರ ಸಮಸ್ಯೆ, ಬೇಡಿಕೆಗಳ ಕುರಿತು ಚರ್ಚಿಸಿ ಪರಿಹರಿಸುವ ಕೆಲಸ ಮಾಡುತ್ತೇವೆ. ಹೀಗಾಗಿ ಜು.4ರಂದು ಹಮ್ಮಿಕೊಂಡಿರುವ ಧರಣಿ ಕೈಬಿಡಬೇಕೆಂದು ಕೋರಿದರು.

ಜಿಲ್ಲಾಧಿಕಾರಿಗಳು ಸಹ ರೈತರ ಬೇಡಿಕೆಗಳು ಹಾಗೂ ಸಮಸ್ಯೆಗಳ ಕುರಿತಂತೆ ಸ್ಪಂದಿಸಿ ಭರವಸೆ ನೀಡಿದ್ದು, ಜು.10 ಹಾಗೂ 11 ರಂದು ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಯಲ್ಲಿಯೇ ಇರಲಿದ್ದು, ರೈತರ ಸಮಸ್ಯೆಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಸಚಿವರೊಂದಿಗಿನ ಸಭೆಗೆ ರೈತ ಮುಖಂಡರನ್ನು ಆಹ್ವಾನಿಸಿ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಮನವಿ ಮಾಡಿದರು.

ಪಾಪು–65 ದಲಿತ ಚಳವಳಿ ಪಯಣ ಕಾರ್ಯಕ್ರಮ

ಶೋಷಿತರ ಪರ ಪಾಪು ಹೋರಾಟ ಅನನ್ಯ



ಚಾಮರಾಜನಗರ, ಜು. 2(ಎಸ್‌ಎಸ್)–ಬಡವರು, ಶೋಷಿತರ ಅಭಿವೃದ್ಧಿ ಜೀವನ ಸಾಗಿಸಿದ ಪಾಪು ಅವರ ಹಾಗೂ ಹೋರಾಟ ಅನನ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು. ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ವೆಂಕಟರಮಣಸ್ವಾಮಿ(ಪಾಪು) ಅವರ 65ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಡೆದ ಪಾಪು–65 ದಲಿತ ಚಳವಳಿ ಪಯಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆ ದಲಿತ ಹಾಗೂ ಹಿಂದುಳಿದ ವರ್ಗದವರು ಹೆಚ್ಚು ವಾಸಿಸುವ ಪ್ರದೇಶ. ಅಲ್ಲದೆ ಶೇ.40ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ದಲಿತರು ಹಾಗೂ ಶೋಷಿತರ ಪರವಾಗಿ ಹೋರಾಟ ಆರಂಭಿಸಿದ ಪಾಪು ತಮ್ಮ 65 ವರ್ಷಗಳ ಪಯಣವನ್ನು ಚಳವಳಿಯಲ್ಲೇ ಕಳೆದಿದ್ದಾರೆ. ಅವರ ಸೇವೆಯು ಇತರರಿಗೆ ಮಾದರಿ. ನಾನು ಅವರ ಸ್ನೇಹಿತ ಎಂದು ಹೇಳಿಕೊಳ್ಳಲು ಹೆಮ್ಮೆ ಪಡುವುದಾಗಿ ತಿಳಿಸಿದರು.

ಜೀತ ವಿಮುಕ್ತರಿಗೆ ಇನ್ನು ಸಹ ಜಮೀನು ಹಾಗೂ ಸರ್ಕಾರಿ ಸೌಲಭ್ಯಗಳಿಗೆ ದೊರೆತಿಲ್ಲ. ಆ ಕುಟುಂಬಗಳಿಗೆ ನೆರವು ನೀಡಿ ಎಂದು ತಮ್ಮ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿಯೇ ಮನವಿ ಮಾಡಿಕೊಳ್ಳುತ್ತಿರುವ ಅವರ ಮಾತೃ ಹೃದಯವನ್ನು ನಾನು ಬಲ್ಲೆ. ಅವರ ಆಶಯ ಈಡೇರಿಸಲು ಕ್ರಮ ಕೈಗೊಳ್ಳುತ್ತೇವೆ. ಜು.11ರಂದು ಮತ್ತೆ ಜಿಲ್ಲೆಗೆ ಆಗಮಿಸಿ, ಅಧಿಕಾರಿಗಳೊಂದಿಗೆ ಸಭೆ ನಡೆಸಿ, ನೂರಾರು ಕುಟುಂಬಗಳಿಗೆ ಪಾಪು ಅವರ ಮುಖಾಂತರ ನ್ಯಾಯ ಕಲ್ಪಿಸಲು ಬದ್ಧರಾಗಿದ್ದೇವೆ ಎಂದು ಸೋಮಣ್ಣ ತಿಳಿಸಿದರು. ದಲಿತ ಮುಖಂಡ ವೆಂಕಟರಮಣಸ್ವಾಮಿ (ಪಾಪು) ಪ್ರಸ್ತಾವಿಕ ನುಡಿಗಳನ್ನಾಡಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಮೋಟಮ್ಮ, ಶಾಸಕ ಎನ್.ಮಹೇಶ್, ಕಾಂಪ್ಕೋ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ನಗರಸಭಾ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಮುಖಂಡರಾದ ಕೆಲ್ಲಂಬಳ್ಳಿ ಸೋಮನಾಯಕ ಇತತರಿದ್ದರು.

ಆಮೆಕೆರೆ ಸಂತ್ರಸ್ತ ರೈತರಿಗೆ ಪರಿಹಾರ ಚೆಕ್ ವಿತರಣೆ

ಯಳಂದೂರು, ಜು.2 (ವಿ.ನಾಗರಾಜು)– ಆಮೆಕೆರೆ ವ್ಯಾಪ್ತಿಯ ಭೂಮಿ ಉಳುಮೆ ಹಕ್ಕು ಕಳೆದುಕೊಂಡ ಯಳಂದೂರು ತಾಲೂಕಿನ ಗೌಡಹಳ್ಳಿ ಬಳಿಯ ಈರಣ್ಯಯ್ಯನಕಟ್ಟೆ ಪೋಡಿನ ರೈತರಿಗೆ ಶಾಸಕ ಎನ್.ಮಹೇಶ್ ಪರಿಹಾರದ ಚೆಕ್ ವಿತರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶ ಘೋಷಣೆ ಆದಾಗಿನಿಂದ ಆ ವ್ಯಾಪ್ತಿಯ ಆಮೆಕೆರೆಯಲ್ಲಿ ಹಲವು ದಶಕಗಳ ಹಿಂದಿನಿಂದ ಬೇಸಾಯ ಮಾಡುತ್ತಿದ್ದ ರೈತರ ತಮ್ಮ ಭೂಮಿ ಮೇಲಿನ ಹಕ್ಕು ಕಳೆದುಕೊಳ್ಳುವಂತಾಯಿತು. ಅರಣ್ಯ ಇಲಾಖೆ ಭೂಮಿ ಉಳುಮೆ ಮಾಡಲು ಅನುಮತಿ ನಿರಾಕರಿಸಿತ್ತು. ಇಂತಹ ಸಂತ್ರಸ್ತ ರೈತರಿಗೆ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಮೊದಲಿಗೆ ಎಕರೆಗೆ 3.5 ಲಕ್ಷ ರೂ.ಗಳನ್ನು ನೀಡಲಾಗುತ್ತಿದೆ. ಒಟ್ಟು 100 ಜನರ ರೈತರು ಇಲ್ಲಿ ಭೂಮಿ ಹೊಂದಿದ್ದರು. ಈಗಾಗಲೇ ಅರಣ್ಯ ಇಲಾಖೆಯಿಂದ 1 ಕೋಟಿ ರೂ. ಪರಿಹಾರದ ಮೊತ್ತ ಬಂದಿದ್ದು, ಮೊದಲ ಕಂತಾಗಿ ತಲಾ ಲಕ್ಷ ರೂ. ವಿತರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಂತ್ರಸ್ತರಿಗೆ ಇನ್ನಷ್ಟು ಸವಲತ್ತು ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಉಪವಿಭಾಗಾಧಿಕಾರಿ ಗೀತಾ ಹುಡೇದ್, ತಹಸೀಲ್ದಾರ್ ಆನಂದಪ್ಪ ನಾಯಕ್, ಅರಣ್ಯ ಇಲಾಖೆ ಎಸಿಎಫ್ ಮಹಾದೇವಯ್ಯ ಆರ್‌ಎಫ್‌ಓ ಲೋಕೇಶ್‌ಮೂರ್ತಿ, ಉಪತಹಸೀಲ್ದಾರ್ ಪುಷ್ಪಾವತಿ ಸೇರಿದಂತೆ ಇತರರಿದ್ದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಗುಂಡ್ಲುಪೇಟೆ, ಜು.2– ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಸಾವನ್ನಪ್ಪಿದ ಘಟನೆ ಗುಂಡ್ಲುಪೇಟೆ ಪಟ್ಟಣದ ಕ್ಯಾಲಿಕಟ್ ರಸ್ತೆಯಲ್ಲಿ ಜೂ.30ರಂದು ಸಂಭವಿಸಿದೆ.

ತಮಿಳುನಾಡಿನ ಸತ್ಯಮಂಗಲಂ ನಿವಾಸಿ ಚಿನ್ನಸ್ವಾಮಿ ಗೌಂಡರ್(78) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಗುಂಡ್ಲುಪೇಟೆಯ ಕ್ಯಾಲಿಕಟ್ ಮುಖ್ಯ ರಸ್ತೆಯಲ್ಲಿ ಬೈಕ್‌ನಲ್ಲಿ (ಕೆಎ–10 ವಿ4413) ತೆರಳುತ್ತಿದ್ದಾಗ ಕಾರು (ಕೆಎಲ್–72 ಎ 3321) ಇವರ ಬೈಕ್‌ಗೆ ಜೂ.30ರ ಸಂಜೆ 4 ಗಂಟೆ ಸುಮಾರಿನಲ್ಲಿ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರಿಗೆ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಕರೆದೊಯ್ದಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಕೊಯಮತ್ತೂರಿಗೆ ಕರೆದೊಯ್ಯುವ ಮಾರ್ಗ ಮಧ್ಯೆ ಅಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಮೃತಪಟ್ಟಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜಿಲ್ಲಾ ಕೇಂದ್ರದಲ್ಲಿ ನಾಳೆ ಬೃಹತ್ ಧರಣಿ



ಹನೂರು, ಜು.2(ಸೋಮು)–ರೈತರು ಮತ್ತು ಸಾರ್ವಜನಿಕರ ಕುಂದು–ಕೊರತೆಗಳನ್ನು ಆಲಿಸಿ ಹಾಗೂ ವಿವಿಧ ಬೇಡಿಕೆಗ ಳನ್ನು ಈಡೇರಿಸುವಂತೆ ರೈತ ಸಂಘಟನೆಗಳಿಂದ ಜು.4ರಂದು ಚಾಮರಾಜನರದ ಜಿಲ್ಲಾಡಳಿತ ಭವನ ಆವರಣದಲ್ಲಿ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ತಿಳಿಸಿದರು.

ಪಟ್ಟಣದ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಕರೆದಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಜು.4ರಂದು ಈ ಬೃಹತ್ ಧರಣಿ ಹಿನ್ನೆಲೆಯಲ್ಲಿ ಜಿಲ್ಲೆಯ ನಾಲ್ಕೂ ದಿಕ್ಕುಗಳಿಂದ ರೈತರು ಜಿಲ್ಲಾ ಕೇಂದ್ರಕ್ಕೆ ಆಗಮಿಸಲಿದ್ದು, ಬಾರ್ಕೋಲ್ ಮತ್ತು ಪೊರಕೆ ಮೂಲಕ ಸಂಬಂಧಪಟ್ಟವರನ್ನು ಸ್ವಾಗತಿಸಲಿದ್ದೇವೆ. ರೈತರ ಮೇಲೆ ಕಾಳಜಿ ಇದ್ದರೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ, ಶಾಸಕರು ಈ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಸಮಸ್ಯೆ ಆಲಿಸಬೇಕು ಎಂದರು.

ಕೆರೆಗಳಿಗೆ ನೀರನ್ನು ತುಂಬಿಸುವುದು, ಅರಣ್ಯದಂಚಿನ ಗ್ರಾಮಗಳಿಗೆ ಮೂಲಸೌಕರ್ಯ ಕಲ್ಪಿಸುವುದು, ಜಾಗೇರಿ, ಮಲೆ ಮಹದೇಶ್ವರಬೆಟ್ಟ ರೈತರಿಗೆ ಆರ್‌ಟಿಸಿ ವಿತರಣೆ. ಜಿಪಂ, ಗ್ರಾಪಂಗಳಲ್ಲಿ ನಡೆಯುತ್ತಿರುವ ಅವ್ಯವಹಾರ ತಡೆ, ಸಾರಿಗೆ ಸೌಕರ್ಯ ಸೇರಿದಂತೆ ಇನ್ನಿತರೆ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳು ಜನಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂದು ದೂರಿದರು. ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೆಬ್ಬೂರು ಬಸವಣ್ಣ ಮಾತನಾಡಿದರು. ಈ ಸಂದರ್ಭದಲ್ಲಿ ರೈತ ಮುಖಂಡರುಗಳಾದ ಚಂಗಡಿ ಕರಿಯಪ್ಪ, ಅಮ್ಜದ್ ಖಾನ್, ಶಾಂತಕುಮಾರ್, ಷಣ್ಮುಗಂ, ಗುರುಮಲ್ಲಪ್ಪ, ಶಿವಮಲ್ಲಪ್ಪ, ಶಾಂತಪ್ಪ, ಶಿವಣ್ಣ, ಕುಮಾರ್, ರಾಜಪ್ಪ

ವರ್ಗಾವಣೆಗೊಂಡವರಿಗೆ ಬೀಳ್ಕೊಡುಗೆ



ಬೇಗೂರು, ಜು.2(ಕಿರಣ್)– ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಉಪ ಅಂಚೆಕಚೇರಿಯಲ್ಲಿ ಅಂಚೆ ಸಹಾಯಕರಾಗಿದ್ದ ನಾರಾಯಣಸಿಂಗ್ ಹಾಗೂ ಶಾಖಾ ಕಛೇರಿ ಬಿಪಿಎಂ ಮತ್ತು ಎಬಿಪಿಎಂ ಆಗಿದ್ದ ಶರತ್ ಮತ್ತು ವೆಂಕಟೇಶ್ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಉಪ ಅಂಚೆ ಪಾಲಕರಾದ ಪ್ರೇಮ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಬದಲ್ಲಿ ಬಿಳ್ಕೋಡಲಾಯಿತು. ಕಚೇರಿಗೆ ನೂತನವಾಗಿ ಬಂದ ಸಿಬ್ಬಂದಿ ಮಹದೇವು ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮೀಣ ಅಂಚೆ ನೌಕರರ ಸಂಘದ ಅಧ್ಯಕ್ಷ ಸುಬ್ಬಣ್ಣ, ಅಂಚೆ ಇಲಾಖೆಯ ಸಿಬ್ಬಂದಿ ನಾಗರಾಜು, ಮಹದೇವಪ್ಪ, ಮಂಜುನಾಥ್, ವೃಷಬೇಂದ್ರ, ಗೋವಿಂದನಾಯ್ಕ, ರಂಗನಾಥ್, ಲೋಕೇಶ್, ಮಹಾದೇವಮ್ಮ, ದಾಕ್ಷಾಯಿಣಿ, ಶಿಲ್ಪಾ, ರಾಮು, ಚಂಪನಾ, ಗುರುಸಿದ್ದೇಗೌಡ, ಮಹೇಶ್ ಹಾಜರಿದ್ದರು.

ಕೋಡಿಉಗನೆ ಗ್ರಾಮದಲ್ಲಿ ಕೊಟ್ಟಿಗೆಗೆ ಆಕಸ್ಮಿಕ ಬೆಂಕಿ

35ಕ್ಕೂ ಹೆಚ್ಚು ಕುರಿಗಳ ಸಜೀವ ದಹನ

ಚಾಮರಾಜನಗರ ಜು.2–ಕೊಟ್ಟಿಗೆಯೊಂದಕ್ಕೆ ಶುಕ್ರವಾರ ಮಧ್ಯರಾತ್ರಿ ಆಕಸ್ಮಿಕ ಬೆಂಕಿ ಬಿದ್ದ ಪರಿಣಾಮ 35ಕ್ಕೂ ಹೆಚ್ಚು ಕುರಿಗಳು ಸಜೀವವಾಗಿ ದಹನಗೊಂಡಿದ್ದು, ಪೀಠೋಪಕರಣ, ಕೃಷಿ ಪರಕರಗಳು ಭಸ್ಮವಾಗಿ ಅಪಾರ ಹಾನಿ ಸಂಭವಿಸಿರುವ ಘಟನೆ ತಾಲೂಕಿನ ಬಿಸಲವಾಡಿ ಸಮೀಪದ ಕೋಡಿಉಗನೆ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ವೃದ್ಧೆ ರಂಗಮ್ಮ ಅವರ ಕುರಿದೊಡ್ಡಿಗೆ ಶುಕ್ರವಾರ ರಾತ್ರಿ ಆಕಸ್ಮಿಕವಾಗಿ ಬೆಂಕಿ ತಗುಲಿದೆ. ಪರಿಣಾಮ ಕೊಟ್ಟಿಗೆಯಲ್ಲಿದ್ದ 35ಕ್ಕೂ ಹೆಚ್ಚು ಕುರಿಗಳು, ಎತ್ತಿನ ಗಾಡಿ ಚಕ್ರಗಳು, ನೇಗಿಲು ಸೇರಿದಂತೆ ಇನ್ನಿತರ ವಸ್ತುಗಳು ಸುಟ್ಟು ಕರಕಲಾಗಿವೆ. ಇನ್ನು ಬೆಂಕಿ ಅವಘಡ ಉಂಟಾಗುತ್ತಿದ್ದಂತೆ ಎಚ್ಚೆತ್ತ ಮಹಾದೇವ ಹಾಗೂ ನೆರೆಹೊರೆಯವರು ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ವಿಷಯ ತಿಳಿದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು, ತಹಸೀಲ್ದಾರ್, ಆರ್‌ಐ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪಶುಸಂಗೋಪನಾ ಇಲಾಖೆ ಅಧಿಕಾರಿಗಳ ಜೊತೆ ಗ್ರಾಮಕ್ಕೆ ಆಗಮಿಸಿ, ಸಂತ್ರಸ್ತೆ ರಂಗಮ್ಮ ಅವರಿಗೆ ಸಾಂತ್ವನ ಹೇಳಿ, ವೈಯಕ್ತಿಕ ಪರಿಹಾರ ವಿತರಿಸಿದರು. ಸರ್ಕಾರದಿಂದ ಸಿಗುವ ಸೌಲಭ್ಯ ಕೊಡಿಸುವುದಾಗಿ ಶಾಸಕರು ಭರವಸೆ ನೀಡಿದರು.

ಸಂಬಂಧಪಟ್ಟ ಇಲಾಖಾಧಿಕಾರಿಗಳು ಸೂಕ್ತ ಪರಿಹಾರಕ್ಕೆ ಕ್ರಮ ವಹಿಸುವಂತೆ ಶಾಸಕರು ಆದೇಶಿಸಿದರು. ಜಿಪಂ ಮಾಜಿ ಸದಸ್ಯ ರಮೇಶ್, ಮುಖಂಡ ಸೋಮಣ್ಣ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಪುರುಷೋತ್ತಮ್, ತಹಸೀಲ್ದಾರ್ ಬಸವರಾಜು, ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಶಿವಣ್ಣ, ಡಾ.ನಾಗೇಂದ್ರಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ ಸೇರಿದಂತೆ ಗ್ರಾಮಸ್ಥರಿದ್ದರು.

ಮೈಸೂರು ಮಿತ್ರ ಭಾನುವಾರ 3 ಜುಲೈ 2022

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜು.2–ಮೈಸೂರಿನ ವಿವಿ ಮೊಹಲ್ಲಾ ಚೆಸ್ಕಾಂ ವಿಭಾಗದ ವ್ಯಾಪ್ತಿಯ ದಟ್ಟಗಳ್ಳಿ ಮತ್ತು ಇಲವಾಲ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸದ ಹಿನ್ನೆಲೆ ಜು.4ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ. ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಏರಿಯಾ, ಕದಂಬ ಬೇಕರಿ ಏರಿಯಾ, ಮುಖ್ಯ ಇಂಜಿನಿಯರ್ ಕಛೇರಿ, ದಟ್ಟಗಳ್ಳಿ ಬಿ–ಬ್ಲಾಕ್, ಮುಡಾ ಎಂಪ್ಲಾಯೀಸ್ ಲೇಔಟ್, ವಾಸು ಲೇಔಟ್, ಕನಕದಾಸ ನಗರ, ಆರ್.ಟಿ.ನಗರ, ಲಿಂಗಾಬುದಿ ಪಾಳ್ಯ, ಯೂನಿವರ್ಸಿಟಿ ಲೇಔಟ್, ವಾಸು ಲೇಔಟ್, ಕೆ–ಬ್ಲಾಕ್ ಆರ್.ಕೆ.ನಗರ, ಮೂಗನಹುಂಡಿ, ಅರ್ಗಡಹಳ್ಳಿ, ದೇವಗಳ್ಳಿ, ಬಲ್ಲಳ್ಳಿ, ಹನಗಳ್ಳಿ, ತಿಬ್ಬಯ್ಯನ ಹುಂಡಿ, ಜರಿಹುಂಡಿ, ಇಲವಾಲ, ಹಳೇ ಕಾಮನಕೊಪ್ಪಲು, ಮೈದನಹಳ್ಳಿ, ಮೇಗಳಾಪುರ, ಭದ್ರೇಗೌಡನ ಕೊಪ್ಪಲು, ಚಿಕ್ಕೇಗೌಡನಕೊಪ್ಪಲು, ಹೊಸಕೋಟೆ, ಸರಕಟ್ಟೆ, ಯಾಚೇಗೌಡನಹಳ್ಳಿ, ದಡದಹಳ್ಳಿ, ರಾಮೇನಹಳ್ಳಿ, ಎಡಹಳ್ಳಿ, ಕಲ್ಲೂರು, ನಾಗನಹಳ್ಳಿ, ಗುಂಗ್ರಾಲ್ ಛತ್ರ, ಛತ್ರದ ಕೊಪ್ಪಲು, ವೀರಪ್ಪನಕೊಪ್ಪಲು ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಒಂದನೇ ಪುಟದಿಂದ

ಆದೇಶಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ ಆಗ್ರಹ

ಸರ್ಕಾರ ಬರವಣಿಗೆಯಲ್ಲಿ ಭರವಸೆ ನೀಡಿದೆ. ಆದರೆ ಅಧಿಕೃತ ಆದೇಶ ಹೊರಡಿಸಿಲ್ಲ. ಈ ರೀತಿ ಮೋಸ ಮಾಡದೆ ಕೂಡಲೇ ಆದೇಶ ಹೊರಡಿಸುವಂತೆ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ಒತ್ತಾಯಿಸುವುದಾಗಿ ತಿಳಿಸಿದರು. ಪೌರಕಾರ್ಮಿಕರ ಸೇವೆ ಕಾಯಂ, ಪ್ರತಿ ತಿಂಗಳು ವೇತನ ಪಾವತಿ ಕುರಿತು ಸರ್ಕಾರ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಬರವಣಿಗೆಯಲ್ಲಿ ನೀಡಿರುವ ಭರವಸೆ ಕಣ್ಣೊರೆಸುವ ತಂತ್ರವಾಗಿದೆ. ಸರ್ಕಾರದ ಈ ಭರವಸೆಯನ್ನು ನಂಬಬಾರದು. ಚಳವಳಿಯನ್ನು ವಾಪಸ್ ಪಡೆಯಲಿ ಎಂಬ ಕಾರಣಕ್ಕೆ ಸರ್ಕಾರ ಈ ನಾಟಕವಾಡಿದೆ ಎಂದು ಹೇಳಿದರು.

ಮುಂದೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ಹೊರ ಗುತ್ತಿಗೆ, ಗುತ್ತಿಗೆ ಸೇರಿದಂತೆ ಎಲ್ಲ ಪೌರಕಾರ್ಮಿಕರ ಸೇವೆಯನ್ನು ಕಾಯಂ ಮಾಡಲಾಗುವುದು. ಪೌರಕಾರ್ಮಿಕರ ಹಿತ ಕಾಯಲು ನಮ್ಮ ಪಕ್ಷ ಬದ್ಧವಾಗಿದೆ ಎಂದು ತಿಳಿಸಿದರು.

ತಳ ಸಮುದಾಯದ ಪೌರಕಾರ್ಮಿಕರ ಜೀವನ ಕಷ್ಟಕರ. ಜೀವದ ಹಂಗು ತೊರೆದು, ಆರೋಗ್ಯವನ್ನೂ ಲೆಕ್ಕಿಸದೆ ಕೆಲಸ ಮಾಡುವ ಅವರ ಹಿತ ಕಾಯುವುದು ಸರ್ಕಾರದ ಜವಾಬ್ದಾರಿ. ನಮ್ಮ ಬೆಂಬಲ ಸದಾ ನಿಮಗೆ ಇರುತ್ತದೆ ಎಂದರು.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಭಾಗಿ

ಎನ್ನಲಾಗಿದೆ. ವಿದೇಶ ಪ್ರವಾಸದಲ್ಲಿರುವ ಯಡಿಯೂರಪ್ಪನವರನ್ನು ಸಂಪರ್ಕಿಸಿ, ಈ ಆಮಂತ್ರಣ ನೀಡಿದ್ದಾರೆ. ಸಿದ್ದರಾಮಯ್ಯ ಅವರ ಈ ಆಹ್ವಾನಕ್ಕೆ ಮನ್ನಣೆ ನೀಡಿರುವ ಯಡಿಯೂರಪ್ಪ ಕಾರ್ಯಕ್ರಮದಲ್ಲಿ ಭಾಗಿಯಾಗುವುದಾಗಿ ಹೇಳಿದ್ದಾರೆ ಎನ್ನಲಾಗಿದೆ.

ಇದು ರಾಜ್ಯ ಬಿಜೆಪಿ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗುವುದಲ್ಲದೆ, ಹುಟ್ಟುಹಬ್ಬದ ನೆಪದಲ್ಲಿ ಸಿದ್ದರಾಮಯ್ಯ ರಾಜಕೀಯ ಸಮಾವೇಶ ಮಾಡುತ್ತಿದ್ದಾರೆ. ಅದರಲ್ಲಿ ಯಡಿಯೂರಪ್ಪ ಭಾಗವಹಿಸುವುದು ಎಷ್ಟು ಸಮಂಜಸ.

ಮುಂಬರುವ ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ತಮ್ಮ ಕುರುಬ ಸಮುದಾಯವನ್ನು ಒಗ್ಗಟ್ಟು ಮಾಡಲು ಸಿದ್ದರಾಮಯ್ಯ ಈ ಸಮಾವೇಶ ನಡೆಸುತ್ತಿದ್ದಾರೆ. ಇದರಲ್ಲಿ ಯಡಿಯೂರಪ್ಪ ಅವರು ಭಾಗಿಯಾಗುವುದು ಸರಿಯೇ ಎಂಬ ಪ್ರಶ್ನೆ ಎದ್ದಿದೆ. ಯಡಿಯೂರಪ್ಪನವರ ಅರಮನೆ ಆವರಣದಲ್ಲಿ ತಮ್ಮ 75ನೇ ವರ್ಷದ ಹುಟ್ಟುಹಬ್ಬವನ್ನು ಆಚರಣೆ ಮಾಡಿಕೊಂಡಾಗ ಸಿದ್ದರಾಮಯ್ಯ ಭಾಗಿಯಾಗಿದ್ದರು. ಆದರೆ ಅಂದಿನ ಸ್ಥಿತಿಯೇ ಬೇರೆ, ಇಂದಿನ ಸ್ಥಿತಿಯೇ ಬೇರೆ ಎಂದು ಬಿಜೆಪಿ ವಾದಿಸುತ್ತಿದ್ದಾರೆ.

ಈ ಮಧ್ಯೆ ಕಾಂಗ್ರೆಸ್‌ನಲ್ಲೂ ಅಪಸ್ವರ ಕೇಳಿಬಂದಿದ್ದು, ಇದು ಪಕ್ಷದ ವೇದಿಕೆಯಲ್ಲೇ ನಡೆಯಬೇಕು. ವ್ಯಕ್ತಿಗತವಾಗಿ ನಡೆಸುವುದು ಸರಿಯಲ್ಲ ಎಂಬ ಮಾತು ಕೇಳಿ ಬರುತ್ತಿದೆ. ಸಮಾವೇಶಕ್ಕೆ ರಾಹುಲ್‌ಗಾಂಧಿ ಅವರು ಭಾಗವಹಿಸುವ ಸಾಧ್ಯತೆ ಇರುವುದರಿಂದ ಇದನ್ನು ಕೆಲವು ಸಂಘಟಕರು ಮಾಡುವುದು ಸರಿಯಲ್ಲ. ತಮ್ಮ ವೈಯಕ್ತಿಕ ಪ್ರತಿಷ್ಠೆಗಾಗಿ ಪಕ್ಷವನ್ನು ದುರುಪಯೋಗ ಮಾಡುವುದು ಎಷ್ಟು ಮಟ್ಟಿಗೆ ಸರಿ ಎಂಬ ಮಾತು ಕೇಳಿ ಬಂದಿದೆ.

ಚುನಾವಣಾ ಹೊಸ್ತಿಲಿನಲ್ಲಿ ಯಡಿಯೂರಪ್ಪ–ಸಿದ್ದರಾಮಯ್ಯ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರೆ, ಅದರಿಂದ ಮುಂದಿನ ದಿನಗಳಲ್ಲಿ ರಾಜಕೀಯ ದಿಕ್ಸೂಚಿಯೇ ಬದಲಾಗಲಿದೆ. ಇದಕ್ಕೆ ಅವಕಾಶ ನೀಡಬಾರದು ಎಂದು ಬಿಜೆಪಿ ಪಟ್ಟು ಹಿಡಿದಿದೆ.

ವಿದೇಶಿ ಪ್ರವಾಸದಲ್ಲಿರುವ ಯಡಿಯೂರಪ್ಪ ಜುಲೈ 7 ರಂದು ನಗರಕ್ಕೆ ಹಿಂತಿರುಗಲಿದ್ದು, ಅನಂತರ ಇದಕ್ಕೆ ಒಂದು ಸ್ಪಷ್ಟ ಚಿತ್ರಣ ದೊರೆಯಲಿದೆ.

ಹುಲಿ ದಾಳಿಯಿಂದ ಇಬ್ಬರಿಗೆ ತೀವ್ರ ಗಾಯ

ಗೋಪಾಲಪುರದ ಮತ್ತೋರ್ವ ನಿವಾಸಿ ಶೇಖರ್ ಮೇಲೂ ಹುಲಿ ದಾಳಿ ನಡೆಸಿದೆ. ಪರಿಣಾಮ ಶೇಖರ್‌ಗೆ ಬೆನ್ನು–ಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ.

ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಗಾಯಾಳುಗಳನ್ನು ಪಟ್ಟಣದ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಿದರು. ಸ್ಥಳದಲ್ಲಿ ಗೋಪಾಲಪುರ ಹಾಗೂ ಸುತ್ತಲ ಗ್ರಾಮಗಳ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಹುಲಿ ಅರಣ್ಯದತ್ತ ತೆರಳಲು ಸಾಧ್ಯವಾಗದೆ ಬಾಳೆಯ ತೋಟದಲ್ಲಿಯೇ ಅಡಗಿಕೊಂಡಿದೆ. ಪೊಲೀಸ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಸಹ ಜನರನ್ನು ನಿಯಂತ್ರಿಸಲು ಹರಸಾಹಸಪಡುವಂತಾಯಿತು.

ಹಾಡಹಗಲೇ ಹುಲಿ ದಾಳಿ ನಡೆಸಿದ್ದು, ಈ ಭಾಗದ ರೈತರಲ್ಲಿ ಭೀತಿ ಉಂಟು ಮಾಡಿದೆ. ಕೂಡಲೇ ಹುಲಿಯನ್ನು ಸೆರೆ ಹಿಡಿಯಬೇಕು ಎಂದು ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ರೈತರು ಒತ್ತಾಯಿಸಿದರು. ಸಂಜೆಯ ನಂತರ ಹುಲಿ ಕಾಡಿಗೆ ತೆರಳಲಿದೆ. ಅಲ್ಲಿಯವರೆಗೆ ನಿಗಾ ವಹಿಸಲಾಗುವುದು. ಹುಲಿ ಕಾಡಿಗೆ ತೆರಳದಿದ್ದರೆ ಸೆರೆಗೆ ಕಾರ್ಯಾಚರಣೆ ಕೈಗೊಳ್ಳಲಾಗುವುದು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಮತ್ತೇ ಮತ್ತೆ ನಡುಗುತ್ತಿದೆ ಕೊಡಗು

ದೊಡ್ಡಕುಮೇರಿ ಗ್ರಾಮದ ಪಶ್ಚಿಮಕ್ಕೆ 1.3 ಕಿ.ಮೀ ದೂರದಲ್ಲಿ ಭೂ ತಳದ 10 ಕಿ.ಮೀ ಆಳದಲ್ಲಿ ಭೂ ಕಂಪನ ಕೇಂದ್ರ ಬಿಂದು ಕಂಡು ಬಂದಿದೆ. ಮಡಿಕೇರಿ ತಾಲೂಕಿನ ಪೆರಾಜೆ ಗ್ರಾಮದಿಂದ 2.5 ಕಿ.ಮೀ, ಎಂ. ಚೆಂಬು ಗ್ರಾಮದಿಂದ 4.7 ಕಿ.ಮೀ ಹಾಗೂ ಕರಿಕೆ ಗ್ರಾಮದಿಂದ 7.7 ಕಿ.ಮೀ ವ್ಯಾಪ್ತಿಯಲ್ಲಿ ಲಘು ಭೂ ಕಂಪನವಾಗಿದೆ. ಭೂಮಿ ಒಳಗಿಂದ ಭಾರೀ ಶಬ್ದ ಸಹಿತ ಭೂಮಿ ಕಂಪಿಸಿದ್ದು, ಗಡಿ ಭಾಗದ ಜನರು ಹೌಹಾರಿದ್ದಾರೆ. ಶನಿವಾರ ರಾತ್ರಿ 8.28 ರಲ್ಲಿ ಚೆಂಬು, ಪೆರಾಜೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೊನಾಡ್ಕ ಗ್ರಾಮದಲ್ಲಿ ಮತ್ತೆ ಭೂಮಿ ಕಂಪಿಸಿದ್ದು, ಇದು ಚೆಂಬು ಗ್ರಾಮದಲ್ಲಿ ಒಂದೇ ದಿನದಲ್ಲಿ ಮೂರು ಬಾರಿ ಭೂಮಿ ಕಂಪಿಸಿದಂತಾಗಿದೆ. ಇದರಿಂದ ನಿವಾಸಿಗಳು ಭಯದಲ್ಲೇ ವಾಸಿಸುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಈ ಗ್ರಾಮಗಳಲ್ಲಿ ಈಗಾಗಲೇ 6 ಬಾರಿ ಸರಣಿ ಭೂ ಕಂಪನ ಘಟಿಸಿದ್ದು, ಇದೀಗ 7ನೇ ಬಾರಿಗೆ ಭೂಮಿ ನಡುಗಿದೆ. ಚೆಂಬು ಗ್ರಾಮದಲ್ಲಿ ಕಳೆದ ಕೆಲ ದಿನಗಳಿಂದ ಭೂಮಿ ಕಂಪಿಸುತ್ತಿದ್ದು, ಮನೆಯೊಂದರ ಬಾವಿಯಲ್ಲಿ ಭೂ ಕುಸಿತವಾಗಿರುವ ಬಗ್ಗೆಯೂ ವರದಿಯಾಗಿದೆ. ಕೊಡಗಿನ ಸಂಪಾಜೆ, ಚೆಂಬು, ತೊಡಿಕಾನ, ಪೆರಾಜೆ, ಅರೆಕಲ್ಲು, ಕುಂಟಿಕಾನ, ಕಲ್ಲಳ್ಳ ಸುಳ್ಯದ ಉಬರಡ್ಕ, ಎಲಿಮಲೆ, ಗುತ್ತಿಗಾರು ಪರಿಸರಗಳಲ್ಲೂ ಈ ಕಂಪನದ ಅನುಭವವಾಗಿರುವುದಾಗಿ ವರದಿಯಾಗಿದೆ. ಈ ಭೂಕಂಪನವನ್ನು ವೈಜ್ಞಾನಿಕವಾಗಿ ಪರಿಶೀಲಿಸಿರುವ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಸುಮಾರು 30 ಕಿಮೀ ಪ್ರದೇಶದವರೆಗೂ ಅನುಭವವಾಗುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದೆ.

ಕೊಡಗು ಜಿಲ್ಲೆಯಲ್ಲಿ ಭಾರೀ ಮಳೆ

ಮಂಗಳೂರು ರಾಷ್ಟ್ರೀಯ ಹೆದ್ದಾರಿ 275ರ 2ನೇ ಮೊಣ್ಣಂಗೇರಿ ಬಳಿ ಲಘು ಭೂ ಕುಸಿತವಾಗಿದೆ. ಜೊತೆಗೆ ಮರವೂ ರಸ್ತೆಗೆ ಅಡ್ಡಲಾಗಿ ಬಿದ್ದಿದೆ. ಅರಣ್ಯ ಇಲಾಖೆ ಮರ ತೆರವು ಗೊಳಿಸಿದ್ದು, ವಾಹನ ಸಂಚಾರ ಯಥಾ ಸ್ಥಿತಿಯಲ್ಲಿದೆ. ಮಡಿಕೇರಿ–ಭಾಗಮಂಡಲ ರಸ್ತೆಯ ಬೆಟ್ಟಗೇರಿ ಬಳಿ ಮರ ಉರುಳಿ ರಸ್ತೆಗೆ ಬಿದ್ದ ಪರಿಣಾಮ ಕೆಲಕಾಲ ರಸ್ತೆ ಸಂಚಾರ ಬಂದ್ ಆಗಿತ್ತು. ಅರಣ್ಯ ಇಲಾಖೆ ಸಿಬ್ಬಂದಿಗಳು ಮರ ತೆರವು ಗೊಳಿಸಿದ ಬಳಿಕ ರಸ್ತೆ ಸಂಚಾರ ಮರು ಸುಗಮವಾಗಿದೆ. ಇನ್ನು ಭಾಗಮಂಡಲ ಕರಿಕೆ ರಸ್ತೆಯಲ್ಲೂ ಲಘು ಭೂ ಕುಸಿತವಾಗಿದೆ. ಜೆಸಿಬಿ ಸಹಾಯದಿಂದ ಮಣ್ಣನ್ನು ತೆರವುಗೊಳಿಸಿ ರಸ್ತೆ ಸಂಚಾರವನ್ನು ಸುಗಮಗೊಳಿಸಲಾಗಿದೆ.

ಗಾಳಿಬೀಡು, ವಣಚಲು, ಕೋಟೆ ಬೆಟ್ಟ, ಮುಕ್ಕೋಡ್ಲು ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಮುಕ್ಕೋಡ್ಲು ಗ್ರಾಮದ ಸಂಪರ್ಕ ಸೇತುವೆ ಮೇಲೆ ನದಿ ನೀರು ಹರಿಯುತ್ತಿದೆ. ಮಳೆ ನೀರಿನಲ್ಲಿ ಬೃಹತ್ ಮರದ ದಿಮ್ಮಿಗಳು ಕೊಚ್ಚಿಕೊಂಡು ಬರುತ್ತಿದ್ದು, ಸೇತುವೆಯ ಕಂಬಗಳಿಗೆ ಹಾನಿಪಡಿಸುವ ಸಾಧ್ಯತೆ ಹೆಚ್ಚಿದೆ. ಹಟ್ಟಿಹೊಳೆ ಹಾಗೂ ಮಾದಾಪುರ ಹೊಳೆಯಲ್ಲಿ ನದಿ ನೀರಿನ ಮಟ್ಟ ಏರಿಕೆಯಾಗಿದ್ದು, ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದೆ.

ಮಳೆ ಬಿರುಸು ಪಡೆಯುತ್ತಲೇ ಕೊಡಗು–ದಕ್ಷಿಣ ಕನ್ನಡ ಗಡಿ ಗ್ರಾಮಗಳು ತತ್ತರಿಸಿವೆ. ಒಂದೆಡೆ ಭೂಕಂಪನ, ಭೂಕುಸಿತವಾದರೆ ಮತ್ತೊಂದೆಡೆ ಪ್ರವಾಹದ ಪರಿಸ್ಥಿತಿ ನಿರ್ಮಾಣವಾಗಿದೆ. ಗಡಿ ಗ್ರಾಮ ಗೂನಡ್ಕದಲ್ಲಿ ಪಯಸ್ವಿನಿ ನದಿ ಉಕ್ಕಿ ಹರಿಯುತ್ತಿರುವ ಪರಿಣಾಮ ಮನೆಯೊಂದು ಸಂಪೂರ್ಣ ಜಲಾವೃತವಾಗಿದೆ. ಮನೆಯ ಒಳಗೆ ನೀರು ನುಗ್ಗಿದ್ದು, ಗೃಹ ಬಳಕೆ ವಸ್ತುಗಳಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ.

ಕೆ.ಜಿ. ಬೋಪಯ್ಯ ಭೇಟಿ: ವಿರಾಜಪೇಟೆ ಕ್ಷೇತ್ರ ಶಾಸಕ ಕೆ.ಜಿ. ಬೋಪಯ್ಯ ಕರಿಕೆ, ಚೆಂಬು, ಪೆರಾಜೆ ಮತ್ತಿತರ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಭೂ ಕಂಪನ, ಭೂ ಕುಸಿತದಿಂದ ಕೆಲವು ಮನೆಗಳಿಗೆ ಹಾನಿಯಾಗಿದ್ದು, ಮನೆ ಮಂದಿ ಆತಂಕ ತೋಡಿಕೊಂಡರು. ಈ ವೇಳೆ ಸಾಂತ್ವಾನ ಹೇಳಿದ ಬೋಪಯ್ಯ, ಧೃತಿಗೆಡದಂತೆ ಸಲಹೆ ನೀಡಿದರು. ಮಳೆಗಾಲ ಆಗಿರುವ ಕಾರಣ ಜಾಗೃತಿ ವಹಿಸುವಂತೆ ಕಿವಿ ಮಾತು ಹೇಳಿದರು. ಯಾವುದೇ ರೀತಿಯ ಶಬ್ದ ಬಂದರೂ ತಕ್ಷಣವೇ ಮನೆಗಳಿಂದ ಹೊರ ಬರುವಂತೆ ಸಲಹೆ ನೀಡಿದ ಬೋಪಯ್ಯ, ಭೂ ಕಂಪನದ ತೀವ್ರತೆ 3ಕ್ಕಿಂತ ಕಡಿಮೆ ಇರುವ ಹಿನ್ನೆಲೆಯಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಚೆಂಬು ಗ್ರಾಮಸ್ಥರಿಗೆ ಶಾಸಕ ಬೋಪಯ್ಯ ಸಲಹೆ ನೀಡಿದರು.

ಕನ್ಹಯ್ಯ ಹಂತಕರ ಬಹಿರಂಗವಾಗಿ ಗಲ್ಲಿಗೇರಿಸಲು ಆಗ್ರಹ

ಮೈಸೂರಲ್ಲಿ ಹಿಂದೂಪರ ಸಂಘಟನೆಗಳ ಪ್ರತಿಭಟನೆ

ಮೈಸೂರು,ಜು.2(ಎಂಟಿವೈ)– ರಾಜಸ್ತಾನದ ಉದಯಪುರದಲ್ಲಿ ನಡೆದ ಟೈಲರ್ ಕನ್ಹಯ್ಯಾ ಲಾಲ್ ಹತ್ಯೆಯ ಆರೋಪಿಗಳನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸುವಂತೆ ಆಗ್ರಹಿಸಿ ಮೈಸೂರಲ್ಲಿ ಹಿಂದೂಪರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಶನಿವಾರ ಬೆಳಗ್ಗೆ ಆರಂಭವಾದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು. ಸಂತೇಪೇಟೆ, ವಿನೋಬಾ ರಸ್ತೆ ಸೇರಿದಂತೆ ಮೈಸೂರಿನ ವಿವಿಧೆಡೆ ವಿವಿಧ ವಹಿವಾಟು ನಡೆಸುವ ರಾಜಸ್ತಾನ ಹಾಗೂ ಗುಜರಾತ್ ಮೂಲದ ಮಾರ್ವಾಡಿ ಸಮುದಾಯದವರು ವಹಿವಾಟು ಬಂದ್ ಮಾಡಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಹಾತ್ಮಗಾಂಧಿ ವೃತ್ತದಿಂದ ಚಿಕ್ಕಗಡಿಯಾರ ವೃತ್ತ, ವಿನೋಬಾ ರಸ್ತೆ, ದೇವರಾಜ ಅರಸು ರಸ್ತೆಯ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿದ ಪ್ರತಿಭಟನಾಕಾರರು ಅಲ್ಲಿ ಧರಣಿ ನಡೆಸಿ, ಟೈಲರ್ ಕನ್ಹಯ್ಯಾ ಲಾಲ್ ಹತ್ಯೆ ಮಾಡಿದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು. ಇಂತಹ ದುಷ್ಕೃತ್ಯಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಆರೋಪಿಗಳನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸಬೇಕು. ಹಿಂದೂ ಸಮುದಾಯದವರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ದೇಶದಲ್ಲಿ ಜಿಹಾದಿಗಳ ಅಟ್ಟಹಾಸ ಮಿತಿ ಮೀರುತ್ತಿದೆ. ದೇಶದ ಭದ್ರತೆಗೆ ಜಿಹಾದಿಗಳಿಂದಲೇ ಆತಂಕ ಉಂಟಾಗುತ್ತಿದೆ. ಕೇಂದ್ರ ಸರ್ಕಾರ ಇವರ ಮಟ್ಟಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ರಾಜಸ್ತಾನ ಸರ್ಕಾರದ ವೈಫಲ್ಯದಿಂದ ಕನ್ಹಯ್ಯಾ ಲಾಲ್ ಹತ್ಯೆಯಾಗಿದೆ. ಅಲ್ಲಿನ ಸರ್ಕಾರ ಸೂಕ್ತ ತನಿಖೆ ಮಾಡುವ ವಿಶ್ವಾಸವಿಲ್ಲ. ಕೇಂದ್ರ ಸರ್ಕಾರದ ತನಿಖಾ ದಳದಿಂದ ತನಿಖೆ ನಡೆಸಬೇಕು. ಈ ಹತ್ಯೆಯ ಸಂಚನ್ನು ಬಯಲಿಗೆಳೆಯಬೇಕು. ಇದರ ಹಿಂದೆ ಯಾರದ್ದೇ ಕೈವಾಡವಿದ್ದರೂ ಬಹಿರಂಗಪಡಿಸಿ, ಅವರಿಗೂ ಶಿಕ್ಷೆ ನೀಡಬೇಕು. ಕನ್ಹಯ್ಯಾ ಲಾಲ್ ಪಾರ್ಥಿವ ಶರೀರದ ಅಂತಿಮ ಯಾತ್ರೆಯ ಸಂದರ್ಭದಲ್ಲಿ ಕಲ್ಲುತೂರಾಟ ನಡೆಸಿರುವವರ ಮೇಲೂ ಕಠಿಣ ಕ್ರಮ ಕೈಗೊಳ್ಳಬೇಕು. ಧಾರ್ಮಿಕ ಮೆರವಣಿಗೆ ಮೇಲೆ ಕಲ್ಲು ತೂರಾಟ ಪ್ರಕರಣಗಳಿಗೆ ಅಂತ್ಯ ಹಾಡಬೇಕಾಗಿದೆ. ದೊಂಬಿ ನಡೆಸಿ ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿ ಮಾಡುವ, ಕಾನೂನು ಸುವ್ಯವಸ್ಥೆ ಕಾಪಾಡುವ ಕೇಂದ್ರಗಳ ಮೇಲೆ ದಾಳಿ ಮಾಡಿ ದಾಖಲೆ ನಾಶ ಪಡಿಸುವ ಕಿಡಿಗೇಡಿಗಳು ಮತ್ತು ದೇಶದ್ರೋಹಿಗಳಿಗೆ ಉಗ್ರ ಶಿಕ್ಷೆ ನೀಡುವ ಕಾನೂನು ಜಾರಿಗೊಳಿಸುವಂತೆ ಒತ್ತಾಯಿಸಿದರು.

ಕೋಮುಗಲಭೆಗಳಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಗಳು, ಅವಲಂಬಿತರಿಗೆ ಪರಿಹಾರ ಅಥವಾ ಸರ್ಕಾರಿ ಕೆಲಸ ನೀಡುವುದು ಮುಖ್ಯವಲ್ಲ. ಅದರ ಜೊತೆಗೆ ಈ ರೀತಿಯ ಕೋಮು ಸಂಘರ್ಷಗಳಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಜಾರಿಗೆ ತರಬೇಕು. ಇಂತಹ ಸಂದರ್ಭಗಳನ್ನು ದುರುಪಯೋಗಪಡಿಸಿಕೊಂಡು ಹತ್ಯೆ ಮಾಡುವವರನ್ನು ಗಲ್ಲಿಗೇರಿಸಬೇಕು. ಪ್ರಸ್ತುತ ಕಾನೂನಿನಲ್ಲಿರುವ ಹಲವು ತೊಡಕುಗಳನ್ನು ಬಳಸಿಕೊಂಡು ಭೀಕರ ಕೃತ್ಯ ಎಸಗಿದವರು ಸಾಕ್ಷಿಗಳು ಇದ್ದಾಗಿಯೂ ಜಾಮೀನು ಪಡೆದು ಹೊರ ಬರುತ್ತಿದ್ದಾರೆ. ಬಹುತೇಕ ಅಪರಾಧಗಳಲ್ಲಿ ನ್ಯಾಯ ವಿಳಂಬವಾಗುತ್ತಿದೆ. ಇದು ದೇಶದ ಕಾನೂನನ್ನು ಅಣಕಿಸುವಂತಿದೆ. ಆದ್ದರಿಂದ ಅಗತ್ಯ ಕಾನೂನಿಗೆ ತಿದ್ದುಪಡಿ ತಂದು ಕಠಿಣಗೊಳಿಸುವಂತೆ ಮನವಿ ಮಾಡಿದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಎಡಿಸಿಗೆ ಮನವಿ

ಪ್ರತಿಭಟನೆ ನಡೆಸಿದ ಬಳಿಕ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥ್‌ಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನಾನಿರತರ ಬಳಿ ಬಂದು ಎಡಿಸಿ ಮನವಿ ಸ್ವೀಕರಿಸಿದರಲ್ಲದೆ, ಸೂಕ್ತ ಕ್ರಮಕ್ಕೆ ಸರ್ಕಾರಕ್ಕೆ ರವಾನಿಸುವುದಾಗಿ ಭರವಸೆ ನೀಡಿದರು.

ತುಷ್ಟೀಕರಣವೇ ಹತ್ಯೆಗೆ ಕಾರಣ

ರಾಜಸ್ತಾನ ಕಾಂಗ್ರೆಸ್ ಸರ್ಕಾರದ ವೈಫಲ್ಯದಿಂದ ಹಿಂದೂ ಟೈಲರ್ ಕನ್ಹಯ್ಯಾ ಲಾಲ್ ಹತ್ಯೆಯಾಗಿದೆ. ಮುಸ್ಲಿಂರ ಓಟ್‌ಬ್ಯಾಂಕ್ ರಾಜಕಾರಣವೇ ಹಿಂದೂಗಳ ಮೇಲೆ ದೌರ್ಜನ್ಯ ಹೆಚ್ಚಾಗಲು ಕಾರಣ. ಈ ಹಿಂದೆ ಸಣ್ಣಪುಟ್ಟ ಘಟನೆಗಳಿಗೂ ಬೊಬ್ಬೆ ಹೊಡೆಯುತ್ತಿದ್ದ ಬುದ್ಧಿಜೀವಿಗಳು ಕನ್ಹಯ್ಯಾ ಲಾಲ್ ಬರ್ಬರ ಹತ್ಯೆಯ ವಿಚಾರದಲ್ಲಿ ತುಟಿ ಬಿಚ್ಚಿಲ್ಲ. ಈ ಹಿನ್ನೆಲೆಯಲ್ಲಿ ಇನ್ನಾದರೂ ಮುಸ್ಲಿಂರ ತುಷ್ಟೀಕರಣ ನಿಲ್ಲಿಸಬೇಕು. ಹಿಂದೂಗಳ ಮೇಲಾಗುತ್ತಿರುವ ದೌರ್ಜನ್ಯಕ್ಕೆ ತಡೆಯೊಡ್ಡಬೇಕು.

- ಶಾಸಕ ಎಲ್.ನಾಗೇಂದ್ರ.

ಪ್ರತಿಭಟನೆಯಲ್ಲಿ ಶಾಸಕ ಎಲ್.ನಾಗೇಂದ್ರ, ಪಾಲಿಕೆ ಸದಸ್ಯ ಎಂ.ಯು.ಸುಬ್ಬಯ್ಯ, ಹಿಂದೂಪರ ಸಂಘಟನೆಗಳ ಒಕ್ಕೂಟದ ಸಂಚಾಲಕರಾದ ಮೈ.ಕಾ.ಪ್ರೇಮ್‌ಕುಮಾರ್, ಸಹ ಸಂಚಾಲಕರಾದ ಸಂಜಯ್, ರಾಕೇಶ್ ಭಟ್, ಜೀವನ್, ಕುಮಾರ್, ಭವರ್ ಲಾಲ್, ಡಿ.ಟಿ.ಪ್ರಕಾಶ್, ಬಿ.ಎಸ್.ಪ್ರಶಾಂತ್, ವಿಕ್ರಮ್ ಐಯ್ಯಂಗಾರ್, ಪಂಕಜ್ ಪಾರೇಖ್, ಮುಲಾವರ್ ಸಿಂಗ್, ವಿನೋದ್‌ಜೈನ್, ರಮೇಶ್, ಸಂತೋಷ್ ಶಂಭು, ಆಶ್ರಯ ಹೇಮಂತ್, ಮನು ಶೈವ್, ಸಾಗರ್, ಜಗದೀಶ್ ಹೆಬ್ಬಾರ್, ಬೇತ ಕೃಷ್ಣ ಭಟ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳಲ್ಲಿ ನಕಾರಾತ್ಮಕ ಭಾವನೆ ಬೆಳೆಯದಂತೆ ನೋಡಿಕೊಳ್ಳುವುದು ಶಿಕ್ಷಕರ ಜವಾಬ್ದಾರಿ



ಮೈಸೂರು, ಜು.2(ಎಸ್‌ಪಿಎನ್)– ಅನುತ್ತೀರ್ಣಗೊಂಡವರೆಲ್ಲಾ ದಡ್ಡರಲ್ಲ. ಉತ್ತೀರ್ಣಗೊಂಡ ವಿದ್ಯಾರ್ಥಿಗಳೆಲ್ಲಾ ಬುದ್ಧಿವಂತರಲ್ಲ. ಹಾಗಾಗಿ ಈ ವಿದ್ಯಾರ್ಥಿಗಳಲ್ಲಿ ನಕಾರಾತ್ಮಕ ಭಾವನೆ ಬೆಳೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಶಿಕ್ಷಕರದು ಎಂದು ಹಿರಿಯ ಬರಹಗಾರ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ದೇವರಾಜ ಮೊಹಲ್ಲಾದ ದೇವರಾಜ ಬಾಲಕಿಯರ ಸರ್ಕಾರಿ ಪಿಯು ಕಾಲೇಜು ಆವರಣದಲ್ಲಿ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಅಖಿಲ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹಿತರಕ್ಷಣಾ ಸಂಘದ ಸಹಯೋಗದೊಂದಿಗೆ 2021–22ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ ಉಚಿತ ಬೋಧನಾ ತರಗತಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ಪ್ರಸ್ತುತ ಮನೆಪಾಠ ಎನ್ನುವುದು ವ್ಯಾಪಾರೀಕರಣವಾಗಿದೆ. ಇಂದು ಉಚಿತವಾಗಿ ಯಾರೂ ಮನೆಪಾಠ ಹೇಳಿಕೊಡುವುದಿಲ್ಲ. ಇಂತಹ ಸಂದರ್ಭದಲ್ಲಿ ದ್ವಿತೀಯ ಪಿಯುಸಿ ಅನುತ್ತೀರ್ಣರಾಗಿರುವ ಬಡ ವಿದ್ಯಾರ್ಥಿಗಳಿಗಾಗಿ ಆಯಾಯ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಅಖಿಲ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಹಿತರಕ್ಷಣಾ ಸಂಘದ ಸಹಯೋಗದೊಂದಿಗೆ ಮನೆಪಾಠ ಆರಂಭಿಸಿರುವುದು ಉತ್ತಮ ಸಂಗತಿ ಎಂದರು.

ನಾವು ಅನುತ್ತೀರ್ಣರಾಗಿದ್ದೇವೆಂಬ ಕೀಳರಿಮೆಯನ್ನು ವಿದ್ಯಾರ್ಥಿಗಳು ಬದಿಗಿಟ್ಟು ಮುಂಬರುವ ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳುವುದರ ಕಡೆಗೆ ಹೆಚ್ಚಿನ ಗಮನಹರಿಸಬೇಕು. ಹಾಗಾಗಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಮನಸ್ಸಿನಲ್ಲಿ ಸದಾ ಸಕಾರಾತ್ಮಕ ಚಿಂತನೆಗಳನ್ನೇ ಮೈಗೂಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಬದುಕು ಕತ್ತಲಾಗಿ ಬಿಡುತ್ತದೆ ಎಂದು ಕಿವಿಮಾತು ಹೇಳಿದರು.

ರಾಜ್ಯ ಉಪನ್ಯಾಸಕರ ಸಂಘದ ಅಧ್ಯಕ್ಷ ಪ್ರೊ.ಕೆ.ಶಿವೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾಧ್ಯಕ್ಷ ವೆಂಕಟೇಶ್ ಕೋಟೆ ಹಾಗೂ ಹಿರಿಯ ಉಪನ್ಯಾಸಕರಾದ ಬಾಲಸುಬ್ರಹ್ಮಣ್ಯ, ಟಿ.ಎಂ. ನಾಗೇಶ್, ಅನಂತ ಕುಮಾರ್, ಡಾ.ಪಿ. ಶ್ರೀಮತಿ, ಎ.ಎಸ್.ಜಗದೀಶ್, ಎ.ಬಿ. ಸವಿತಾ, ಸುಶೀಲಾ ವಿ. ಭಟ್, ವಿ.ಆನಂದಕುಮಾರಿ, ಎಂ.ಕೆ. ರಾಧಾ, ಎಸ್. ಶ್ಯಾಮಲಾ, ಡಿ. ಪ್ರಭಾವತಿ, ಎಸ್.ಉಷಾ ಇನ್ನಿತರರಿದ್ದರು.

ಕನ್ಹಯ್ಯ ಲಾಲ್ ಹಂತಕರಿಗೆ ಗಲ್ಲು ಶಿಕ್ಷೆಗೆ ಎಂಎಲ್‌ಸಿ ಡಾ. ಡಿ.ತಿಮ್ಮಯ್ಯ ಆಗ್ರಹ



ಮೈಸೂರು, ಜು.2–ರಾಜಸ್ತಾನದ ಉದಯಪುರದಲ್ಲಿ ನಡೆದ ಟೈಲರ್ ಕನ್ಹಯ್ಯ ಲಾಲ್ ಹತ್ಯೆಯನ್ನು ತೀವ್ರವಾಗಿ ಖಂಡಿಸಿರುವ ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ, ಹತ್ಯೆಯ ಹಿಂದಿರುವ ಮೂಲಭೂತ ವಾದಿಗಳಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ದೇಶಕ್ಕೆ ಮುಸ್ಲಿಂ ಮೂಲಭೂತವಾದದಷ್ಟೇ ಹಿಂದೂ ಮೂಲಭೂತವಾದವೂ ಕೂಡ ಅಪಾಯಕಾರಿಯಾಗಿದೆ. ಧರ್ಮಾಂಧತೆಯ ಅಫೀಮನ್ನು ಎರಡೂ ಧರ್ಮದ ಮೂಲಭೂತವಾದಿಗಳು ಜನತೆಯ ಮೆದುಳಿಗೆ ತುರುಕಲು ಹೊರಟಿರುವುದು ಅತ್ಯಂತ ಹೇಯ ಕೃತ್ಯ ಎಂದಿದ್ದಾರೆ. ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ, ಪ್ರವಾದಿ ಮೊಹಮ್ಮದ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ, ಅನ್ಯ ಧರ್ಮದ ಬಗ್ಗೆ ಅಸಹಿಷ್ಣುತೆ ವ್ಯಕ್ತಪಡಿಸಿದ್ದರು. ಬಿಜೆಪಿಯ ಇಂತಹ ಧಾರ್ಮಿಕ ಮೂಲಭೂತವಾದಿಗಳನೇಕರು ಪದೇ ಪದೆ ಇಂತಹ ಅಸಹಿಷ್ಣುತೆ ಪ್ರದರ್ಶಿಸುತ್ತಲೇ ಬಂದಿದ್ದು, ಇದರ ಪರಿಣಾಮಗಳನ್ನು ಭಾರತೀಯರು ಅನುಭವಿಸಬೇಕಾದ ದುರ್ಗತಿ ಬಂದಿದೆ ಎಂದಿದ್ದಾರೆ. ನೂಪುರ್ ಶರ್ಮಾ ಹೇಳಿಕೆ ಬಗ್ಗೆ ಈಗಾಗಲೇ ಸುಪ್ರೀಂಕೋರ್ಟ್ ಆಕ್ರೋಶ ವ್ಯಕ್ತಪಡಿಸಿರುವುದು ಬಿಜೆಪಿ ಮತ್ತು ಅದರ ಬೆಂಬಲಿಗ ಸಂಘಟನೆಗಳಿಗೆ ಎಚ್ಚರಿಕೆ ಪಾಠವಾಗಬೇಕು. ಕನ್ಹಯ್ಯ ಲಾಲ್ ಹತ್ಯೆಯನ್ನು ರಾಜ್ಯಾದ್ಯಂತ ಮುಸ್ಲಿಂ ಧಾರ್ಮಿಕ ನಾಯಕರೂ ಸೇರಿದಂತೆ ಎಲ್ಲಾ ಪ್ರಜ್ಞಾವಂತರು ಖಂಡಿಸುತ್ತಿದ್ದಾರೆ. ಆದರೆ ಕೋಮು ವಿಷಬೀಜ ಬಿತ್ತುವವರು ಕನ್ಹಯ್ಯ ಲಾಲ್ ಹತ್ಯೆಯ ಭೀಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುತ್ತಿರುವುದರಿಂದ ಕೋಮು ಸಂಘರ್ಷ ಹೆಚ್ಚಾಗುವ ಅಪಾಯವಿರುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅದನ್ನು ತಡೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.



ಸ್ಟಾರ್ ಎಂಟರ್‌ಟೈನ್‌ಮೆಂಟ್ ಪ್ರೊಡಕ್ಷನ್ ದೆಹಲಿಯಲ್ಲಿ ನಡೆಸಿದ ಸ್ಪರ್ಧೆಯಲ್ಲಿ ಮೈಸೂರಿನ ಕುಂಬಾರಕೊಪ್ಪಲು ಸೂರ್ಯ ಭಾರದ್ವಾಜ್ ಫೇಸ್ ಆಫ್ ಇಂಡಿಯಾ ಸ್ಟಾರ್ (ಕರ್ನಾಟಕ) ಮತ್ತು ಕಾನ್ಫಿಡೆಂಟ್ ಫೇಸ್ ಆಫ್ ಇಂಡಿಯಾ ಪ್ರಶಸ್ತಿ ಪಡೆದಿದ್ದಾರೆ.

ಆದಿ ಶಂಕರಾಚಾರ್ಯರ ಪರಂಪರೆಯನ್ನು ಮನೆ–ಮನೆಗೆ ತಲುಪಿಸುತ್ತಿರುವ ಶುಕಶಂಕರ ಮಠ

'ಶಾಂಕರ ಸ್ಮೃತಿ'ಯಲ್ಲಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಹೇಳಿಕೆ



ಮೈಸೂರು, ಜು.2(ಎಸ್‌ಪಿಎನ್)– ಆದಿ ಶಂಕರಾಚಾರ್ಯರ ಪರಂಪರೆಯನ್ನು ತಲಕಾಡಿನ ಶುಕಶಂಕರ ಮಠ ಪ್ರತಿ ಮನೆ ಮನೆಗೂ ತಲುಪಿಸಲು ಪ್ರಯತ್ನಿಸುತ್ತಿದೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದ್ದಾರೆ.

ಮೈಸೂರು ಜಯನಗರದಲ್ಲಿರುವ ಶ್ರೀರಾಮಮಂದಿರ ಆವರಣದಲ್ಲಿ ತಲಕಾಡಿನ ಬಾಲಕೃಷ್ಣಾನಂದ ಮಹಾಸಂಸ್ಥಾನದ ಶುಕಶಂಕರ ಪೀಠದ ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮೀಜಿ ಸಾನ್ನಿಧ್ಯದಲ್ಲಿ 'ಶಾಂಕರ ಸ್ಮೃತಿ' ಶ್ರೀ ಆದಿ ಶಂಕರಾಚಾರ್ಯರ ಸ್ತೋತ್ರ ಸ್ತುತಿ ನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶುಕಶಂಕರ ಮಠ ಅನೇಕ ವರ್ಷಗಳಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾದಾನ, ಅನ್ನದಾನದ ಮೂಲಕ ದಾರಿದೀಪವಾಗಿದೆ ಎಂದು ಮಠದ ಕಾರ್ಯವನ್ನು ಶ್ಲಾಘಿಸಿದರು.

ಆದಿ ಶಂಕರಾಚಾರ್ಯರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರಲ್ಲದೆ, ಭಾರತವನ್ನು ಕಾಲ್ನಡಿಗೆಯಲ್ಲೇ ಮೂರು ಬಾರಿ ಪರ್ಯಟನೆ ಮಾಡಿ, ಹಿಂದೂ ಧರ್ಮವನ್ನು ವ್ಯಾಪಕ ಪ್ರಚಾರ ಮಾಡಿದರು ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮೈಸೂರು ಘಟಕದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಶುಕಶಂಕರ ಮಠದ ವತಿಯಿಂದ 'ಶಾಂಕರಸ್ಮೃತಿ' ಧರ್ಮ ಜಾಗೃತಿ ಕಾರ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಜಿಲ್ಲೆಯೆಲ್ಲೆಡೆ ಹಮ್ಮಿಕೊಳ್ಳಲು ಸಹಕಾರ ನೀಡಲಾಗುವುದು. ಪ್ರಸ್ತುತ ದಿನಗಳಲ್ಲಿ ಸಮಾಜದಲ್ಲಿ ಕಲುಷಿತ ವಾತಾವರಣ ನಿರ್ಮಾಣವಾಗುತ್ತಿದ್ದು, ಇದನ್ನು ತಿಳಿಗೊಳಿಸಲು ಆಧ್ಯಾತ್ಮದಿಂದ ಸಾಧ್ಯವಿದೆ ಎಂದರು. ಈ ವೇಳೆ ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಜಯ್‌ಶಾಸ್ತ್ರಿ, ವಿಕ್ರಂ ಅಯ್ಯಂಗಾರ್ ಸೇರಿದಂತೆ ಇತರೆ ಭಕ್ತಾದಿಗಳು ಭಾಗವಹಿಸಿದ್ದರು.

ಇಂದು ವಿದ್ಯುತ್ ವ್ಯತ್ಯಯ



ನಂಜನಗೂಡು, ಜು.2– ತಾಲೂಕಿನ ಸಿಂಧುವಳ್ಳಿಪುರ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ದೇವಿರಮ್ಮನಹಳ್ಳಿ, ದೇವರಸನಹಳ್ಳಿ, ಕಳಲೆ, ನವಿಲೂರು, ಸಿಂಧುವಳ್ಳಿ, ಕೂಡ್ಲಾಪುರ, ಕಸುವಿನಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಜು.3ರಂದು ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ದ್ವಿತೀಯ ಪಿಯುಸಿಯಲ್ಲಿ 581 ಅಂಕ



ಮೈಸೂರು, ಜು.2–ಮೈಸೂರಿನ ಸದ್ವಿದ್ಯಾ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ವಿ.ನಿತಿನ್ ದ್ವಿತೀಯ ಪಿಯುಸಿಯಲ್ಲಿ 581 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರು ಗಾಯಿತ್ರಿಪುರಂನ ಆರ್.ವೇಣು ಗೋಪಾಲ್ ಮತ್ತು ಎನ್.ವನಿತಾ ದಂಪತಿ ಪುತ್ರ.

ಉತ್ತರ ಪ್ರದೇಶ ಮಾದರಿ ಕಬ್ಬಿಗೆ ಎಸ್‌ಎಪಿ ಬೆಲೆ ನಿಗದಿಗೆ ಆಗ್ರಹ

ನಾಳೆ ಮೈಸೂರು ಡಿಸಿ ಕಚೇರಿ ಎದುರು ಪ್ರತಿಭಟನೆ

- ಜು.5ರಂದು ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ಹೋರಾಟ
- ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್

ಮೈಸೂರು, ಜು.2(ಪಿಎಂ)–ರಾಜ್ಯದಲ್ಲಿ ಪ್ರಸಕ್ತ 2022–23ನೇ ಸಾಲಿನ ಕಬ್ಬಿಗೆ ಉತ್ತರ ಪ್ರದೇಶ ಮಾದರಿ ರಾಜ್ಯ ಸಲಹಾ ಬೆಲೆ (ಎಸ್‌ಎಪಿ) ನಿಗದಿ ಮಾಡಬೇಕೆಂಬುದು ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಸಲು ಆಗ್ರಹಿಸಿ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜು.4ರಂದು ಪ್ರತಿಭಟನೆ ಹಮ್ಮಿಕೊಂಡಿದ್ದು, ಅದೇ ರೀತಿ ಜು.5ರಂದು ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಪ್ರದೇಶದಲ್ಲಿ ಟನ್ ಕಬ್ಬಿಗೆ 3,500 ರೂ. ರಾಜ್ಯ ಸಲಹಾ ಬೆಲೆ ನಿಗದಿ ಮಾಡಲಾಗಿದೆ. ಅದೇ ಮಾನದಂಡ ಅನುಸರಿಸಿ ರಾಜ್ಯದಲ್ಲಿಯೂ ದರ ನಿಗದಿಪಡಿಸಬೇಕೆಂಬುದು ನಮ್ಮ ಪ್ರಮುಖ ಬೇಡಿಕೆ. ಈ ಸಂಬಂಧ ಜು.4 ಮತ್ತು 5ರಂದು ಬೆಳಗ್ಗೆ 11ಕ್ಕೆ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿದರು.

ಕಬ್ಬಿನ ಬೆಳೆಗೆ ಬಳಸುವ ರಸಗೊಬ್ಬರ, ಬೀಜ ಸೇರಿದಂತೆ ಕಟಾವು ಕೂಲಿ, ಸಾಗಾಣಿಕೆ ವೆಚ್ಚ (ಡೀಸೆಲ್ ಬೆಲೆ ಏರಿಕೆ ಹಿನ್ನೆಲೆ) ಏರಿಕೆ ಆಗಿದ್ದು, ಇದಕ್ಕೆ ಅನುಗುಣವಾಗಿ ವೈಜ್ಞಾನಿಕವಾಗಿ ಎಸ್‌ಎಪಿ ಬೆಲೆ ನಿಗದಿ ಮಾಡಬೇಕು. ತಕ್ಷಣ ದರ ನಿಗದಿ ಮಾಡದಿದ್ದರೆ ಕಾರ್ಖಾನೆಗಳು ಹಣ ನೀಡುವುದು ವಿಳಂಬವಾಗಿ ರೈತರಿಗೆ ಸಾಕಷ್ಟು ತೊಂದರೆ ಆಗಲಿದೆ ಎಂದರು.

ರಾಜ್ಯ ಸಲಹಾ ಬೆಲೆ ಕಾಯ್ದೆ ಅನ್ವಯ ರಾಜ್ಯ ಸರ್ಕಾರಕ್ಕೆ ಕಬ್ಬಿಗೆ ಬೆಲೆ ನಿಗದಿ ಮಾಡಲು ಅವಕಾಶವಿದೆ. ಇದನ್ನು ಸರ್ಕಾರ ಮನಗಾಣಬೇಕು. ಪ್ರತಿ ವರ್ಷ ಕಬ್ಬಿನ ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಸಕ್ಕರೆ ಕಾರ್ಖಾನೆಯವರು ಯಾವುದೇ ಮಾನದಂಡವಿಲ್ಲದೆ ರೈತರ ಹಣದಿಂದ ಕಡಿತಗೊಳಿಸುತ್ತಿದ್ದು, ಇದನ್ನು ತಪ್ಪಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಕಳೆದ ವರ್ಷ ಸುಮಾರು 70 ಸಕ್ಕರೆ ಕಾರ್ಖಾನೆಗಳು 6.50 ಕೋಟಿ ರೂ. ಮೌಲ್ಯದ ಕಬ್ಬು ನುರಿಸಿವೆ. ಇದರ ಬಾಬ್ತು ರಾಜ್ಯದ ರೈತರಿಗೆ ಇನ್ನೂ 300 ಕೋಟಿ ರೂ.ನಷ್ಟು ಎಫ್‌ಆರ್‌ಪಿ ಹಣ ಬಾಕಿ ಉಳಿದಿದೆ. ಕಾನೂನಿನಂತೆ ಬಾಕಿ ಹಣಕ್ಕೆ ಶೇ.15ರಷ್ಟು ಬಡ್ಡಿ ಸೇರಿಸಿ ತಕ್ಷಣವೇ ಪಾವತಿ ಮಾಡಬೇಕು ಎಂದು ಆಗ್ರಹಿಸಿದರು.

ಜಿಎಸ್‌ಟಿ ಹಿಂಪಡೆಯಲು ಆಗ್ರಹ: ಶ್ರೀರಾಮನ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕೇಂದ್ರ ಸರ್ಕಾರ, ಕುದುರೆ ಬೆಟ್ಟಿಂಗ್, ಕ್ಯಾಸಿನೋಗಳಿಗೆ ಜಿಎಸ್‌ಟಿ ವಿಧಿಸಿಲ್ಲ. ಆದರೆ ಬಡ ರೈತರು ಬಳಸುವ ಹಾಲು ಕರೆಯುವ ಯಂತ್ರ, ಕೊಳವೆ ಬಾವಿ ಯಂತ್ರಗಳಿಗೆ ಜಿಎಸ್‌ಟಿ ವಿಧಿಸುತ್ತಿದೆ. ಕೂಡಲೇ ಇವುಗಳಿಗೆ ಜಿಎಸ್‌ಟಿ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಹತ್ಯೆಗೆ ಖಂಡನೆ: ರಾಜಸ್ತಾನದ ಉದಯಪುರದಲ್ಲಿ ನಡೆದ ಕನ್ಹಯ್ಯಲಾಲ್ ಹತ್ಯೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಕುರುಬೂರು ಶಾಂತಕುಮಾರ್, ಈ ಹತ್ಯೆ ಖಂಡನೀಯ. ಕೇಂದ್ರ ಸರ್ಕಾರ ಶೀಘ್ರ ಎಚ್ಚೆತ್ತುಕೊಂಡು ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದರು. ಸಂಘದ ಮುಖಂಡರಾದ ಅತ್ತಳ್ಳಿ ದೇವರಾಜ್, ಕಿರಗಸೂರು ಶಂಕರ್, ಬರಡನಪುರ ನಾಗರಾಜ್, ಕೆಂಡಗಣ್ಣಸ್ವಾಮಿ, ವೆಂಕಟೇಶ್, ದೇವಮಣಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ

ದೇವೇಗೌಡರ ಬಗ್ಗೆ ಅವಹೇಳನಕಾರಿ ಹೇಳಿಕೆ, ಟೈಲರ್ ಕನ್ನಯ್ಯಲಾಲ್ ಹತ್ಯೆ ಖಂಡಿಸಿ

ಹೆಚ್.ಡಿ.ಕೋಟೆ, ತಿ.ನರಸೀಪುರದಲ್ಲಿ ಪ್ರತಿಭಟನೆ





ಹೆಚ್.ಡಿ.ಕೋಟೆ/ತಿ.ನರಸೀಪುರ, ಜು.2(ಮಂಜು/ಎಸ್‌ಕೆ)– ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರ ಬಗ್ಗೆ ಮಾಜಿ ಶಾಸಕ ಕೆ.ಎನ್.ರಾಜಣ್ಣ ಅವರ ಅವಹೇಳನಕಾರಿ ಹೇಳಿಕೆ ಖಂಡಿಸಿ ಹೆಚ್.ಡಿ.ಕೋಟೆಯಲ್ಲಿ ಜೆಡಿಎಸ್ ಕಾರ್ಯಕರ್ತರು, ಕನ್ನಯ್ಯ ಲಾಲ್ ಹತ್ಯೆ ಖಂಡಿಸಿ ತಿ.ನರಸೀಪುರದಲ್ಲಿ ಟೈಲರ್ ಸಂಘದ ಪದಾಧಿಕಾರಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ: ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರ ಬಗ್ಗೆ ಮಾಜಿ ಶಾಸಕ ಕೆ.ಎನ್.ರಾಜಣ್ಣ ಅವರ ಅವಹೇಳನಕಾರಿ ಹೇಳಿಕೆ ಖಂಡಿಸಿ ತಾಲೂಕು ಜೆಡಿಎಸ್ ಕಾರ್ಯಕರ್ತರು ಪಟ್ಟಣ ದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಜೆಡಿಎಸ್ ಕಚೇರಿ ಬಳಿ ಜಮಾಯಿಸಿದ ನೂರಾರು ಮುಖಂಡರು, ಕಾರ್ಯಕರ್ತರು ಅಲ್ಲಿಂದ ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ದೇಶದ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ ದೇವೇಗೌಡರ ವಿರುದ್ಧ ಮಾಜಿ ಶಾಸಕ ರಾಜಣ್ಣ ಅವರು ಹಗುರವಾಗಿ ಮಾತನಾಡಿರುವುದು ಸರಿಯಲ್ಲ. ಇದು ಇಡೀ ರಾಜ್ಯಕ್ಕೆ ಮಾಡಿದ ಅಪಮಾನ. ಮಾಜಿ ಪ್ರಧಾನಿ ದೇವೇಗೌಡರ ಹಿರಿತನಕ್ಕೆ ಗೌರವ ನೀಡದ ರಾಜಣ್ಣ ಅವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ರಾಜಣ್ಣ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಬಹಿರಂಗ ಕ್ಷಮೆಯಾಚಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿ, ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ತಾಲೂಕು ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಮಾಜಿ ಶಾಸಕ ಚಿಕ್ಕಣ್ಣ ಅವರ ಪುತ್ರ ಜಯಪ್ರಕಾಶ್, ಪುರಸಭೆ ಅಧ್ಯಕ್ಷೆ ಶಿವಮ್ಮ ಚಾಕಹಳ್ಳಿ ಕೃಷ್ಣ, ಮುಖಂಡರಾದ ಸಾಗರೆ ಮಹೇಂದ್ರ, ತಿಮ್ಮಯ್ಯ, ನರಸಿಂಹೇಗೌಡ, ಮಾರುತಿ, ಯೋಗ ನರಸಿಂಹೇಗೌಡ, ರಾಜೇಶ್ ಬಡಗಲಪುರ ಗಾಯತ್ರಿ, ಶಪಿ, ವೇಣು, ಮಿಲ್ ನಾಗರಾಜ್, ನಾಗರಾಜು, ಮಹೇಂದ್ರ, ಮಹೇಶ, ಪ್ರಕಾಶ, ನಾಗೇಶ್, ಮಾಸ್ಟರ್ ನಾಗಣ್ಣ, ಯತೀಶ್ ಕುಮಾರ್, ಕೃಷ್ಣೇಗೌಡ, ರಘು, ರಾಜಣ್ಣ, ನಂಜುಂಡ ಮೂರ್ತಿ, ರಾಜೇಗೌಡ ಚಂದ್ರು, ಶಿವಕುಮಾರ್, ರಾಜು, ನಿಂಗೇಗೌಡ, ದಾಸೇಗೌಡ, ಚಂದ್ರೇಗೌಡ, ಕೋಳಿ ರವಿ, ಪ್ರಭು, ವೆಂಕಟೇಶ್, ಗಣೇಶ್, ಹರೀಶ, ಸಿರಿಶ್ರೀಧರ್, ಚೆಲುವ, ಚಿನ್ನ ಬೆಳ್ಳಿ ರವಿ, ರಿಜ್ವಾನ್ ಪಾಷಾ, ಮಂಜ, ಹರೀಶ್‌ಗೌಡ, ಶಿವರಾಜ, ದೊರೆ, ನಾಗ, ನಿಂಗನಾಯ್ಕ, ರಾಜಪ್ಪ, ಸಿದ್ದೇಗೌಡ, ಸುರೇಶ ಇತರರಿದ್ದರು.

ತಿ.ನರಸೀಪುರ: ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ನಯ್ಯಲಾಲ್ ಹತ್ಯೆ ಖಂಡಿಸಿ ತಾಲೂಕು ಟೈಲರ್ ಸಂಘದ ಪದಾಧಿಕಾರಿಗಳು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು. ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ ಟೈಲರ್ ಸಂಘದ ಸದಸ್ಯರು, ಕನ್ನಯ್ಯ ಲಾಲ್ ಹತ್ಯೆ ಖಂಡಿಸಿ ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಮಾನವ ಸರಪಳಿ ರಚಿಸಿ, ಟೈಲರ್ ಹತ್ಯೆಗೈದ ಮಹಮ್ಮದ್ ಗೌಸ್ ಹಾಗೂ ಮಹಮ್ಮದ್ ರಿಯಾಜ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ತಾಲೂಕು ಕಚೇರಿಯಲ್ಲಿ ತಹಶೀಲ್ದಾರ್ ಸಿ.ಜೆ.ಗೀತಾ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಮಹದೇವಸ್ವಾಮಿ, ಟೈಲರ್ ಕೆಲಸ ಮಾಡುತ್ತಿದ್ದ ಕನ್ನಯ್ಯಲಾಲ್ ಬಳಿಗೆ ಗ್ರಾಹಕರಾಗಿ ಬಂದ ಹಂತಕರು ಅವರ ಕುತ್ತಿಗೆ ಸೀಳಿ ಅಮಾನುಷವಾಗಿ ಹತ್ಯೆಗೈದಿದ್ದಾರೆ. ಬಳಿಕ ವಿಡಿಯೋ ಮಾಡಿ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಮಾಡುವ ಮೂಲಕ ವಿಕೃತಿ ಮೆರೆದಿದ್ದಾರೆ ಎಂದು ಕಿಡಿಕಾರಿದರು.

ಆರೋಪಿಗಳಾದ ಮೊಹಮದ್ ಗೌಸ್ ಹಾಗೂ ಮೊಹಮದ್ ರಿಯಾಜ್ ವಿರುದ್ಧ ತ್ವರಿತ ತನಿಖೆ ನಡೆಸಿ, ಅವರಿಗೆ ಗಲ್ಲುಶಿಕ್ಷೆ ವಿಧಿಸಿ ಅವರ ಶವವನ್ನು ಬಹಿರಂಗವಾಗಿ ಸುಟ್ಟು ಹಾಕಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಉಪಾಧ್ಯಕ್ಷರಾದ ಮಹದೇವಸ್ವಾಮಿ, ಎಂ.ಎಲ್. ಮಹದೇವ, ಗೌರವಾಧ್ಯಕ್ಷ ಮಹದೇವರಾಜು, ಕಾರ್ಯದರ್ಶಿ ರಾಜಾಬುದ್ಧಿ, ಖಜಾಂಚಿ ನಾಗರಾಜು, ಹೆಮ್ಮಿಗೆ ವೆಂಕಟೇಶ್, ಬಸವರಾಜು, ಹರೀಶ್, ಶ್ರೀರಾಂಪುರ ಮಾಧು, ಮಾದೇಶ್, ಗುರುರಾಜ್, ನಸೀರ್, ಸೋಮಣ್ಣ, ನಾಗರಾಜು, ರಂಗಸ್ವಾಮಿ, ವಸಂತ, ಮಹೇಶ್, ಸತೀಶ್, ಮಾದೇಶ್ ವಿಷ್ಣು, ಸುರೇಶ್ ಮತ್ತಿತರರಿದ್ದರು.

ಶಾಲಾ ಬಸ್ ಹರಿದು ಮಗು ಸಾವು

ಬೆಟ್ಟದಪುರ, ಜು.2– ಶಾಲಾ ಬಸ್ ಹರಿದು ಮಗು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ಹಲಗನಹಳ್ಳಿಯಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದೆ. ಹಲಗನಹಳ್ಳಿ ಗ್ರಾಮದ ನಿವಾಸಿ ಸಾದಿಕ್ ಅಹಮದ್ ಅವರ ಸುಮಾರು 2 ವರ್ಷದ ಮಗು ಅದಂ ಸಾವನ್ನಪ್ಪಿರುವುದು.



ವಿವರ: ಬೆಟ್ಟದಪುರದ ಎಸ್‌ಎಂಎಸ್ ಖಾಸಗಿ ಶಾಲೆಯಲ್ಲಿ ಸಾದಿಕ್ ಅಹಮದ್ ಅವರ ಸಹೋದರ, ಶಾಸಕ ಕೆ.ಮಹದೇವ್ ಅವರ ಗನ್‌ಮ್ಯಾನ್ ಸಿದ್ದಿಕ್ ಅವರ ಪುತ್ರ ಜೋಹರಾನ್ 1ನೇ ತರಗತಿಯಲ್ಲಿ ವ್ಯಾಸಾಂಗ ಮಾಡುತ್ತಿದ್ದು, ಶನಿವಾರ ಮಾರ್ನಿಂಗ್ ಕ್ಲಾಸ್ ಮುಗಿದ ನಂತರ ಶಾಲಾ ಬಸ್‌ನಲ್ಲಿ ಬಂದ ಜೋಹರಾನ್ ಮನೆ ಬಳಿ ಇಳಿದಿದ್ದಾನೆ. ಈ ವೇಳೆ ಅಣ್ಣನನ್ನು ಕಂಡ 2 ವರ್ಷದ ಅದಂ ಬಸ್‌ನತ್ತ ಓಡಿ ಬಂದಿದ್ದಾನೆ. ಇದನ್ನು ಗಮನಿಸದ ಚಾಲಕ ಬಸ್ ಚಾಲನೆ ಮಾಡಿದ್ದು, ಬಸ್ ಮಗುವಿನ ಮೇಲೆ ಹರಿದು ಸ್ಥಳದಲ್ಲೇ ಸಾವನ್ನಪ್ಪಿದೆ. ವಿಷಯ ತಿಳಿದು ಸ್ಥಳಕ್ಕಾಗ ಮಿಸಿದ ಪಿರಿಯಾಪಟ್ಟಣ ವೃತ್ತ ನಿರೀಕ್ಷಕ ಜಗದೀಶ್ ಹಾಗೂ ಬೆಟ್ಟದಪುರ ವೃತ್ತ ನಿರೀಕ್ಷಕ ಪ್ರಕಾಶ್, ಎಸ್‌ಐ ಪ್ರಕಾಶ್ ಎತ್ತಿನಮನಿ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಚಾಲಕ ಹಾಗೂ ಬಸ್ ಅನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ಕೊಂಡಿದ್ದಾರೆ. ಬಳಿಕ ಮಗುವಿನ ಶವವನ್ನು ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಆಕ್ರೋಶ: ಬಸ್‌ಗೆ ಸಿಲುಕಿ ಮಗು ಸಾವನ್ನಪ್ಪುತ್ತಿದ್ದಂತೆ ಸ್ಥಳದಲ್ಲಿ ಜಮಾಯಿಸಿದ ಸಾರ್ವಜನಿಕರು ಹಾಗೂ ಕುಟುಂಬಸ್ಥರು ಶಾಲೆಗೆ ಸೇರಿದ ಬಸ್ ಕಿಟಕಿ ಗಾಜುಗಳನ್ನು ಪುಡಿಪುಡಿ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಖಾಸಗಿ ಶಾಲೆಗಳು ವಿದ್ಯಾರ್ಥಿಗಳನ್ನು ಕರೆತರಲು ಚಾಲಕನನ್ನು ನೇಮಿಸಿಕೊಂಡಿವೆ. ಆದರೆ ಕ್ಲೀನರ್‌ಗಳನ್ನು ನೇಮಿಸಿಕೊಂಡಿಲ್ಲ. ಇದರಿಂದ ಇಂತಹ ಅನಾಹುತಗಳು ಆಗಾಗ್ಗೆ ಸಂಭವಿಸುತ್ತಿವೆ. ಅಲ್ಲದೇ ಶಾಲಾ ಬಸ್‌ನಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ಕರೆತರಲಾಗುತ್ತಿದೆ. ಇದರಿಂದಲೂ ಅನಾಹುತ ಸಂಭವಿಸುತ್ತಿವೆ. ಹೀಗಾಗಿ ಸಾರಿಗೆ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ತಂಬಾಕು ಹದಗೊಳಿಸುವ ಬ್ಯಾರನ್‌ಗೆ ಬೆಂಕಿ

ಹಿರಿಕ್ಯಾತನಹಳ್ಳಿ, ಜು.2– ತಂಬಾಕು ಹದಗೊಳಿಸುವ ಬ್ಯಾರನ್‌ಗೆ ಆಕಸ್ಮಿಕ ಬೆಂಕಿ ತಗುಲಿ ಸುಮಾರು 3 ಲಕ್ಷ ರೂ. ನಷ್ಟ ಸಂಭವಿಸಿರುವ ಘಟನೆ ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಲಕ್ಕನಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಾಗೇಗೌಡ ಎಂಬುವರಿಗೆ ಸೇರಿದ ತಂಬಾಕು ಬ್ಯಾರನ್‌ನಲ್ಲಿ ಮೊದಲು ದಟ್ಟ ಹೊಗೆ ಕಾಣಿಸಿಕೊಂಡಿದೆ. ಒಮ್ಮೆಲೆ ಮೇಲ್ಛಾವಣಿಗೆ ಬೆಂಕಿ ತಗುಲಿ ಹೊತ್ತಿ ಉರಿದಿದ್ದು, ಹದಗೊಳಿಸಲು ಡಬ್ಬಲ್ ಬ್ಯಾರನ್‌ಗೆ ಏರಿಸಿದ್ದ ಹೊಗೆಸೊಪ್ಪು ಹಾಗೂ ಮೇಲ್ಛಾವಣಿ ಸಂಪೂರ್ಣ ಸುಟ್ಟು ಹೋಗಿ ಸುಮಾರು 3 ಲಕ್ಷ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ನಾಗೇಗೌಡರು ಗಾವಡಗೆರೆಯ ಬ್ಯಾಂಕ್ ಆಫ್ ಬರೋಡಾದಲ್ಲಿ ತಂಬಾಕು ಬೆಳೆಯಲು 5 ಲಕ್ಷಕ್ಕೂ ಹೆಚ್ಚು ಸಾಲ ಹಾಗೂ ಇತರೆ ಸಂಘ ಸಂಸ್ಥೆಗಳಲ್ಲಿ ಸಾಲ ಪಡೆದಿದ್ದರು ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಅಕ್ಕಪಕ್ಕದ ಬ್ಯಾರನ್‌ಗಳಿಗೆ ಬೆಂಕಿ ಹರಡುವುದನ್ನು ತಪ್ಪಿಸಿದ್ದಾರೆ.

ಹುಲಿ ದಾಳಿಗೆ ಆನೆ ಮರಿ ಬಲಿ

ಹೆಚ್.ಡಿ.ಕೋಟೆ, ಜು.2(ಮಂಜು)– ಹುಲಿ ದಾಳಿಗೆ ಆನೆ ಮರಿ ಬಲಿಯಾಗಿರುವ ಘಟನೆ ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಡಿ.ಬಿ.ಕುಪ್ಪೆ ವನ್ಯಜೀವಿ ವಲಯದ ಮಾಸ್ತಿಗುಡಿ ಬಳಿಯ ಕಬಿನಿ ಹಿನ್ನೀರಿನ ಸನ್‌ಸೆಟ್ ಪಾಯಿಂಟ್ ಬಳಿ ನಡೆದಿದೆ.



ಕಳೆದ 10 ದಿನಗಳ ಹಿಂದೆ ಜನಿಸಿದ ಆನೆ ಮರಿ ಸಾವನ್ನಪ್ಪಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದು, ಹುಲಿ ಆನೆ ಮರಿಯನ್ನು ಬೇಟೆಯಾಡುತ್ತಿರುವ ದೃಶ್ಯ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಗೋಚರಿಸಿದೆ.

ಆನೆ ತನ್ನ ಮರಿಯನ್ನು ಯಾವುದೇ ಪ್ರಾಣಿ ಬೇಟೆಯಾಡದಂತೆ ಸೂಕ್ಷ್ಮವಾಗಿ ಕಾಪಾಡಿಕೊಳ್ಳುತ್ತದೆ. ಜೊತೆಯಲ್ಲಿರುವ ಇತರೆ ಆನೆಗಳೂ ಗುಂಪಾಗಿ ನಿಂತು ಮರಿಗಳ ಬೆಳವಣಿಗೆಗೆ ಮುಂದಾಗುತ್ತವೆ. ಆದರೂ ಹುಲಿ ಆನೆಗಳ ಕಣ್ತಪ್ಪಿಸಿ ಮರಿ ಆನೆ ಬೇಟೆಯಾಡಿದೆ ಎಂದು ಅಂತರಸಂತೆ ವನ್ಯಜೀವಿ ಅರಣ್ಯ ಅಧಿಕಾರಿ ಸಿದ್ದರಾಜು ತಿಳಿಸಿದ್ದಾರೆ.

40 ಮಂದಿಗೆ ನಿವೇಶನ ಹಕ್ಕು ಪತ್ರ ವಿತರಣೆ

ಹಂಪಾಪುರ, ಜು.2(ರಾಜೇಶ್)– ಇಲ್ಲಿನ ಮಾದಾಪುರ ಗ್ರಾಪಂ ವ್ಯಾಪ್ತಿಯ ಹೊಳೆಹುಂಡಿ ಗ್ರಾಮದ 40 ಬಡ ಕುಟುಂಬಗಳಿಗೆ ಶಾಸಕ ಅನಿಲ್ ಚಿಕ್ಕಮಾದು ನಿವೇಶನ ಹಕ್ಕು ಪತ್ರ ವಿತರಿಸಿದರು.



ಕಾರ್ಯಕ್ರಮ ಉದ್ಘಾಟಿಸಿ, ನಿವೇಶನ ಹಕ್ಕು ಪತ್ರ ವಿತರಿಸಿ ಮಾತನಾಡಿದ ಅವರು, ನಮ್ಮ ತಂದೆ ಚಿಕ್ಕಮಾದು ಅವರು ಗ್ರಾಮದ ಜನತೆಗೆ ನಿವೇಶನ ವಿತರಿಸಬೇಕು ಎಂಬ ಮಹತ್ತರ ಕನಸು ಹೊಂದಿದ್ದರು. ಆದರೆ ಇದು ಸಾಧ್ಯವಾಗಿರಲಿಲ್ಲ. ನಿವೇಶನ ವಿತರಿಸುವಂತೆ ಗ್ರಾಮದ ಮುಖಂಡರು, ಯಜಮಾನರು ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ 2 ಎಕರೆ 10 ಗುಂಟೆ ಜಾಗದಲ್ಲಿ 20X30 ಅಳತೆಯ 40 ನಿವೇಶನಗಳನ್ನು ನಿರ್ಮಾಣ ಮಾಡಿ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ. ಜು.4ರೊಳಗೆ ಎಲ್ಲಾ ಫಲಾನುಭವಿಗಳ ನಿವೇಶನಗಳಿಗೆ ಕಲ್ಲು ನೆಟ್ಟು, ಜಾಗ ಹಂಚಿಕೆ ಮಾಡಿ ಬುದ್ಧ ನಗರ ಎಂದು ನಾಮಕರಣ ಮಾಡುವಂತೆ ಸ್ಥಳದಲ್ಲಿದ್ದ ತಾಪಂ ಇಓ, ಮಾದಾಪುರ ಗ್ರಾಪಂ ಪಿಡಿಓಗೆ ಸೂಚಿಸಿದರು. ಕಾರ್ಯಕ್ರಮದಲ್ಲಿ ಮಾದಾಪುರ ಗ್ರಾಪಂ ಅಧ್ಯಕ್ಷೆ ಸವಿತಾ, ಉಪಾಧ್ಯಕ್ಷ ಗಿರೀಶ್, ಸದಸ್ಯರಾದ ಮಹೇಶ್ ನಾಯಕ, ಜಯರಾಂ, ಮಲ್ಲು, ಕೆ.ಟಿ.ಚಿಕ್ಕನಾಯಕ, ಕರಿಗೌಡ, ಇ.ಮಾದಯ್ಯ, ಚಂದ್ರು, ನಂಜನಾಯಕ, ಮಣಿಕುಮಾರ್, ಶಂಕರ್, ಮಹದೇವು, ವಿನೋದ, ಶಂಕರ್, ಯಜ್ಞೂರಯ್ಯ, ರಾಜು, ವೆಂಕಟೇಶ ನಾಯಕ, ಶಿವಮಲ್ಲು, ಗ್ರಾಮದ ಪ್ರಮುಖ ಯಜಮಾನ ಕರಿಯಪ್ಪ, ಚಿಕ್ಕ ಯಜಮಾನ ಚಿಕ್ಕಕುಂಚಯ್ಯ, ಗ್ರಾಮದ ಮುಖಂಡರಾದ ಹೆಚ್.ಸಿ.ನರಸಿಂಹಮೂರ್ತಿ, ಬಿ.ಕರಿಯಪ್ಪ ಸೇರಿದಂತೆ ಗ್ರಾಮಸ್ಥರಿದ್ದರು.

ಬೈಲುಕುಪ್ಪೆ ಗೋಲ್ಡನ್ ಟೆಂಪಲ್‌ಗೆ ರಾಜ್ಯಪಾಲರ ಭೇಟಿ

ಬೈಲುಕುಪ್ಪೆ ಜು.2(ರಾಜೇಶ್)– ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆಯಲ್ಲಿರುವ ಪ್ರವಾಸಿಗರ ನೆಚ್ಚಿನ ತಾಣ ಗೋಲ್ಡನ್ ಟೆಂಪಲ್‌ಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಶನಿವಾರ ಭೇಟಿ ನೀಡಿದರು.



ಈ ವೇಳೆ ಬೌದ್ಧ ಬಿಕ್ಷುಗಳು ರಾಜ್ಯಪಾಲರನ್ನು ಟಿಬೆಟಿಯನ್ ಸಂಪ್ರದಾಯದಂತೆ ಸ್ವಾಗತಿಸಿದರೆ, ಮೈಸೂರು ಜಿಲ್ಲಾ ಪೊಲೀಸರು ಗೌರವ ಸಮರ್ಪಣೆ ಮಾಡಿದರು. ನಂತರ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಗೋಲ್ಡನ್ ಟೆಂಪಲ್‌ನಲ್ಲಿರುವ 3 ಬುದ್ಧನ ವಿಗ್ರಹಗಳನ್ನು ವೀಕ್ಷಣೆ ಮಾಡಿ, ಬೌದ್ಧ ಗುರುಗಳಿಂದ ಮಾಹಿತಿ ಪಡೆದರು. ಇದೇ ವೇಳೆ ರಾಜ್ಯಪಾಲರಿಗೆ ಬುದ್ಧನ ಪ್ರತಿಮೆ ನೀಡಿ ಗೋಲ್ಡನ್ ಟೆಂಪಲ್ ಕಮಿಟಿ ವತಿಯಿಂದ ಗೌರವಿಸಲಾಯಿತು.

ಈ ಸಂದರ್ಭ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ತಹಸೀಲ್ದಾರ್ ಚಂದ್ರಮೌಳಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ಅಡಿಷನಲ್ ಎಸ್ಪಿ ಶಿವಕುಮಾರ್, ಸಿಪಿಐ ಪ್ರಕಾಶ್, ಎಸ್‌ಐಗಳಾದ ಬಸವರಾಜು, ಪ್ರಕಾಶ್ ಎತ್ತಿನಮನಿ, ಚಿಕ್ಕಸ್ವಾಮಿ, ಆರ್‌ಐ ಪ್ರದೀಪ್, ವಿಎ ನವೀನ್, ಗೋಲ್ಡನ್ ಟೆಂಪಲ್ ಆಡಳಿತ ಮಂಡಳಿ ಪ್ರಮುಖ ಗುರುಗಳು ಸೇರಿದಂತೆ ಇನ್ನಿತರರಿದ್ದರು.

ಮಿತವಾಗಿ ಬಳಸುವ ಮೂಲಕ ನೀರನ್ನು ಸಂರಕ್ಷಿಸಿ



ತಿ.ನರಸೀಪುರ, ಜು.2(ಎಸ್‌ಕೆ)– ಸಕಲ ಜೀವರಾಶಿಗಳಿಗೂ ನೀರು ಮುಖ್ಯವಾಗಿದ್ದು, ಮಿತ ಬಳಕೆ ಮಾಡುವ ಮೂಲಕ ನೀರನ್ನು ಸಂರಕ್ಷಿಸಬೇಕು ಎಂದು ಜಲ ಜೀವನ್ ಮಿಷನ್ ಯೋಜನೆಯ ಜಿಲ್ಲಾ ಯೋಜನಾ ವ್ಯವಸ್ಥಾಪಕ ಚೇತನ್ ಕರೆ ನೀಡಿದ್ದಾರೆ.

ತಾಲೂಕಿನ ವಾಟಾಳು, ಕರೋಹಟ್ಟಿ, ಬೆನಕನಹಳ್ಳಿ, ನಂಜನಗೂಡು ತಾಲೂಕಿನ ಹೊಸಕೋಟೆ, ತುಂಬಾ ನೇರಳೆ, ಹುಳಿಮಾವು, ಕೆಂಪಸಿದ್ದನಹುಂಡಿ, ಮೈಸೂರು ತಾಲೂಕಿನ ಸೋಮೇಶ್ವರಪುರ, ಮೊಸಂಬಾಯನಹಳ್ಳಿ ಗ್ರಾಪಂ ಚುನಾಯಿತ ಪ್ರತಿನಿಧಿಗಳು ಮತ್ತು ಸಿಬ್ಬಂದಿಗಳನ್ನು ಒಂದು ದಿನದ ಅಧ್ಯಯನ ಪ್ರವಾಸಕ್ಕೆ ತಾಲೂಕಿನ ದೊಡ್ಡಮಾರಗೌಡನಹಳ್ಳಿ ಗ್ರಾಪಂ ಶೆಟ್ಟಿನಾಯಕನಹಳ್ಳಿ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಜಿಪಂ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಭಗೀರಥ ಸಂಸ್ಥೆಯ ಸಹಯೋಗದೊಂದಿಗೆ ಜಲ ಜೀವನ್ ಮಿಷನ್ ಯೋಜನೆಯಡಿ ಕಲ್ಪಿಸಲಾಗಿರುವ ಕಾರ್ಯಾತ್ಮಕ ನಳಗಳ ವೀಕ್ಷಣೆ ಮಾಡಿಸಿ ನಂತರ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ನೀರನ್ನು ಹೆಚ್ಚು ಪೋಲು ಮಾಡಲಾಗುತ್ತಿದೆ. ವಿಶ್ವಸಂಸ್ಥೆಯು ಹೇಳಿರುವಂತೆ ಮುಂದಿನ ದಿನಗಳಲ್ಲಿ ಮಹಾಯುದ್ಧ ನಡೆದರೆ ಅದು ಕುಡಿಯುವ ನೀರಿಗಾಗಿ ನಡೆಯುತ್ತದೆ ಎಂಬುದು ಸತ್ಯವಾಗುವ ಸನ್ನಿವೇಶಗಳು ಎದುರಾಗುತ್ತಿದೆ. ಹಾಗಾಗಿ, ನೀರಿನ ಸಂರಕ್ಷಣೆ ಮಾಡುವುದು ಅತ್ಯಗತ್ಯವಾಗಿದೆ ಎಂದರು.

ಇದಕ್ಕೂ ಮೊದಲು ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಬಹುಗ್ರಾಮ ಕುಡಿಯುವ ನೀರಿನ ಯೋಜನ ಘಟಕಕ್ಕೆ ಅಧ್ಯಯನ ಪ್ರವಾಸ ಮಾಡಲಾಯಿತು. ಈ ವೇಳೆ ಜೆಜೆಎಂ ಜಿಲ್ಲಾ ತಂಡದ ನಾಯಕ ವೀರಣ್ಣಗೌಡ, ಹೆಚ್‌ಟಿ/ಐಇಸಿ ತಜ್ಞ ಚಂಗಪ್ಪ ಆದರ್ಶ, ವಿಜಯೇಂದ್ರ ಸಂತೋಷ್, ರಾಜೇಂದ್ರ, ನಾಗೇಶ್ ಹಾಜರಿದ್ದರು.

ಮಹಿಳೆಯರು ಆದಾಯ ಬರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ

ಸರಗೂರು, ಜು.2(ನಾಗೇಶ್)– ಮಹಿಳೆಯರು ಆದಾಯ ಬರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮೈಸೂರು ಮೇಯರ್ ಸುನಂದಾ ಪಾಲನೇತ್ರ ಹೇಳಿದರು.



ಪಟ್ಟಣದ ಸ್ನೇಹ ಸ್ತ್ರೀ ಸಮಾಜದ ವತಿಯಿಂದ ತರಬೇತಿ ಪಡೆದು ತೆರೆದಿರುವ ಬ್ಯೂಟಿಷಿಯನ್ ಸೆಂಟರ್‌ಗೆ ಭೇಟಿ ನೀಡಿ ಮಾತನಾಡಿದ ಅವರು, ಮಹಿಳೆಯರು ಎಲ್ಲಾ ಸಮಸ್ಯೆಗಳನ್ನು ಆರೋಗ್ಯಕರವಾಗಿ ಸ್ವೀಕರಿಸಿ. ಇರುವ ಸೌಲಭ್ಯವನ್ನು ಉತ್ತಮವಾಗಿ ಬಳಸಿಕೊಂಡು ಆಸಕ್ತಿ ಮತ್ತು ಆತ್ಮವಿಶ್ವಾಸದಿಂದ ತರಬೇತಿಗಳನ್ನು ಪಡೆದು ಇತರರಿಗೆ ಮಾದರಿಯಾಗಿ ಸಮಾಜದ ಮುಖ್ಯವಾಹಿನಿಗೆ ಬಂದು ಸಹಜ ಜೀವನ ನಡೆಸುವಂತಾಗಲಿ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಮಹಿಳೆಯರು ವಿವಿಧ ತರಬೇತಿ ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಸ್ನೇಹ ಸ್ತ್ರೀ ಸಮಾಜದ ಸಂಸ್ಥಾಪಕ ಅಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ ಮಾತನಾಡಿ, 30 ವರ್ಷದಿಂದ ಹತ್ತು ಹಲವು ತರಬೇತಿ ಪಡೆದ ಮಹಿಳೆಯರು ಇಂದು ತಮ್ಮ ಕುಟುಂಬ ನಿರ್ವಹಣೆ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಹೆಚ್ಚಿನ ಮಹಿಳೆಯರು ಸೌಲಭ್ಯ ಬಳಸಿಕೊಳ್ಳಿ ಎಂದರು. ಬೆಂಗಳೂರಿನ ಬ್ಯೂಟಿಷಿಯನ್ ನಿರ್ದೇಶಕರಾದ ಪದ್ಮಾ, ಜಿಪಂ ಮಾಜಿ ಅಧ್ಯಕ್ಷೆ ರಾಧಾ ಸಂದರೇಶ್, ಸ್ನೇಹ ಸ್ತ್ರೀ ಸಮಾಜದ ಸದಸ್ಯರಾದ ಮಂಜುಳಾ, ಶೋಭಾ, ಸೀಮಾ, ಸವಿತಾ, ಉಮಾ ಮಹೇಶ್ವರಿ, ಶೀಲಾ, ಉಮಾ, ಪುಷ್ಪ, ರಂಜನಿ, ಪುಷ್ಪರಾಜ್, ಮಂಗಳ, ರೇಖಾ, ಕಲಾ, ಜ್ಯೋತಿ ಇನ್ನಿತರರಿದ್ದರು.

ಹಾಲು ಉತ್ಪಾದಕರಿಗೆ ಸಾಲ ನೀಡಲು ಬ್ಯಾಂಕ್ ಒಪ್ಪಿಗೆ

ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ ಕೃಷಿ ಅಭಿಯಾನಕ್ಕೆ ಶಾಸಕ ಸಾ.ರಾ.ಮಹೇಶ್ ಚಾಲನೆ

ಕೆ.ಆರ್.ನಗರ, ಜು.2– ತಾಲೂಕಿನ 7 ಸಾವಿರ ಮಂದಿ ಹಾಲು ಉತ್ಪಾದಕರಿಗೆ ಸಾಲ ನೀಡಲು ಬ್ಯಾಂಕ್ ಒಪ್ಪಿಕೊಂಡಿದ್ದು, ಶೀಘ್ರ ಸಭೆ ಕರೆದು ತೀರ್ಮಾನಿಸಲಾಗುವುದು ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.



ಪಟ್ಟಣದ ಕೃಷಿ ಇಲಾಖೆ ವತಿಯಿಂದ ಆಯೋಜಿಸಿದ್ದ 'ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ' ಕೃಷಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ತಾಲೂಕಿನಲ್ಲಿ 150 ಡೈರಿಗಳಿದ್ದು, ನಾನು ಇಂದು ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರು ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರಿಗಳೊಂದಿಗೆ ಮಾತನಾಡಿದ್ದು ತಲಾ 2 ಹಸುಗಳನ್ನು ಖರೀದಿಸಲು 60 ಸಾವಿರದಂತೆ ಸಾಲ ನೀಡಲು ಬ್ಯಾಂಕ್ ಒಪ್ಪಿಕೊಂಡಿದೆ ಎಂದರು.

ಸಾಲದ ಹಣವನ್ನು ಪ್ರತಿ ತಿಂಗಳು ಡೈರಿಗೆ ಹಾಕುವ ಹಾಲಿನ ಹಣದಲ್ಲಿ 1500 ರೂ. ಕಡಿತ ಮಾಡಿಕೊಳ್ಳುವಂತೆ ಚರ್ಚಿಸಲಾಗಿದೆ. ಒಟ್ಟು 14 ಸಾವಿರ ಹಸುಗಳು ತಾಲೂಕಿನ ರೈತರಿಗೆ ದೊರೆಯಲಿದ್ದು ಇದರ ಸದುಪಯೋಗ ಪಡಿಸಿಕೊಳ್ಳಿ ಎಂದು ಮನವಿ ಮಾಡಿದರು.

ರೈತರು ತಮ್ಮ ಬೆಳೆಗೆ ಸಂಬಂಧಪಟ್ಟಂತೆ ತುರ್ತು ಸಹಾಯವಾಣಿಗೆ ಕರೆ ಮಾಡಿದರೇ ತಕ್ಷಣ ಅಧಿಕಾರಿಗಳು ನಿಮ್ಮ ಬಳಿಗೆ ಬಂದು ಅಗತ್ಯ ಸಲಹೆ ಮತ್ತು ಮಾಹಿತಿ ನೀಡಿ ಸಮಸ್ಯೆಗೆ ಪರಿಹಾರ ಸೂಚಿಸಲಿದ್ದಾರೆ. ಸಮಗ್ರ ಕೃಷಿ ಅಭಿಯಾನ ಮತ್ತು ಮುಂಗಾರು ರೈತರ ಬೆಳೆ ಸಮೀಕ್ಷೆ ವಾಹನಕ್ಕೆ ಇಂದು ಚಾಲನೆ ನೀಡಲಾಗಿದ್ದು, ಈ ವಾಹನ ಒಂದೊಂದು ಹೋಬಳಿಯಲ್ಲಿ ಎರಡೆರಡು ದಿನ ಸಂಚರಿಸಿ ರೈತರಿಗೆ ಮಾಹಿತಿ ನೀಡಲಿದೆ. ಇದರ ಸದುಪಯೋಗ ಪಡೆಯಿರಿ ಎಂದು ಮನವಿ ಮಾಡಿದರು.

ಈ ವೇಳೆ ತಹಸೀಲ್ದಾರ್ ಎಸ್.ಸಂತೋಷ್, ತಾಪಂ ಇಓ ಸತೀಶ್, ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್.ಗುರುಪ್ರಸಾದ್, ಪಶು ಇಲಾಖೆ ಡಾ.ರಾಮು, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಪ್ರಸನ್ನ, ಎಸ್‌ಐ ಚಂದ್ರಹಾಸ, ತಾಪಂ ಮಾಜಿ ಸದಸ್ಯ ಶ್ರೀನಿವಾಸ್ ಪ್ರಸಾದ್, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ರೈತ ಮುಖಂಡರಾದ ಕೆ.ಟಿ.ತ್ಯಾಗರಾಜ್, ಗರುಡಗಂಭದ ಸ್ವಾಮಿ, ರಾಮ್ ಪ್ರಸಾದ್, ಕುಚೇಲ, ಹರೀಶ್ ಇನ್ನಿತರರಿದ್ದರು.



ತಿ.ನರಸೀಪುರ ತಾಲೂಕಿನ ಗರ್ಗೇಶ್ವರಿ ಗ್ರಾಮಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆಗೆ ಆಗಮಿಸಿದ್ದ ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರನ್ನು ಗ್ರಾಪಂ ಸದಸ್ಯರಾದ ಹಾಳೆಗೌಡ, ಮಾಜಿ ಸದಸ್ಯ ವೆಂಕಟೇಶ್, ಮಹದೇವಸ್ವಾಮಿ (ಗಜನಿ) ಸನ್ಮಾನಿಸಿದರು.

ಹೆಮ್ಮರಗಾಲ ಪಿಡಿಓ ವಿರುದ್ಧ ಗ್ರಾಪಂ ಸದಸ್ಯರ ಆಕ್ರೋಶ


ನಂಜನಗೂಡು, ಜು.2(ಸುದರ್ಶನ್)– ಸಾರ್ವಜನಿಕರು ಹಾಗೂ ಗ್ರಾಪಂ ಸದಸ್ಯರೊಂದಿಗೆ ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ ಎಂದು ಆರೋಪಿಸಿ ಪಿಡಿಓ ವಿರುದ್ಧ ತಾಲೂಕಿನ ಹೆಮ್ಮರಗಾಲ ಗ್ರಾಪಂ ಅಧ್ಯಕ್ಷರು, ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗ್ರಾಮದ ಗ್ರಾಪಂ ಕಚೇರಿ ಎದುರು ಜಮಾಯಿಸಿದ ಅಧ್ಯಕ್ಷೆ, ಉಪಾಧ್ಯಕ್ಷೆ ಸೇರಿದಂತೆ ಸದಸ್ಯರು, ಸಾರ್ವಜನಿಕರು ಹಾಗೂ ನಮ್ಮೊಂದಿಗೆ ಉಡಾಫೆಯಿಂದ ವರ್ತಿಸುವ ಪಿಡಿಓ ಪುಟ್ಟಸ್ವಾಮಾಚಾರಿ ಅವರನ್ನು ಗ್ರಾಪಂ ಒಳಗೆ ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಇನ್ನು ವಿಷಯ ತಿಳಿದ ಪಿಡಿಓ ಕೆಲಸಕ್ಕೆ ಗೈರು ಹಾಜರಾದರು.

ಗ್ರಾಪಂ ಅಧ್ಯಕ್ಷೆ ಶೀಲಾ ಮಾತನಾಡಿ, ಕಳೆದ 2 ವರ್ಷಗಳಿಂದ ಪಿಡಿಓ ಪುಟ್ಟಸ್ವಾಮಾಚಾರಿ ಗ್ರಾಪಂನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಗ್ರಾಪಂಗೆ ಬರುವ ಸಾರ್ವಜನಿಕರು ಮತ್ತು ಸದಸ್ಯರೊಂದಿಗೆ ಉಡಾಫೆಯಿಂದ ವರ್ತಿಸುತ್ತಾರೆ. ಗ್ರಾಪಂ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ಸರ್ಕಾರದ ಯಾವುದೇ ಯೋಜನೆ ಮತ್ತು ಮಾಹಿತಿ ಕೇಳಿದರೆ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದು, ಈ ಬಗ್ಗೆ ಜಿಪಂ ಸಿಇಓ ಅವರಿಗೆ ದೂರು ನೀಡಿದ್ದೇವೆ. ಪಿಡಿಓ ಪುಟ್ಟಸ್ವಾಮಾಚಾರಿ ಗ್ರಾಪಂಗೆ ಬಂದರೆ ಅವರನ್ನು ಒಳಗೆ ಬಿಡುವುದಿಲ್ಲ ಈ ಕೂಡಲೇ ಪಿಡಿಓ ಅವರನ್ನು ವರ್ಗಾವಣೆ ಮಾಡಿ ಬೇರೆ ಪಿಡಿಓ ನಿಯೋಜಿಸಬೇಕು. ಇಲ್ಲದಿದ್ದರೇ ತಾಪಂ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಸ್ಥಳಕ್ಕಾಗಮಿಸಿದ ತಾಪಂ ಸಹಾಯಕ ಲೆಕ್ಕಾಧಿಕಾರಿ ಶ್ರೀಕಂಠನಾಯಕ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಗೀತಾ, ದಸಂಸ ಜಿಲ್ಲಾ ಸಂಚಾಲಕ ನಾರಾಯಣ್, ಸದಸ್ಯರಾದ, ಭಾಗ್ಯ, ಅಂಬಿಕಾ, ಶಿವಮಾದಪ್ಪ, ರವಿಕುಮಾರ್, ನಾಗರಾಜು, ಜ್ಯೋತಿ, ಜಯಮ್ಮ, ಗೌರಮ್ಮ, ಶ್ರೀಧರ್ ಸೇರಿದಂತೆ ಹಲವರಿದ್ದರು.

ಮನೋಹರ್ ನಿಧನ

ಹೆಚ್.ಡಿ.ಕೋಟೆ, ಜು.2– ಬೀಚನಹಳ್ಳಿ ಗ್ರಾಮದ ನಿವಾಸಿ ಮನೋಹರ್ (65) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮೈಸೂರಿನ ಚೋರನಹಳ್ಳಿ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.



ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಸ್. ಗಂಗಾಧರಯ್ಯ MSW, LLB, PGDPR

ಸಂಸ್ಥಾಪಕರು : ಪೀಪಲ್ ಮ್ಯಾನೇಜ್‌ಮೆಂಟ್ ಸರ್ವಿಸಸ್

ನಿಧನ: 03-07-2020

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚಹಸಿರಾಗಿರುತ್ತದೆ

ಸದಾ ನೆನಪಿನಲ್ಲಿರುವ

ಧರ್ಮಪತ್ನಿ ಶ್ರೀಮತಿ ಹೆಚ್.ಪಿ. ಹೇಮಾ

ಪುತ್ರ ಶ್ರೀ ಸಿ.ಜಿ. ಹರ್ಷ BE. LLB ಮತ್ತು ಶ್ರೀಮತಿ ತಾನ್ಯ ಎ. ಪುತ್ರಿ ಸಿ.ಜಿ. ಐಶ್ವರ್ಯ BE. LLB

ಪೀಪಲ್ ಮ್ಯಾನೇಜ್‌ಮೆಂಟ್ ಸರ್ವಿಸಸ್, ಆಡಳಿತ ಮತ್ತು ಸಿಬ್ಬಂದಿವರ್ಗ

ಸಾಯಿ ಮ್ಯಾನ್‌ಪೋರ್ಸ್ ಟ್ರೈನಿಂಗ್ ಫೌಂಡೇಶನ್, ಆಡಳಿತ ಮತ್ತು ಸಿಬ್ಬಂದಿವರ್ಗ

ನಂ.1017, 8ನೇ ಮುಖ್ಯರಸ್ತೆ, ಗೋಕುಲಂ, ಮೈಸೂರು - 570002

Mob: 9886739064, 9739065093

Email: peoplemanagementservice@gmail.com

Technotask Business Solutions Hiring

CSA, HR, TL, QA, Vacancies: 50+
Shift - General Shift, Languages : Any with English, Minimum Qualification : 12th, ITI, Diploma, Degree

Walk in Interview : 1st Floor, Samrat & Gagana Building, K Block, Kuvempu Nagara, Mysore 570023. Landmark: Near Indian Oil Petrol Pump

9620931727
7829208270

10ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿದೆ ನೀವು ತೋರಿದ ಪ್ರೀತಿ ಅಜರಾಮರ ನಿಮ್ಮ ದಿವ್ಯ ಆತ್ಮಕ್ಕೆ ಚಿರ ಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀಮತಿ ಮಹದೇವಮ್ಮ

ನಿಧನ: 3-7-2012

ದುಃಖತಪ್ತರು:

ಜಯ, ಸಂತೋಷ್ ಕುಮಾರ್, ಸುಮಿತ್ರ, ಕುಮಾರ, ಹೇಮಪ್ರಭ, ಶಮಂತ್, ಕುಟುಂಬವರ್ಗದವರು

ಮಹದೇಶ್ವರ ಬಡಾವಣೆ (ಮೈಸೂರು), ಮೊ: 9945973735

PROPERTY FOR SALE

30x40 & 40x60

Sites & House Available for Sale at Vijayanagar 1st, 2nd, 3rd & 4th Stage, Mysore

Contact : Empire Estate

96114 43083



ONLY ONE WAY TAXI CHARGE

MYSORE to BANGALORE City drop or Pick up

BANGALORE to MYSORE Airport drop or Pick up

Shakthi Nagar MYSURU

9880686345/ 9663362786

PROPERTY FOR SALE

30x40, 3 Floor, 4 Houses, Earn upto Rs.50,000/- Rent, Near JSS Hospital

Price: 1 Crore 95 Lakhs

9632749025

BUILDING CONSTRUCTION

Basic package Rs. 1599/- sqft

(Including Teakwood and Granite)

Call: 7676768868

ಬೇಕಾಗಿದ್ದಾರೆ

ಸಸ್ಯಹಾರಿ ಅಡುಗೆ ಮಾಡಲು ಕೆಲಸಗಾರರು ಬೇಕಾಗಿದ್ದಾರೆ ಗಂಡಸು ಅಥವಾ ಹೆಂಗಸು ಮನೆಯಲ್ಲಿ ಉಳಿಯಲು ಅವಕಾಶವಿದೆ. ರಾಮಕೃಷ್ಣನಗರ, ಮೈಸೂರು. ಸಂಪರ್ಕಿಸಿ

9840217808

WANTED

Required English Lecturer For a Reputed PU College & Clerk Cum Accountant For Reputed CBSE School

Contact :

9900298299 / 8762112253

FOR SALE

Two Bedroom Villas Starting @ Just 55 lakhs on Bogadi Road, 5 Kms from Ring Road



BOOKINGS OPEN

CALL: 99458 57017

REQUIRED

Swimming Coach and Receptionist

For a reputed swimming academy

Contact

8088392236

ಎರಡನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು

ಯತ್ವಿಕ್.ಆರ್



ಶುಭಕೋರುವವರು:
ತಂದೆ : ರಘುನಂದನ್.ಎನ್
ತಾಯಿ : ಕಾವ್ಯ .ಎಂ
ತಾತಂದಿರು, ಅಜ್ಜಿಯಂದಿರು, ಚಿಕ್ಕಪ್ಪಂದಿರು, ಚಿಕ್ಕಮ್ಮಂದಿರು, ಅತ್ತೆಯಂದಿರು, ಮಾವಂದಿರು, ದೊಡ್ಡಪ್ಪಂದಿರು, ದೊಡ್ಡಮ್ಮಂದಿರು, ಅಕ್ಕಂದಿರು, ಅಣ್ಣಂದಿರು ಹಾಗೂ ಬಂದುಮಿತ್ರರು ಕುಟುಂಬವರ್ಗದವರು

PRIME LOCATION HOUSE FOR RENT

Bannimantap, near LIC 5 BHK with Garage + Garden area. Suitable for Family/PG/Guest House

Call: 8884655366

BOOKINGS OPEN FOR

Construction of Brand New Architecture Designed Houses

MUDA APPROVED
20'x40'-29.5 Lakhs
30'x40'-42 Lakhs

Near St. Joseph's Central School, Hunsur Road, Mysore.

9740767576

2ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ಟಿ.ಕೆಂಪರಾಜು

ದುಃಖತಪ್ತರು: ಪತ್ನಿ ಮಂಜುಳ, ಮಗಳು ಸ್ವಾತಿ ಮಗ ಕಾರ್ತಿಕ್‌ಗೌಡ ಟಿ.ರವಿಗೌಡ, ಕಾವಲುಪಡೆ

ವೈಕುಂಠ ಸಮಾರಾಧನೆ ಮುತ್ತೈದೆ ಪೂಜೆ

ಆಹ್ವಾನ ಪತ್ರಿಕೆ



ಶ್ರೀಮತಿ ಎಂ.ಎನ್.ಇಂದ್ರಾಣಿ

ಇವರು ದಿ:21.06.2022ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ವೈಕುಂಟ ಸಮಾರಾಧನೆ ಮತ್ತು ಮುತ್ತೈದೆ ಪೂಜೆಯನ್ನು ದಿ:03.07.2022ನೇ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಧರ್ಮಪಾರಾಯಿಣಿ ಶ್ರೀಮತಿ ಆಲಮ್ಮನವರ ಛತ್ರ, ದಿವಾನ್ಸ್ ರಸ್ತೆ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು:

ಮಕ್ಕಳು ಸೊಸೆಯಂದಿರು ಹಾಗೂ ಕುಟುಂಬವರ್ಗದವರು ಮತ್ತು ಬಂಧು ಮಿತ್ರರು.

ಭೋಜನ: ಮಧ್ಯಾಹ್ನ 1.00 ಗಂಟೆಗೆ

Failed in 1st PUC or Diploma ?

Don't worry Join Direct 2nd PUC in Accurate Academy

Biggest Campus & 100% Assured Results

Branch 1: Near City Bus Stand, Mysore
Branch 2: Near Apollo Hospital signal, Kuvempunagar, Mysore.

Call: 7899907050

ನೇರ II PUC!!

I PUC ಫೇಲಾಗಿದೆಯೇ? ಚಿಂತೆ ಬಿಡಿ. ನಾವು ನಿಮ್ಮನ್ನು ನೇರವಾಗಿ II PUC ಗೆ ಕೂರಿಸಿ, ಮುದ್ರಿತ ನೋಟ್‌ಗಳೊಂದಿಗೆ ಪರಿಣಾಮಕಾರಿಯಾದ ಕೋಚಿಂಗ್ ನೀಡಿ, ಪರೀಕ್ಷೆಗೆ ಉತ್ತಮವಾಗಿ ಅಣಿಗೊಳಿಸುತ್ತೇವೆ. PG ಸಹ ಲಭ್ಯ.

ಜ್ಞಾನವರ್ಧಿನಿ ಸೆಂಟರ್

ಮರಿಮಲ್ಲಪ್ಪ ಕಾಲೇಜಿನ ಎದುರು

9844355941 / 9482674037

www.direct2puc.com

Sri Bhagwan Silks Matching Center

We are specialists in Ready Made Blouse Designer Blouse Partywear Blouse Shapewear and Materials also Available

K R Circle, Mysore-570 001

ರತ್ನ ಪ್ಯಾರ ಮೆಡಿಕಲ್ ಕಾಲೇಜ್

ಕುವೆಂಪುನಗರ, ಮೈಸೂರು

ಪ್ರವೇಶ ತೆರೆದಿದೆ

- ಡಿಪ್ಲೊಮ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
- ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.VOC)
- ಬ್ಯಾಚುಲರ್ಸ್ ಇನ್ ಕಾರ್ಡಿಯಕ್ ಕೇರ್ ಟೆಕ್ನಾಲಜಿ (B.VOC)

SSLC / PUC Pass

9886654463

NEW HOUSE FOR SALE

20'x30', 3 BHK fully furnished house, near Vidya Vikas College, Vasantha Nagar, Mysore.

Price 75 lakhs

Slightly Negotiable

Mob: 88675-76767

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರಾದ ಶ್ರೀ ಚಂದ್ರ. ಎನ್ (ಆಧಾರ್ ನಂ.9836 7707 9418), ಬಿನ್ ಶ್ರೀ ನರಸೇಗೌಡ ಸುಮಾರು 32 ವರ್ಷ, ನಂ.707/5, 4ನೇ ಕ್ರಾಸ್, ಮಂಚೇಗೌಡನಕೊಪ್ಪಲು ಗ್ರಾಮ, ಮೈಸೂರು ನಗರ – 570017, ಇವರ ಇರಾದೆ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುತ್ತಿರುವ ವಿಷಯವೇನೆಂದರೆ:–

ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತನ್ನು ಶ್ರೀಮತಿ ಸುಶೀಲ.ಎಸ್ (ಆಧಾರ್ ನಂ.2487 9336 1347), ಕೋಂ ಎನ್.ವಿದ್ಯಾಶಂಕರ್, ಸುಮಾರು 42 ವರ್ಷ, ನಂ.285, ಈಶ್ವರ ದೇವಸ್ಥಾನದ ರಸ್ತೆ, ನಾಗನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಇವರಿಂದ ಅನುಸೂಚಿ ಸ್ವತ್ತಿನಲ್ಲಿ ವಸತಿ ಬಡಾವಣೆ ನಿರ್ಮಿಸಲು ಇಚ್ಚಿಸಿ ಅವರೊಂದಿಗೆ ದಿನಾಂಕ: 25–05–2022 ರಂದು ಒಡಂಬಡಿಕೆ ಪತ್ರವನ್ನು ಮಾಡಿಕೊಂಡಿದ್ದು, ಅವರೊಂದಿಗೆ ಅನುಸೂಚಿ ಸ್ವತ್ತಿನ ಸಂಬಂಧವಾಗಿ ಯಾರೂ ಯಾವುದೇ ರೀತಿ ವ್ಯವಹಾರ ಮಾಡಬಾರದೆಂದೂ, ಇದಕ್ಕೂ ಮೀರಿ ಯಾರಾದರೂ ವ್ಯವಹರಿಸಿದಲ್ಲಿ ಅದರಿಂದ ಉಂಟಾಗತಕ್ಕ ಯಾವುದೇ ಖರ್ಚು, ವೆಚ್ಚ ಮತ್ತು ನಷ್ಟಗಳಿಗೆ ನನ್ನ ಕಕ್ಷಿದಾರರು ಜವಾಬ್ದಾರರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಯಲಚಹಳ್ಳಿ ಗ್ರಾಮದ ಸರ್ವೆ ನಂ.98/2 ರಲ್ಲಿ ಇರುವ 25 (ಇಪ್ಪತ್ತೈದು) ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಲಾ ಸ ನಂ.99ರ ಜಮೀನು, ಪಶ್ಚಿಮಕ್ಕೆ : ಕೆ ಹೆಚ್ ಬಿ ಸ್ವತ್ತು, ಉತ್ತರಕ್ಕೆ: ಭಾಗ್ಯಮ್ಮರವರ ಹಿಸ್ಸೆ ಜಮೀನು, ದಕ್ಷಿಣಕ್ಕೆ : ರತ್ನಮ್ಮರವರ ಹಿಸ್ಸೆ ಜಮೀನು.

ಸಹಿ/– **ಹೆಚ್.ಎಂ.ಸುಧಾಕರ**
ವಕೀಲರು, ಕರ್ನಾಟಕ 51/97,
ನಂ. 23, ಪೆಟ್ರೋಲ್ ಬಂಕ್ ಹಿಂಭಾಗ,
ನಿವೇದಿತನಗರ, ಮೈಸೂರು.
ದೂರವಾಣಿ: 9448558136

ದಿನಾಂಕ: 30/06/2022, ಮೈಸೂರು

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005


ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–3:386:2022–23 ದಿನಾಂಕ: 24–05–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೋಕು, ಇಲವಾಲ ಹೋಬಳಿ, ಕೆ.ಹೆಮ್ಮನಹಳ್ಳಿ ಗ್ರಾಮದ ಸರ್ವೆ ನಂ. 154/1ರ 00–39 ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಕೆ.ಸಿ.ಸ್ಟ್ಯಾನ್ಲಿ ಬಿನ್ ಲೇಟ್ ಕೆ.ಓ.ಚಿಕ್ಕಪ್ಪನ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ " **ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ**". ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ

KEY PLAN



land in Question

ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

NISARGA PARADISE DEVELOPED PLOTS



FULLY DEVELOPED
READY FOR REGISTRATION

BANK LOAN Available

HDFC BANK
LIC HFL
ICICI Bank

HURRY!! FEW LEFT

EXCITING OFFERS CALL US

HYLAND PROPERTIES

Hunsur-Mysore Highway, Mysuru

9513301855, 9513301854

ರತ್ನ ಕಾಲೇಜ್ ಆಫ್ ಬುಸಿನೆಸ್ ಮ್ಯಾನೇಜ್‌ಮೆಂಟ್

ಬಂದಂತಮ್ಮ ಕಾಂಪ್ಲೆಕ್ಸ್, ನ್ಯೂ ಕಾಂತರಾಜ ಅರಸ್ ರಸ್ತೆ, ಅಕ್ಷಯ ಬಂಡಾರ, ಕುವೆಂಪುನಗರ, ಮೈಸೂರು.

First Grade Degree College

ಪ್ರವೇಶ ತೆರೆದಿದೆ 2022–23

- ಬಿ.ಕಾಂ (ಡಿಜಿಟಲ್ ಮಾರ್ಕೆಟಿಂಗ್) B.Com (Digital Marketing)
- ಬಿ.ಕಾಂ (ಬ್ಯಾಂಕಿಂಗ್) B.Com (Banking)
- ಬಿ.ಕಾಂ (ಹೋಟೆಲ್ ಮ್ಯಾನೇಜ್‌ಮೆಂಟ್) B.Com (Hotel Management)

Eligibility : PUC Pass

*Placement will be Provided

9945738573
9886654463

ಮೈಸೂರು ಮಿತ್ರ

ಜಾಹೀರಾತಿಗಾಗಿ ಸಂಪರ್ಕಿಸಿ:

Ph: 0821-2496522 / 23

Email: ad@mysurumithra.com

ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರಾದ ಶ್ರೀ ಚಂದ್ರ. ಎನ್ (ಆಧಾರ್ ನಂ.9836 7707 9418), ಬಿನ್ ಶ್ರೀ ನರಸೇಗೌಡ ಸುಮಾರು 32 ವರ್ಷ, ನಂ.707/5, 4ನೇ ಕ್ರಾಸ್, ಮಂಚೇಗೌಡನಕೊಪ್ಪಲು ಗ್ರಾಮ, ಮೈಸೂರು ನಗರ – 570017, ಇವರ ಇರಾದೆ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುತ್ತಿರುವ ವಿಷಯವೇನೆಂದರೆ:–

ಈ ಕೆಳಗೆ ಅನುಸೂಚಿಯಲ್ಲಿ ವಿವರಿಸಿರುವ ಸ್ವತ್ತನ್ನು ಶ್ರೀ ಪಾಪೇಗೌಡ (ಆಧಾರ್ ನಂ. 2626 9461 9794), ಬಿನ್ ಸಿದ್ದೇಗೌಡ, ಸುಮಾರು 49 ವರ್ಷ, ನಂ.126, ಯಲಚಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರಿಂದ ಅನುಸೂಚಿ ಸ್ವತ್ತಿನಲ್ಲಿ ವಸತಿ ಬಡಾವಣೆ ನಿರ್ಮಿಸಲು ಇಚ್ಚಿಸಿ ಅವರೊಂದಿಗೆ ದಿನಾಂಕ: 13–05–2022 ರಂದು ಒಡಂಬಡಿಕೆ ಪತ್ರವನ್ನು ಮಾಡಿಕೊಂಡಿದ್ದು, ಅವರೊಂದಿಗೆ ಅನುಸೂಚಿ ಸ್ವತ್ತಿನ ಸಂಬಂಧವಾಗಿ ಯಾರೂ ಯಾವುದೇ ರೀತಿ ವ್ಯವಹಾರ ಮಾಡಬಾರದೆಂದೂ, ಇದಕ್ಕೂ ಮೀರಿ ಯಾರಾದರೂ ವ್ಯವಹರಿಸಿದಲ್ಲಿ ಅದರಿಂದ ಉಂಟಾಗತಕ್ಕ ಯಾವುದೇ ಖರ್ಚು, ವೆಚ್ಚ ಮತ್ತು ನಷ್ಟಗಳಿಗೆ ನನ್ನ ಕಕ್ಷಿದಾರರು ಜವಾಬ್ದಾರರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಯಲಚಹಳ್ಳಿ ಗ್ರಾಮದ ಸರ್ವೆ ನಂ. 97/1 ರಲ್ಲಿ ಇರುವ 29 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ : ಲಾ ಹಿ ನಂ.92ರ ಜಮೀನು, ಪಶ್ಚಿಮಕ್ಕೆ : ಸ್ವಾಮಿಗೌಡರ ಹಿಸ್ಸೆ ಜಮೀನು, ಉತ್ತರಕ್ಕೆ : ಲಾ ಸ ನಂ.99 ರ ಜಮೀನು, ದಕ್ಷಿಣಕ್ಕೆ : ಲಾ ಸ ನಂ. 96/1 ರ ಜಮೀನು.

ಐಟಂ ನಂ. 02:– ಐಟಂ ನಂ.1:– ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಯಲಚಹಳ್ಳಿ ಗ್ರಾಮದ ಸರ್ವೆ ನಂ. 98/4 ರಲ್ಲಿ ಇರುವ 23 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ : ಲಾ ಹಿ ನಂ. 99 (ಸಿದ್ದಮ್ಮನವರ) ರ ಜಮೀನು, ಪಶ್ಚಿಮಕ್ಕೆ : ಕೆ ಹೆಚ್ ಬಿ ಸ್ವತ್ತು, ಉತ್ತರಕ್ಕೆ : ರತ್ನಮ್ಮರವರ ಹಿಸ್ಸೆ ಜಮೀನು, ದಕ್ಷಿಣಕ್ಕೆ: ಸ್ವಾಮೀಗೌಡರ ಹಿಸ್ಸೆ ಜಮೀನು.

ಸಹಿ/– **ಹೆಚ್.ಎಂ.ಸುಧಾಕರ**
ವಕೀಲರು, ಕರ್ನಾಟಕ 51/97, ನಂ. 23, ಪೆಟ್ರೋಲ್ ಬಂಕ್ ಹಿಂಭಾಗ, ನಿವೇದಿತನಗರ, ಮೈಸೂರು.
ದೂರವಾಣಿ: 9448558136

ದಿನಾಂಕ:30/06/2022, ಮೈಸೂರು

ಪುರಸಭಾ ಕಾರ್ಯಾಲಯ, ಬನ್ನೂರು

ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08227–276058

ಸಂಖ್ಯೆ:ಪುಸಬ/ಕಿಅ/ಟೆಂಡರ್(01)2022–23 ದಿನಾಂಕ:30.06.2022

ಟೆಂಡರ್ ಪ್ರಕಟಣೆ

ಇ–ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ ಬನ್ನೂರು ಪುರಸಭಾ ವ್ಯಾಪ್ತಿಯಲ್ಲಿ 2015–16 ರಿಂದ 2019–20ನೇ ಸಾಲಿನ 14ನೇ ಹಣಕಾಸು ಯೋಜನೆಯ ಸಾಮಾನ್ಯ ಮೂಲ ಅನುದಾನ(ಉಳಿತಾಯ) ಮತ್ತು (ಪ್ರೋತ್ಸಾಹ ಧನ), 2020–21ನೇ ಸಾಲಿನ 15ನೇ ಹಣಕಾಸು ಯೋಜನೆಯ ಸಾಮಾನ್ಯ ಮೂಲ ಅನುದಾನ(ಉಳಿತಾಯ), 2019–20ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಶೇ24.10(ಉಳಿತಾಯ), 2016–17ನೇ ಸಾಲಿನ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯ ಅನುದಾನ (ಉಳಿತಾಯ), 2021–22 ಮತ್ತು 2022–23ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರು ಯೋಜನೆ ಮತ್ತು 2022–23ನೇ ಸಾಲಿನ 15ನೇ ಹಣಕಾಸು ಯೋಜನೆ (ನಿರ್ಬಂದಿತ ಮತ್ತು ಅನಿರ್ಬಂದಿತ ಅನುದಾನ)ಗಳಡಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000 ರಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-1 & KG-1 ಸೂಚನೆಗಳು ಹಾಗೂ ನಿಬಂಧನೆಗೊಳಪಟ್ಟಂತೆ ಅರ್ಹ ದರ್ಜೆಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಸಿವಿಲ್ ಗುತ್ತಿಗೆದಾರರು, ಎಲೆಕ್ಟ್ರಿಕಲ್ ಗುತ್ತಿಗೆದಾರರು(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಾತಿಗೊಂಡಂತೆ) ಮತ್ತು ಅನುಮೋದಿತ ಸರಬರಾಜುದಾರರುಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ವೆಂಟ್‌ನಲ್ಲಿ ಟೆಂಡರ್‌ನ್ನು ಸಲ್ಲಿಸಲು **ದಿನಾಂಕ: 16–07–2022 ರ ಸಂಜೆ 4:00 ಗಂಟೆಗೆ** ಕೊನೆಗೊಳಿಸಲಾಗಿದೆ ಹಾಗೂ ಟೆಂಡರ್‌ನ್ನು **ದಿನಾಂಕ: 18–07–2022 ರ ಸಂಜೆ 4:00 ಗಂಟೆಗೆ** ತೆರೆಯಲಾಗುವುದು ದಿನಾಂಕ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಿಂದ ಬದಲಾವಣೆಯಾದಲ್ಲಿ ಪತ್ರಿಕಾ ಪ್ರಕಟಣೆಯನ್ನು ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗಾಗಿ ಪುರಸಭೆಯ ವೆಬ್‌ಸೈಟ್ **www.bannurtown.mrc.gov.in**ನಲ್ಲಿ ಮತ್ತು ಕಛೇರಿಯ ಪ್ರಕಟಣಾ ಫಲಕವನ್ನು ನೋಡಬಹುದಾಗಿದೆ. ಟೆಂಡರ್‌ನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಪುರಸಭೆ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಪುರಸಭೆ ಬನ್ನೂರು ಇಲ್ಲಿಗೆ ಸಂಪರ್ಕಿಸಲು ಕೋರಿದೆ.

ಸಹಿ/–	ಸಹಿ/–	ಸಹಿ/–
(ಶ್ರೀಮತಿ ಭಾಗ್ಯಶ್ರೀ ಕೃಷ್ಣ)	(ಶ್ರೀಮತಿ ಭಾಗ್ಯ ಲೋಕೇಶ್)	(ಶ್ರೀ.ಮಹದೇವ.ಎಂ.ಎಸ್ ಕೆ.ಎಂ.ಎ.ಎಸ್)
ಅಧ್ಯಕ್ಷರು, ಪುರಸಭೆ, ಬನ್ನೂರು	ಉಪಾಧ್ಯಕ್ಷರು, ಪುರಸಭೆ, ಬನ್ನೂರು	ಮುಖ್ಯಾಧಿಕಾರಿ, ಪುರಸಭೆ, ಬನ್ನೂರು

DIPR/MYS/KAVITA/198/22-23

VIDYA VIKAS FIRST GRADE COLLEGE, MYSURU

VIDYA VIKAS EDUCATIONAL TRUST (R) MYSURU

Affiliated to University of Mysore

www.vidyavikasfirstgradecollege.com

ADMISSION NOTIFICATION - 2022-23 COURSES OFFERED

- BACHELOR OF COMPUTER APPLICATION (BCA)
- BACHELOR OF COMMERCE (B.COM)
- BACHELOR OF BUSINESS ADMINISTRATION (BBA)
- BACHELOR OF SCIENCE (B.SC)
- BACHELOR OF ARTS (BA)

Eligibility for Admission : as per University of Mysore Norms

Campus address:
127-128, Mysuru-Bannur Road, Alanahalli, Alanahalli Post, Mysuru - 570 028.
Tel: (0821) 2471232, 2471635

CONTACT
+91 95388 91404
E-mail : info.vvet@gmail.com

www.vidyavikasfirstgradecollege.com

*Conditions Apply

SRI LAKSHMI HAYAGREEVA EDUCATIONAL INSTITUTIONS

CA-16, III Stage, Kanakadasanagar, Dattagalli, Mysuru-33.

HURRY UP

Hearty congratulations to our 2022 distinction students

SCIENCE STREAM : DISHA. L
COMMERCE STREAM : ANNAPOORNA. V

VISIT THE COLLEGE FOR ADMISSIONS TO

PUC	SCIENCE	: PCMB, PCME, PCMCs
	COMMERCE	: BASCs, BASE
DEGREE		: B.Com, BBA
		B.Sc - PCM, PME, EMCs

ADMISSIONS FREE FOR 10 STUDENTS IN PU SCIENCE STREAM*

on first come first basis, college terms and conditions apply

For more details contact us: 0821-2428484, 9980569167